

ಪುಸ್ತಕೋದ್ಯಮದ ಬಿಕ್ಕಟ್ಟು

ಲಕ್ಷ್ಮಣ ಕೊಡಸೆ | ಲಕ್ಷ್ಮಣರೇಖೆ

ವಿದ್ಯಮಾನ

ಕ.ರ.ವೇ ಸಂಘಟನೆಯ ಸಂಸ್ಥಾಪಕರು



ಜಾಣಗೆರೆ ವೆಂಕಟರಾಮಯ್ಯ

ಖರ್ಚಿ ಕದನಕ್ಕೆ ಖರ್ಗೆ ಕೊಟ್ಟ ತಿರುವು

ಆರ್.ಟಿ.ವಿಠ್ಠಲಮೂರ್ತಿ




ಕರವೇ ವಾಹಿನಿ

ಸತ್ಯ–ನ್ಯಾಯ–ಧರ್ಮಕ್ಕಾಗಿ ಸ್ವಾಭಿಮಾನಿ ಸಮೂಹ

# ಕರ್ನಾಟಕ ರಕ್ಷಣಾ ವೇದಿಕೆ

ಕನ್ನಡಿಗರ ಹೋರಾಟಕ್ಕೊಂದು ಕೆಚ್ಚೆದೆಯ ಮಾಸಪತ್ರಿಕೆ

₹15

ಕನ್ನಡ ಕನ್ನಡಿಗ ಕರ್ನಾಟಕ ಸೇವೆಗಾಗಿ ನಾವು

ಸಂಪುಟ: 18 | ಸಂಚಿಕೆ: 07 | KARNATAKA RAKSHANAA VEDIKE KANNADA MONTHLY | ಜನವರಿ 2026 | ಪುಟ: 40


2026

ಹೊಸ ವರ್ಷದ ಹಾರ್ದಿಕ ಶುಭಾಶಯಗಳು



ಆರೂವರೆ ದಶಕ ಕಳೆದಿದ್ದರೂ ಕನ್ನಡ-ಕನ್ನಡಿಗ-ಕರ್ನಾಟಕಕ್ಕೆ ಪೂರ್ಣ ಪ್ರಮಾಣದ ನ್ಯಾಯ ಸಿಕ್ಕಿಲ್ಲ. ಅನ್ಯಾಯವನ್ನೇ ಅನುಭವಿಸುವ ಸ್ಥಿತಿ ನಮ್ಮದು!

# ಕನ್ನಡಿಗರಿಗೆ ಸದಾ ಅನ್ಯಾಯ!

ತೋರಿಕೆ ಅಭಿಮಾನದಿಂದ ಪ್ರಯೋಜನವಿಲ್ಲ!

ಜಾಣಗೆರೆ ವೆಂಕಟರಾಮಯ್ಯ

## ಮತಾಂಧತೆಗೆ ಕೊನೆ ಎಂದು?

## ಜೆಪಿ ಬದುಕಿದ್ದರೆ ಮತ್ತೊಂದು ಹೋರಾಟಕ್ಕೆ ಸಿದ್ಧರಾಗುತ್ತಿದ್ದರು

# ಶ್ರೀನಿವಾಸ ಆಸ್ಪತ್ರೆ

24 ಗಂಟೆ ನಿಗಾ ಘಟಕ












## FACILITIES

- MEDICINE
- LAPROSCOPE AND GENERAL
- SURGERY
- OBG
- PAEDIATRICS
- ORTHOPAEDICS
- NEUROLOGY
- NEURO SURGERY
- CARDIOLOGY
- UROLOGY
- NEPHROLOGY
- RADIOLOGY
- PATHOLOGY
- PSYCHIATRY
- E N T
- GASTROENTEROLOGY
- PLASTIC SURGERY
- ONCOLOGY
- ULTRASONOGAPHY
- COMPUTERISED X-RAY
- OPTHALMALOGY
- PHYSIOTHERAPY
- DIETICIAN SERVICES

## 24 HOURS SERVICE

- Accident & Trauma
- Diagnostic Laboratory
- Burns Unit
- MICU
- NICU & PICU
- Dialysis
- Pharmacy
- Ambulance

**SREENIVASA HOSPITAL** 24 hours surgical, medical, maternity, ICU and NICU care

# 12, Park Road, (Near Chicklalbagh), Bengaluru-560053,
Ph: 41221024 22879474 E-mail: sreenivasahospital@yahoo.com

ಕರವೇ ವಾಹಿನಿ

ಜನವರಿ 2026
ಸಂಪುಟ: 18, ಸಂಚಿಕೆ: 07
ರೂ. 15/-

ಸಂಪಾದಕೀಯ ಮಂಡಳಿ

ಗೌರವ ಸಂಪಾದಕರು
ಜಾಣಗೆರೆ ವೆಂಕಟರಾಮಯ್ಯ
ಎಚ್. ಶಿವರಾಮೇಗೌಡ
ಎ. ಬಾಲಚಂದ್ರ

ಗೌರವ ಸಲಹೆಗಾರರು
ಲಕ್ಷ್ಮಣ ಕೊಡಸೆ
ಆರ್.ಟಿ.ವಿಠ್ಠಲಮೂರ್ತಿ

ಸಂಪಾದಕ
ಕ.ನ. ಚಂದ್ರಶೇಖರ

ವ್ಯವಸ್ಥಾಪಕ ಸಂಪಾದಕಿ
ಪ್ರತಿಮಾ

ಕಾರ್ಯನಿರ್ವಾಹಕ ಸಂಪಾದಕರು
ಎಸ್.ಪ್ರಕಾಶ್ ಬಾಬು
ಶ್ರೀಪತಿ ಗೊಡಗಿ
ಆರುಡೋ ಗಣೇಶ

ಸಂಪಾದಕೀಯ ಮಂಡಳಿ
ಕೆ.ಎ.ರಾಮಕೃಷ್ಣ ಮೂರ್ತಿ
ಖಂಡಪರಶು

ಕಾನೂನು ಸಲಹೆ
ಎಂ. ರಕ್ಷಿತ್ ಗೌಡ

ಜಾಹೀರಾತು/ಪ್ರಸರಣ ವ್ಯವಸ್ಥಾಪಕ
ವಿ.ಆರ್.ರಾಧಾಕೃಷ್ಣ

ಶ್ರೀನಂದಿ
ಸಂಖ್ಯೆ 31, 9ನೇ ಅಡ್ಡರಸ್ತೆ,
ಈಜುಕೊಳ ಬಡಾವಣೆ, ಮಲ್ಲೇಶ್ವರಂ,
ಬೆಂಗಳೂರು-560003

## ಒಳ ಪುಟಗಳಲ್ಲಿ...

| | |
|---|---|
| ತೋರಿಕೆ ಅಭಿಮಾನದಿಂದ ಪ್ರಯೋಜನವಿಲ್ಲ! | 4 |
| ಮತಾಂಧತೆಗೆ ಕೊನೆ ಎಂದು? | 5 |
| ಹೊಸ ವರ್ಷದ ಹಾರ್ದಿಕ ಶುಭಾಶಯಗಳು | 6 |
| ಖರ್ಚು ಕದನಕ್ಕೆ ಖರ್ಗೆ ಕೊಟ್ಟ ತಿರುವು | 7 |
| ಪುಸ್ತಕೋದ್ಯಮದ ಬಿಕ್ಕಟ್ಟು | 8 |
| ಡಾ.ರಾಜ್ ಕುರಿತು ಪಿಎಚ್.ಡಿ: ಭಾಗ್ಯಶ್ರೀ ವಿರಕ್ತಮಠ | 9 |
| ರೈತ – ಸೈನಿಕ ಈ ದೇಶದ ಬೆನ್ನೆಲುಬು | 10 |
| ಜೆಪಿ ಬದುಕಿದ್ದರೆ ಮತ್ತೊಂದು ಹೋರಾಟಕ್ಕೆ ಸಿದ್ಧರಾಗುತ್ತಿದ್ದರು | 12 |
| ಅವರಿಗೆ ಪ್ರೇರಕ ಶಕ್ತಿ ಆಗಿದ್ದವರು ತಂದೆ ಕುವೆಂಪು | 14 |
| ಮತಾಂಧತೆ ಮತ್ತು ಮೂರ್ಖತನ | 17 |
| ಉರ್ದು ನಾಮಫಲಕಕ್ಕೆ ಮಸಿ ಬಳಿದ ಧೀರ ಕನ್ನಡಿಗರು | 20 |
| ಮದ್ಯ ವ್ಯಸನಕ್ಕೆ ಕೋಟ್ಯಾಂತರ ಬಲಿ | 22 |

ವಿದ್ಯಮಾನ



ಜಾಣಗೆರೆ
ವೆಂಕಟರಾಮಯ್ಯ

ಕರವೇ ಸಂಘಟನೆ ಸಂಸ್ಥಾಪಕರು ಹಾಗೂ ಲಂಕೇಶ್, ನಮ್ಮನಾಡು, ರೂಪಲೇಖಾ, ರೂಪಶಿಲ್ಪಿ ಪತ್ರಿಕೆಗಳಲ್ಲಿ ಸಹಾಯಕ ಸಂಪಾದಕರಾಗಿ ಅಭಿಮಾನಿ, ಈ ಸಂಜೆ, ಅರಗಿಣಿ, ಮಾರ್ದನಿ, ಕರುನಾಡ ಸಂಜೆ, ಜಾಣಗೆರೆ ಪತ್ರಿಕೆಯ ಸಂಪಾದಕ ಸೇವೆ ಸಲ್ಲಿಸಿದವರು.

**ಆರೂವರೆ ದಶಕ ಕಳೆದಿದ್ದರೂ ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಪೂರ್ಣ ಪ್ರಮಾಣದ ನ್ಯಾಯ ಸಿಕ್ಕಿರುವುದಿಲ್ಲ. ಪರಮ ಅನ್ಯಾಯವನ್ನೇ ಅನುಭವಿಸುವ ಸ್ಥಿತಿ ಉಳಿದುಕೊಂಡಿದೆ. ಕನ್ನಡವನ್ನು ಎಲ್ಲ ಹಂತದಲ್ಲೂ ಬಳಸುವಲ್ಲಿ ಆಳುವ ಸರ್ಕಾರಗಳು ವಿಫಲಗೊಂಡಿವೆ. ರಾಜ್ಯ ಸರ್ಕಾರಗಳದ್ದೆ ಈ ಕತೆಯಾದರೆ, ಮೊದಲಿನಿಂದಲೂ ಕನ್ನಡನಾಡನ್ನು ಕೇವಲವಾಗಿ ಕಾಣುತ್ತಿರುವ ದೆಹಲಿ ದೊರೆಗಳು ಈ ಹೊತ್ತಿಗೂ ಆ ಚಾಳಿಯನ್ನು ಮುಂದುವರಿಸಿದ್ದಾರೆ.**

# ತೋರಿಕೆ ಅಭಿಮಾನದಿಂದ ಪ್ರಯೋಜನವಿಲ್ಲ!

‘ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ!’ ಎಂಬ ರಾಷ್ಟ್ರಕವಿ ಕುವೆಂಪು ಅವರ ಕರೆಯಲ್ಲಿ ಎದೆಯಾಳದ ಕೂಗು ಪ್ರತಿಧ್ವನಿಸುತ್ತದೆ. ಅದರ ಅರ್ಥವ್ಯಾಪ್ತಿ ವಿಶಾಲವಾದುದು. ಅಭಿಮಾನ ಶೂನ್ಯ ಕನ್ನಡಿಗರನ್ನು ಬಡಿದೆಚ್ಚರಿಸುವ ಅಸ್ತ್ರವದು. ಕಳೆದ ಶತಮಾನದ ನಡುಭಾಗದಲ್ಲಿ ಸತ್ತಂತೆ ಮಲಗಿದ್ದ, ನಟಿಸುತ್ತಿದ್ದ ಕನ್ನಡಿಗರು ತಮ್ಮದೇ ಆದ ಕನ್ನಡ ನಾಡನ್ನು ಪಡೆಯುವುದು ಸುಲಭದ ಮಾತಾಗಿರಲಿಲ್ಲ. ನಾಡು–ನುಡಿ ಪ್ರೇಮವನ್ನು ಅಂತರಾಳದಲ್ಲಿ ತುಂಬಿಕೊಂಡು ತಮ್ಮ ಕಾವ್ಯ ಕೃತಿಗಳಲ್ಲಿ ಬಡಿದೆಬ್ಬಿಸಿದರು ಕವಿ ಪುಂಗವರು. ಗೋವಿಂದ ಪೈ, ಬಿಎಂಶ್ರೀ, ಹುಯಿಲಗೋಳ ನಾರಾಯಣರಾವ್, ಕುವೆಂಪು, ಆಲೂರು ವೆಂಕಟರಾಯ ಮುಂತಾದವರು ನಡೆಸಿದ ನಾಡಾಭಿಮಾನ ತುಂಬಿದ ಕಾವ್ಯ ಕೃಷಿ ಜನರನ್ನು ಜಾಗೃತಿಗೊಳಿಸಲು ನೆರವಾಗಿತ್ತು. ಅಷ್ಟೆ ಅಲ್ಲ, ಆಳುವ ದೊರೆಗಳನ್ನು ಎಚ್ಚರಿಸಿದ್ದ ಗೀತೆಗಳೂ ಅವಾಗಿದ್ದವು.



ಅಂತಹ ಕವಿಗಳ ಎದೆಯಲ್ಲಿ ಕಾಳಜಿ ತುಂಬಿದ ಅಭಿಮಾನವಿತ್ತು. ಇಲ್ಲದಿದ್ದರೆ ಕನ್ನಡಿಗರು ಹೋರಾಟದ ಸಾಗರಕ್ಕೆ ಸೆಟೆದು ನಿಲ್ಲುವಂತೆ ರಚಿಸಲಾಗುತ್ತಿರಲಿಲ್ಲ. ಆ ಹೋರಾಟವಿಲ್ಲದೆ ಕನ್ನಡ ನಾಡಿನ ಏಕೀಕರಣವಾಗುತ್ತಿರಲಿಲ್ಲ. ಹಾಗೇ ಏಕೀಕರಣವಾದ ನಾಡಿನಲ್ಲಿ ಕನ್ನಡ–ಕನ್ನಡಿಗರ ಧ್ವನಿಯೆ ಕುಗ್ಗಿದಂತಾಗಿದ್ದಾಗ, ಅದರ ವಿರುದ್ಧ ದಿಟ್ಟತನದ ಕನ್ನಡ ಚಳುವಳಿಯೂ ಪ್ರಾರಂಭವಾಗುತ್ತಿರಲಿಲ್ಲ ಎಂಬ ಸತ್ಯವನ್ನು ಕನ್ನಡಿಗರು ಮತ್ತು ಇಂದಿನ ನಾಡಪರ ಹೋರಾಟಗಾರರು ಮರೆತು ಕೂರಬಾರದು. 1960ರ ದಶಕದ ಬೆಂಗಳೂರಿನ ಕತೆಯನ್ನು ನೆನೆಸಿಕೊಂಡರೆ ಇಂದಿಗೂ ಭಯಾತಂಕಗಳು ಕಾಡುತ್ತವೆ.

ರಾಜಧಾನಿ ಬೆಂಗಳೂರಲ್ಲೆ ಕನ್ನಡಿಗರು ಅಲ್ಪಸಂಖ್ಯಾತರಷ್ಟೆ ಅಲ್ಲ; ಅಸಹಾಯಕತೆಗೆ ದೂಡಲ್ಪಟ್ಟಿದ್ದರು. ಬಹುತೇಕ ಕೇಂದ್ರೋದ್ಯಮಗಳು, ಕೇಂದ್ರ ಸರ್ಕಾರಿ ಇಲಾಖೆಗಳು, ರೈಲ್ವೆ ಇಲಾಖೆಗಳಲ್ಲಿ ಕನ್ನಡಿಗರಿಗೆ ಶೇ. 10ರಷ್ಟು ಉದ್ಯೋಗಗಳೂ ಸಿಕ್ಕಿರಲಿಲ್ಲ. ರಾಜ್ಯ ಸರ್ಕಾರದ ಕೆಲವಾರು ಇಲಾಖೆಗಳಲ್ಲಿಯೂ ಪರಭಾಷಿಕರ ಪಾರುಪತ್ಯವೇ ನಡದಿತ್ತು. ಖಾಸಗಿ ವಲಯಗಳಲ್ಲೂ ತಮಿಳು–ತೆಲುಗು–ಮಲೆಯಾಳಿಗಳದ್ದೆ ಮೇಲುಗೈಯಾಗಿತ್ತು. ವ್ಯಾಪಾರ–ವ್ಯವಹಾರಗಳಲ್ಲೂ ಅವರೇ ತುಂಬಿದ್ದರು. ಮನೆಮಠ–ಆಸ್ತಿಪಾಸ್ತಿಗಳು ಹೆಚ್ಚಾಗಿ ಅವರದೇ ಆಗಿದ್ದವು. ಬೆಂಗಳೂರಿನ ಬಹುಪಾಲು ಚಿತ್ರಮಂದಿರಗಳಲ್ಲಿ ತಮಿಳು–ತೆಲುಗು–ಹಿಂದಿ–ಇಂಗ್ಲಿಷ್ ಸಿನಿಮಾಗಳೇ ಪ್ರದರ್ಶನಗೊಳ್ಳುತ್ತಿದ್ದವು. ಒಂದೊಂದು ಬಡಾವಣೆ–ಪ್ರದೇಶಗಳಲ್ಲಿ ಪರಭಾಷಿಕರೇ ಹೆಚ್ಚಿರುತಿದ್ದರು. ನಗರದ ಹೃದಯ ಭಾಗವಾಗಿದ್ದ ಕೆಂಪೇಗೌಡ ವೃತ್ತ, ಗಾಂಧಿನಗರ, ಮೈಸೂರು ಬ್ಯಾಂಕ್, ಚಿಕ್ಕಪೇಟೆ–ಬಳೇಪೇಟೆ–ಕಾಟನ್‌ಪೇಟೆ–ಕಬ್ಬನ್ ಪೇಟೆಗಳೂ ಪರಭಾಷಿಕರ ತಾಣವಾಗಿದ್ದವು.

28ನೇ ಪುಟಕ್ಕೆ

## ಕನ್ನಡ ಕಹಳೆ



ಕ.ನ. ಚಂದ್ರಶೇಖರ

**ದೇಶ,ಭಾಷೆ, ಜಾತಿ ಮತ್ತು ಧರ್ಮಗಳಂತಹ ಸೂಕ್ಷ್ಮ ವಿಚಾರಗಳನ್ನು ಇಂದು ಸ್ವಾರ್ಥಿಗಳು ದುರುಪಯೋಗ ಮಾಡಿಕೊಂಡು ಗುಂಪು ಹಿತಾಸಕ್ತಿಯನ್ನೇ ದ್ವೇಷದ ಸಾಧನವಾಗಿಸಿಬಿಟ್ಟಿದ್ದಾರೆ. ಮನುಷ್ಯ ಮನುಷ್ಯರ ನಡುವೆ ದಾಟಲಾರದಂತಹ ಕಂದಕಗಳನ್ನು ತೋಡುತ್ತಿದ್ದಾರೆ. ಸಂಕುಚಿತ ಹಿತಾಸಕ್ತಿಗಳನ್ನು ನಾವೆಲ್ಲ ಮೀರಲೇ ಬೇಕಾದ ಕಾಲ ಈಗ ಬಂದಿದೆ.**

# ಮತಾಂಧತೆಗೆ ಕೊನೆ ಎಂದು?

ಇತ್ತೀಚೆಗೆ ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ ದೀಪು ಚಂದ್ರದಾಸ್ ಎಂಬ ಅಮಾಯಕ ಯುವಕನನ್ನು ಇಸ್ಲಾಮಿಕ್ ಮತಾಂಧರು ಇಸ್ಲಾಂ ಧರ್ಮ ನಿಂಧಿಸಿದ್ದಾನೆ ಅಂತ ಸುಳ್ಳು ಆರೋಪ ಹೊರಿಸಿ ಬರ್ಬರವಾಗಿ ಕೊಂದು, ಸುಟ್ಟು ಹಾಕಿದ್ದಾರೆ. ಇಂಥ ಕುಕೃತ್ಯಗಳು ಕಾಡು ಮನಸ್ಸಿನ ಶಿಲಾಯುಗದ ಮಾನವರಲ್ಲಿತ್ತು. ಆದರೆ, ಆಧುನಿಕ ವಿಜ್ಞಾನ ಜಗತ್ತಿನಲ್ಲಿ ಇಂಥ ಅಮಾನವೀಯ ಕುಕೃತ್ಯಗಳು ನಡೆಯುತ್ತಿವೆ ಎಂದರೆ ಅತ್ಯಂತ ಅಸಹ್ಯವಾಗುತ್ತದೆ. ಪರಮ ಘಾತುಕತನದ ಇಂತಹ ಕುಕೃತ್ಯಗಳು ಇಸ್ಲಾಂ ಧರ್ಮ ಇರುವ ದೇಶಗಳಲ್ಲಿ ಸಾಮಾನ್ಯವಾಗಿದೆ. ಮುಸ್ಲಿಮರಲ್ಲಿ ಶಾಂತಿ ಸಹನೆ ಮನುಷ್ಯತ್ವ ಏಕೆ ಕಾಣೆಯಾಗುತ್ತಿದೆ ಎಂಬುದರ ಬಗ್ಗೆ ವಿಸ್ತೃತ ಚರ್ಚೆ ಹಾಗೂ ವ್ಯಾಪಕ ಸಂಶೋಧನೆಗಳಾಗಬೇಕು. ಮನುಷ್ಯತ್ವ ಏನೂ ಅನ್ನುವ ಸಣ್ಣ ಸ್ಪಂದನೆ ಅಥವಾ ತಿಳಿವು ಇಲ್ಲದ ಇಸ್ರೇಲಿಗಳು ನಿತ್ಯ ಪ್ಯಾಲೇಸ್ತೇನಿ ಮುಸ್ಲಿಮರನ್ನು ಕೊಲ್ಲುತ್ತಿದ್ದಾರೆ. ಅಲ್ಲಿ ಮನುಷ್ಯತ್ವ ಸಂಪೂರ್ಣ ಸತ್ತು, ರಾಕ್ಷಸೀತನ ಉದ್ಭವವಾಗಿದೆ. ಕ್ರಿಸ್ತ ಪೂರ್ವದಲ್ಲಿ ಇಸ್ರೇಲಿಗಳು ಮತ್ತು ಇಸ್ಲಾಂ ನಂತರ ಮುಸ್ಲಿಮರು ಧರ್ಮದ ಹೆಸರಿನಲ್ಲಿ ನಡೆಸುತ್ತಿರುವ ಕುಕೃತ್ಯ ಅಕ್ಷಮ್ಯ, ಅಷ್ಟೇ ಅಸಹ್ಯ.



ವೇದ ವ್ಯಾಸರು ಬರೆದ ಶಿವ ಮಹಾಪುರಾಣದ 7ಸಂಹಿತೆಗಳಲ್ಲಿ ಮೊದಲ ಸಂಹಿತೆಯಾದ ವಿದ್ಯೇಶ್ವರ ಸಂಹಿತೆಯಲ್ಲಿ ನಿರಾಕಾರ ಪೂಜೆ ಜನ ಸಾಮಾನ್ಯರು ಮಾಡಬಾರದು, ಜ್ಞಾನಿಗಳಷ್ಟೇ ನಿರಾಕಾರ ಮಾಡಬೇಕು. ಜನ ಸಾಮಾನ್ಯರು ಮೂರ್ತಿ ಕೇಂದ್ರೀಕರಿಸಿ ಆರಾಧಿಸಬೇಕು ಅಂತ ಮನುಷ್ಯ ರೂಪದ ದೇವರ ಬದಲು ಲಿಂಗಾಕಾರ ಪೂಜೆ ಮಾಡಬೇಕು ಎನ್ನುತ್ತೆ . ಹಾಗೇ ಜನ ಸಾಮಾನ್ಯರು ನಿರಾಕಾರ ಪೂಜೆ ಮಾಡಿದರೆ ವಿಕಾರ ಬುದ್ಧಿ ಬೆಳೆಯುತ್ತೆ ಅನ್ನುತ್ತೆ.

ಹೀಗಾಗಿಯೇ ಋಷಿ ಮುನಿಗಳು ಕಾಡಲ್ಲಿ ಕುಳಿತು ನಿರಾಕಾರ ದೇವರನ್ನು ಧ್ಯಾನಿಸಿ ತಪಸ್ಸು ಮಾಡುತ್ತಿದ್ದರು. ಅವರ್ಯಾರು ದೇವಸ್ಥಾನದ ಮುಂದೆ ಅಥವಾ ವಿಗ್ರಹ ಪ್ರತಿಷ್ಟಾಪಿಸಿಕೊಂಡು ತಪಸ್ಸು ಮಾಡುತ್ತಿರಲಿಲ್ಲ. ಧರ್ಮಗಳು ಯಾವುದಾದರು ಒಳ್ಳೆ ವಿಚಾರಗಳನ್ನೂ ಒಪ್ಪಿ ಕೊಳ್ಳಬೇಕು. ಸರ್ವ ಧರ್ಮಗಳನ್ನು ಸದ್ವಿಚಾರದಲ್ಲಿ ಸಂಸ್ಕರಿಸಿ ಕ್ರೋಡೀಕರಿಸಿದಾಗ ವಿಚಾರಮೃತ ದೊರೆಯುತ್ತೆ. ಇದಕ್ಕೆ ಯಾವುದೇ ಧರ್ಮದ ಗೋಡೆ ಇರಬಾರದು. ಈ ಗೋಡೆಗಳಿಂದಾಗಿಯೇ ಧರ್ಮದ ಗೊಡವೆಯಲ್ಲಿ ಬಿದ್ದು ಸ್ವ ಜನಾಂಗದವರೇ ಬಡಿದಾಡಿಕೊಂಡು ಸಾಯುತ್ತಿದ್ದಾರೆ. ಇಸ್ರೇಲಿ ಮತ್ತು ಪ್ಯಾಲೇಸ್ತೇನಿಯರು ಒಂದೇ ಜನಾಂಗವಾಗಿದ್ದರು, ಧರ್ಮದ ಕೊರಡಲ್ಲಿ ಬಡಿದಾಡುತ್ತಿದ್ದಾರೆ. ಹಾಗೇ, ಯಾರದೋ ಧರ್ಮವನ್ನು ಮನಸ್ಸಿಗೆ ಅಂಟಿಸಿಕೊಂಡು ಬಂಗಾಳಿಯನ್ನು ಬಂಗಾಳಿಗಳೆ ಬಡಿದು ಸಾಯಿಸುತ್ತಿದ್ದಾರೆ. ಹಿಂದೂ ಧರ್ಮ ಹಲವು ಧರ್ಮ ಮತ್ತು ಪಂಗಡಗ ಸಂಗಮ.

33ನೇ ಪುಟಕ್ಕೆ

## ಇದ್ದದ್ದು ಇಂದ್ದಂಗೆ



ಎಚ್.ಶಿವರಾಮೇಗೌಡ
ರಾಜ್ಯಾಧ್ಯಕ್ಷರು, ಕ.ರ.ವೇ.

# 2026 ಹೊಸ ಕ್ಯಾಲೆಂಡರ್ ವರ್ಷದ ಹಾರ್ದಿಕ ಶುಭಾಶಯಗಳು

ಹೆಚ್.ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ– ಧೈರ್ಯಶಾಲಿ ಕಾರ್ಯಕರ್ತ ಮಿತ್ರರೇ, 2026 ರ ನವ ವರ್ಷದ ಹೊಸಿಲಲ್ಲಿ ನಾನು ಈ ಅಂಕಣದ ಮೂಲಕ ತಮ್ಮೆಲ್ಲರಿಗೂ ಶುಭಾಶಯಗಳನ್ನು ಕೋರುತ್ತಿದ್ದೇನೆ. ಹೊಸ ಆಶಯಗಳು' ಹೊಸ ಸಂಕಲ್ಪಗಳು ಮತ್ತು ಹೊಸ ಹೋರಾಟದ ದಾರಿಯೊಂದಿಗೆ 2026 ಹೊಸವರ್ಷ ನಮ್ಮ ಬದುಕಿಗೆ ಪ್ರವೇಶಿಸಿದೆ.




ಕನ್ನಡ ನಾಡು 'ಕನ್ನಡ ಭಾಷೆ' ಕನ್ನಡಿಗರ ಹಕ್ಕು 'ಕನ್ನಡಿಗರ ಗೌರವಗಳ ರಕ್ಷಣೆಯೆಂಬ ಮಹತ್ತರವಾದ ಧ್ಯೇಯಕ್ಕಾಗಿ ತ್ಯಾಗ' ಶ್ರಮ ಮತ್ತು ಧೈರ್ಯದಿಂದ ಹೋರಾಡುತ್ತಿರುವ ಪ್ರತಿಯೊಬ್ಬ ಕಾರ್ಯಕರ್ತರೂ ನಮ್ಮ ಸಂಘಟನೆಯ ಜೀವಾಳ. ನಿಮ್ಮ ನಿಸ್ವಾರ್ಥ ಸೇವೆ– ಅಚಲವಾದ ನಿಲುವು ಮತ್ತು ಹೋರಾಟದ ಶಕ್ತಿ ನಮ್ಮ ಸಂಘಟನೆಯನ್ನು ಮತ್ತಷ್ಟು ಬಲಿಷ್ಟವಾಗಿಸಿದೆ. 2026 ಕೇವಲ ಹೊಸ ದಿನಗಳ ಸರಣಿಯಾಗಿರದೇ ಕನ್ನಡಿಗರ ಸ್ವಾಭಿಮಾನವನ್ನು ಮತ್ತಷ್ಟು ಗಟ್ಟಿಗೊಳಿಸುವ 'ಅನ್ಯಾಯದ ವಿರುದ್ಧ ಒಗ್ಗಟ್ಟಾಗಿ ನಿಲ್ಲುವ' ನಾಡು–ನುಡಿ–ನೆಲದ ರಕ್ಷಣೆಗೆ ಹೊಸ ಅಧ್ಯಾಯ ಬರೆಯುವ ವರ್ಷವಾಗಿರಲಿ ಎಂದು ನಾನು ಹಾರೈಸುತ್ತೇನೆ. ಭಿನ್ನಾಭಿಪ್ರಾಯಗಳಿಗಿಂತ ಸಂಘಟನೆಯ ಏಕತೆ 'ವೈಯುಕ್ತಿಕ ಲಾಭಕ್ಕಿಂತ ನಾಡಿನ ಹಿತ' ಭಯಕ್ಕಿಂತ ಸತ್ಯದ ಧೈರ್ಯ ಇವೇ ನಮಗೆ ಮುಂದಿನ ದಾರಿದೀಪಗಳಾಗಲಿ.

ನಿಮ್ಮ ಕುಟುಂಬಗಳಿಗೆ ಆರೋಗ್ಯ – ಸಮೃದ್ಧಿ ಮತ್ತು ಸಂತೋಷವನ್ನು ಭಗವಂತ ಕರುಣಿಸಲಿ. ಕನ್ನಡ ಧ್ವಜದಡಿ ನಿಂತು ಕನ್ನಡಿಗರ ಗೌರವಕ್ಕಾಗಿ ನಾವು ಇನ್ನಷ್ಟು ಶಕ್ತಿಯಾಗಿ ಶಿಸ್ತಿನಿಂದ ಸಂಕಲ್ಪಬದ್ಧರಾಗಿ ಹೋರಾಡೋಣ. ಹೊಸ ವರ್ಷದ ಈ ಸಂದರ್ಭದಲ್ಲಿ ಎಲ್ಲರಿಗೂ ನನ್ನ ಹೃದಯಪೂರ್ವಕ ಹೊಸವರ್ಷದ ಶುಭಾಶಯಗಳನ್ನು ಸಮರ್ಪಿಸುತ್ತೇನೆ. ಅಂತೆಯೇ 2026 ಕೇವಲ ಸಿಹಿಮಾತುಗಳಿಗೆ ಸೀಮಿತವಾಗದಿರಲಿ.

ಈ ಹೊಸವರ್ಷ 2026 ಕನ್ನಡಿಗರ ಹಕ್ಕುಗಳನ್ನು ಕಿತ್ತುಕೊಳ್ಳುವವರಿಗೆ ಎಚ್ಚರಿಕೆಯ ಗಂಟೆಯಂತೆ. ನಾಡು 'ನುಡಿ' ನೆಲವನ್ನು ಮಾರಾಟಕ್ಕೆ ಇಟ್ಟವರ ವಿರುದ್ಧ 'ಕನ್ನಡಿಗರನ್ನು ಕನ್ನಡ ದೇಶದಲ್ಲೇ ದ್ವಿತೀಯ ದರ್ಜೆ ಪ್ರಜೆಗಳನ್ನಾಗಿ ಮಾಡಲು ಹೊರಟವರ ವಿರುದ್ಧ' ನಮ್ಮ ಹೋರಾಟ ಇನ್ನಷ್ಟು ತೀಕ್ಷ್ಣವಾಗಬೇಕು. ಸಂಘಟನೆ ಇನ್ನಷ್ಟು ಕಿಡಿ ಕಾರಬೇಕು. ಕ.ರ.ವೇ ಎಂದರೆ ಕೇವಲ ಹೆಸರಲ್ಲ. ಇದು ಕನ್ನಡಿಗರ ಸ್ವಾಭಿಮಾನಕ್ಕೆ ಕಿಡಿ ಹೊತ್ತಿಸುವ ಬೆಂಕಿಯಂಥಾ ಶಕ್ತಿ. ಕನ್ನಡಿಗರಿಗೆ – ಕನ್ನಡ ನಾಡಿಗೆ ಅನ್ಯಾಯವಾಗುವುದು ಕಂಡಾಗ ಮೌನ ವಹಿಸುವುದು ದ್ರೋಹ. ಪ್ರತಿರೋಧಿಸಿ ಹೋರಾಡುವುದೇ ನಮ್ಮ ಧರ್ಮ.

32ನೇ ಪುಟಕ್ಕೆ

**2026 ರಲ್ಲಿ ಕನ್ನಡಿಗರ ಒಗ್ಗಟ್ಟಿಗೆ ಅಡ್ಡಿಯಾಗುವವರನ್ನು ದೂರವಿಡೋಣ. ಸ್ವಾರ್ಥಕ್ಕೆ ಸಂಘಟನೆಯನ್ನು ಬಳಸುವವರನ್ನು ಹೊರಹಾಕೋಣ. ಕನ್ನಡ ವಿರೋಧಿ ಶಕ್ತಿಗಳಿಗೆ ರಸ್ತೆಯಲ್ಲೇ ನಡು ಬೀದಿಯಲ್ಲೇ ಉತ್ತರ ಕೊಡೋಣ. ಕಾನೂನಿನ ಮಿತಿಯಲ್ಲಿ ಹೋರಾಟದ ತೀವ್ರತೆಯಲ್ಲಿ ಯಾವುದೇ ಸಂಧಾನ ಇಲ್ಲ.**

# ಖುರ್ಚಿ ಕದನಕ್ಕೆ ಖರ್ಗೆ ಕೊಟ್ಟ ತಿರುವು



ಆರ್.ಟಿ.ವಿಠ್ಠಲಮೂರ್ತಿ

**ಈ ಬಾರಿಯ ಬಜೆಟ್ ಅನ್ನು ಸಿದ್ಧರಾಮಯ್ಯ ಮಂಡಿಸುವುದು ಡಿ.ಕೆ.ಶಿವಕುಮಾರ್ ಅವರಿಗೆ ಇಷ್ಟವಿಲ್ಲ.ಯಾಕೆಂದರೆ ಮುಖ್ಯಮಂತ್ರಿಯಾದ ನಂತರ ತಮ್ಮ ಸಾಮರ್ಥ್ಯವನ್ನು ತೋರಿಸಲು ಬಜೆಟ್ ಮಂಡಿಸುವುದು ತುಂಬ ಮುಖ್ಯ.ಹೀಗಾಗಿ ಬಜೆಟ್ ಅನ್ನು ತಾವೇ ಮಂಡಿಸಬೇಕು ಎಂದು ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದಾರೆ ಎಂಬುದು. ಯಾವಾಗ ಇಂತಹ ಮಾತು, ಪ್ರತಿಮಾತುಗಳ ಅಬ್ಬರ ಹೆಚ್ಚಾಗತೊಡಗಿತೋ? ಆಗ ಕಾಂಗ್ರೆಸ್ ವರಿಷ್ಟರು ಪೇಚಿಗೆ ಸಿಲುಕಿದ್ದು ನಿಜ.**

ಮೊನ್ನೆ ಕರ್ನಾಟಕಕ್ಕೆ ಬಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ  ರಾಜ್ಯ ಕಾಂಗ್ರೆಸ್ ನಲ್ಲಿ ನಡೆಯುತ್ತಿರುವ ಖುರ್ಚಿ ಕದನಕ್ಕೆ ತಿರುವು ಕೊಟ್ಟಿದ್ದಾರೆ.

ಅಂದ ಹಾಗೆ ರಾಜ್ಯ ಕಾಂಗ್ರೆಸ್ ನ ಗೊಂದಲಗಳಿಗೆ ಅಧಿಕಾರ ಹಂಚಿಕೆಯ ಮಾತು ಕಾರಣ.ಪಕ್ಷ ಅಧಿಕಾರಕ್ಕೆ ಬಂದಾಗ ಎರಡೂವರೆ ವರ್ಷಗಳ ಕಾಲ ಸಿದ್ಧರಾಮಯ್ಯ ಸಿಎಂ,ನಂತರದ ಎರಡೂವರೆ ವರ್ಷಗಳ ಕಾಲ ನಾನು ಸಿಎಂ ಎಂಬ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ವಾದ ಯಾವ ಮಟ್ಟಕ್ಕೆ ಹೋಗಿತ್ತು ಎಂದರೆ ರಾಜ್ಯ ಕಾಂಗ್ರೆಸ್ ನಲ್ಲಿ ವಿಧ್ಯುಕ್ತವಾಗಿಯೇ ಎರಡು ಬಣಗಳು ತಲೆ ಎತ್ತಿದ್ದವು.








ಈ ಪೈಕಿ ಒಂದು ಬಣದ ನಾಯಕರು:ಕರ್ನಾಟಕದಲ್ಲಿ ಪಕ್ಷ ಅದಿಕಾರಕ್ಕೆ ಬರುವಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಪಾತ್ರ ಮುಖ್ಯವಾದುದು.ಹೀಗಾಗಿ ಅವರು ಮುಖ್ಯಮಂತ್ರಿ ಆಗಬೇಕು ಎಂದು ವಾದಿಸಲು ಶುರು ಮಾಡಿದ್ದರು. ಹೀಗೆ ವಾದ ಮಾಡುವವರ ಪೈಕಿ ಕೆಲವರು ದಿಲ್ಲಿಗೆ ಹೋಗಿ ಪಕ್ಷದ ವರಿಷ್ಟರನ್ನು ಭೇಟಿ ಮಾಡುವ ಯತ್ನ ನಡೆಸಿದ್ದಲ್ಲದೆ,ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ದಕ್ಕಲೇಬೇಕು ಎಂಬ ಧ್ವನಿಯನ್ನು ಮತ್ತಷ್ಟು ಗಟ್ಟಿಗೊಳಿಸಿದ್ದರು.

ಇನ್ನು ಸಿದ್ದರಾಮಯ್ಯ ಬಣದ ಕೆಲ ಪ್ರಮುಖರು:ಐದು ವರ್ಷಗಳ ಕಾಲವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ. ಅವರ ನೇತೃತ್ವದಲ್ಲಿ ನಾವು ಅಧಿಕಾರಕ್ಕೆ ಬಂದಿದ್ದೇವೆ.ಬೇಕಿದ್ದರೆ 2028 ರ ವಿಧಾನಸಭಾ ಚುನಾವಣೆಯನ್ನು ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲೇ ಎದುರಿಸೋಣ.ಪಕ್ಷ ಗೆದ್ದು ಅಧಿಕಾರಕ್ಕೆ ಬಂದರೆ ಡಿ.ಕೆ.ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಲಿ ಎನ್ನತೊಡಗಿದರು. ಹೀಗೆ ಉಭಯ ಬಣಗಳ ಪ್ರಮುಖರು ಮಾತನಾಡುತ್ತಿದ್ದ ರೀತಿ ಹೇಗಿತ್ತೆಂದರೆ,ಅಧಿಕಾರ ಹಂಚಿಕೆಯ ವಿಷಯದಲ್ಲಿ ನಿಖರ ತೀರ್ಮಾನವೊಂದನ್ನು ಕೈಗೊಳ್ಳದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಬುಡ ಅಲುಗಾಡುವುದು ನಿಶ್ಚಿತ ಎಂಬ ಭಾವನೆ ದಟ್ಟವಾಗುತ್ತಾ ಹೋಯಿತು.

ಈ ಭಾವನೆಯು ಆಳದಲ್ಲಿದ್ದ ಮತ್ತೊಂದು ತಿರುವು ಎಂದರೆ,ಅಧಿಕಾರ ಹಂಚಿಕೆಯ ಬಗ್ಗೆ ಕಾಂಗ್ರೆಸ್ ವರಿಷ್ಟರು ಕೈಗೊಳ್ಳುವ ತೀರ್ಮಾನ ಹೇಗೇ ಇದ್ದರೂ ಅದು ಗಂಡಾಂತರಕಾರಿ ಎಂಬುದು. ಯಾಕೆಂದರೆ ಸಿದ್ಧರಾಮಯ್ಯ ಅವರನ್ನು ಕೆಳಗೆ ಇಳಿಸುವುದಿಲ್ಲ ಎಂದು ಕಾಂಗ್ರೆಸ್ ವರಿಷ್ಟರು ಸ್ಪಷ್ಟವಾಗಿ ಹೇಳಿದರೆ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಶಾಸಕರ ಒಂದು ಗುಂಪು ಪಕ್ಷ ತೊರೆಯಲಿದೆ. ಇಲ್ಲವೇ ಸಿದ್ಧರಾಮಯ್ಯ ಅವರನ್ನು ಕೆಳಗಿಳಿಸಿ ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಹುದ್ದೆಗೆ ತರಲು ಕಾಂಗ್ರೆಸ್ ವರಿಷ್ಟರು ಮುಂದಾದರೆ,ಸಿದ್ದರಾಮಯ್ಯ ಬಣದ ನಾಯಕರಾದ,ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನೇತೃತ್ವದಲ್ಲಿ ಶಾಸಕರ ಗುಂಪು ಬಿಜೆಪಿ ಕಡೆ ವಲಸೆ ಹೋಗಲಿದೆ ಎಂಬುದು.

30ನೇ ಪುಟಕ್ಕೆ

## ಲಕ್ಷ್ಮಣ ರೇಖೆ




ಲಕ್ಷ್ಮಣ ಕೊಡಸೆ

**ಗ್ರಂಥಾಲಯಗಳಿಗೆ ಸಗಟು ಖರೀದಿಯನ್ನು ಅವಲಂಬಿಸದೆ ಮುಕ್ತವಾಗಿ ಸಾರ್ವಜನಿಕರನ್ನು ತಲುಪುವ ವ್ಯವಸ್ಥೆ ಮಾಡಿಕೊಂಡಿರುವ ಪ್ರಕಾಶಕರಿಗೆ ಓದುಗರ ಬೆಂಬಲ ಇರುವಂತೆ ತೋರುತ್ತದೆ. ಬೆಂಗಳೂರಿನಲ್ಲಿ ಮಾತ್ರವಲ್ಲದೆ, ರಾಜ್ಯದ ವಿವಿಧ ಕಡೆಗಳಲ್ಲಿ ಸಾಹಿತ್ಯ ಸಮ್ಮೇಳನಗಳು ನಡೆಯುವಾಗ ಪುಸ್ತಕ ಮಳಿಗೆಗಳನ್ನು ಇಟ್ಟುಕೊಳ್ಳುವ ಪ್ರಕಾಶಕರಿಗೆ ಅವರ ಪುಸ್ತಕಗಳ ವ್ಯಾಪಾರ ಚೆನ್ನಾಗಿ ಆಗುತ್ತಿರುವ ವರದಿಗಳಿವೆ.**

# ಪುಸ್ತಕೋದ್ಯಮದ ಬಿಕ್ಕಟ್ಟು


ಕನ್ನಡ ಸಾಹಿತ್ಯಕ್ಕೆ ಈಗಂತೂ ಸಮೃದ್ಧಿಯ ಕಾಲ ಎನಿಸುತ್ತದೆ. ಕನ್ನಡದ ಕೆಲಸಕ್ಕೆ ರಾಜ್ಯ ಸರ್ಕಾರದಿಂದ ಹಲವು ರೀತಿಯ ಅನುಕೂಲಗಳನ್ನು ಕಲ್ಪಿಸಲಾಗುತ್ತಿದೆ. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ ಐವತ್ತು ವರ್ಷಗಳಾದ ನೆನಪಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ರಾಜ್ಯದಾದ್ಯಂತ ನುಡಿತೇರಿನ ಮೆರವಣಿಗೆಯನ್ನು ವಿಜೃಂಭಣೆಯಿಂದ ಕೈಗೊಳ್ಳಲಾಗಿತ್ತು. 'ಸುವರ್ಣ ಕರ್ನಾಟಕ'ದ ಹೆಸರಿನಲ್ಲಿ ವಿಶೇಷ ಪ್ರಕಟಣೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಕಾಡೆಮಿ, ಪ್ರಾಧಿಕಾರಗಳು ಮೂಲಕ ಹೊರಡಿಸಲಾಗಿತ್ತು. ಐದು ದಶಕಗಳ ಸಾಹಿತ್ಯ, ಕಲೆ, ಕೃಷಿ, ಉದ್ಯಮಗಳ ಬೆಳವಣಿಗೆಯನ್ನು ದಾಖಲಿಸುವ ವಿಶೇಷ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಿಸಲಾಗಿತ್ತು. ವಿವಿಧ ಅಕಾಡೆಮಿ ಮತ್ತು ಪ್ರಾಧಿಕಾರಗಳು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡ ಐವತ್ತು ವರ್ಷಗಳ ನೆನಪಿಗೆ ಪ್ರಕಟಣೆಗಳನ್ನು ಹೊರಡಿಸಿದ್ದಲ್ಲದೆ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯಕ್ರಮಗಳನ್ನೂ ನಡೆಸಿದ್ದವು. ಈ ಸಂದರ್ಭಗಳಲ್ಲಿ ನಾಡಿನ ಏಕೀಕರಣಕ್ಕೆ ನಡೆದ ಹೋರಾಟ, ನಾಡಿಗೆ ಕರ್ನಾಟಕ ಎಂದು ನಾಮಕರಣ ಮಾಡುವುದಕ್ಕೆ ಅವಶ್ಯಕವಾಗಿದ್ದ ರಾಜಕೀಯ ಇಚ್ಛಾಶಕ್ತಿಯ ಕುರಿತಾಗಿ ವಿಶೇಷ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು ನಡೆದು ಸಾರ್ವಜನಿಕರು ಕನ್ನಡದ ಹೆಸರಿನಲ್ಲಿ ಸರ್ಕಾರ ನಡೆಸುತ್ತಿರುವ ಕಾರ್ಯಕ್ರಮಗಳನ್ನು ಅಭಿಮಾನದಿಂದ ನೋಡಿ ಬೆಂಬಲಿಸಿದ್ದರು.




ರಾಜಧಾನಿಯ ಶಕ್ತಿಕೇಂದ್ರ ವಿಧಾನಸೌಧದ ಆವರಣದಲ್ಲಿ ಕನ್ನಡನಾಡಿನ ಅಧಿದೇವತೆಯೆಂದು 'ತಾಯಿ ಭುವನೇಶ್ವರಿ'ಯ ಭವ್ಯ ಪ್ರತಿಮೆಯನ್ನು ಸ್ಥಾಪಿಸಿದ್ದು ಕರ್ನಟಕ ಸರ್ಕಾರದ ವಿಶೇಷ ಹಿರಿಮೆ. ಹಿಂದಿನ ಸರ್ಕಾರ ಘೋಷಿಸಿದ್ದರೂ ವಿತರಿಸದೆ ಬಿಟ್ಟಿದ್ದ ಅಕಾಡೆಮಿ, ಪ್ರಾಧಿಕಾರಗಳ ವಾರ್ಷಿಕ ಪ್ರಶಸ್ತಿಗಳನ್ನು ಒಟ್ಟಾಗಿ ವಿತರಿಸಿದ್ದು, ಅನೇಕ ಪ್ರಶಸ್ತಿಗಳಿಗೆ ಅರ್ಹರಾದ ಸಾಧಕರನ್ನು ಆಯ್ಕೆ ಮಾಡಿ ಪ್ರತ್ಯೇಕ ಸಮಾರಂಭಗಳನ್ನು ಏರ್ಪಡಿಸಿ ಪ್ರದಾನ ಮಾಡಿದ್ದು ಈ ಸರ್ಕಾರದ ಕನ್ನಡಪರ ಬದ್ಧತೆಯ ಪ್ರದರ್ಶನಗಳು. 2023ರಲ್ಲಿ ಈಗಿನ ಸರ್ಕಾರ ಅಸ್ತಿತ್ವಕ್ಕೆ ಬಂದ ಮೂರು ತಿಂಗಳಿನಲ್ಲಿ ಎಲ್ಲ ಅಕಾಡೆಮಿ ಮತ್ತು ಪ್ರಾಧಿಕಾರಗಳ ಧ್ಯೇಯ ಮತ್ತು ಉದ್ದೇಶಗಳನ್ನು ಪುನರ್ ಪರಿಶೀಲಿಸಲು ಮೈಸೂರಿನಲ್ಲಿ ಮೂರು ದಿನಗಳ ರಾಜ್ಯಮಟ್ಟದ ಸಮಾವೇಶವನ್ನು ಸಂಘಟಿಸಲಾಗಿತ್ತು. ನಾಡಿನ ಸಾಂಸ್ಕೃತಿಕ ಕ್ಷೇತ್ರದ ಗಣ್ಯರನ್ನು ಎಲ್ಲ ಜಿಲ್ಲೆಗಳಿಂದಲೂ ಆಹ್ವಾನಿಸಿ ಸರ್ಕಾರದ ಕಾರ್ಯಕ್ರಮಗಳ ಸ್ವರೂಪಗಳನ್ನು ಪರಿಷ್ಕರಿಸುವ ಸಲಹೆ ಸೂಚನೆಗಳನ್ನು ಪಡೆಯಲಾಗಿತ್ತು. ನಾಡಿಗೆ ಒಂದು ಸಾಂಸ್ಕೃತಿಕ ನೀತಿ, ಪುಸ್ತಕ ನೀತಿಯನ್ನು ರೂಪಿಸುವ ಕಸರತ್ತುಗಳನ್ನೂ ನಡೆಸಲಾಗಿತ್ತು. ಇವೆಲ್ಲವೂ ಜವಾಬ್ದಾರಿ ಸರ್ಕಾರ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಾಡಲೇಬೇಕಾದ ಸಾಂಸ್ಕೃತಿಕ ಹೊಣೆಗಾರಿಕೆಯಾಗಿರುವುದನ್ನು ಗಮನಿಸಬೇಕು.

31ನೇ ಪುಟಕ್ಕೆ

## ನುಡಿ ಸಾಧಕರು



ಕೆ.ಎ.ರಾಮಕೃಷ್ಣಮೂರ್ತಿ

**ಆರೂವರೆ ದಶಕ ಕಳೆದಿದ್ದರೂ ಕನ್ನಡ-ಕನ್ನಡಿಗ-ಕರ್ನಾಟಕಕ್ಕೆ ಪೂರ್ಣ ಪ್ರಮಾಣದ ನ್ಯಾಯ ಸಿಕ್ಕಿರುವುದಿಲ್ಲ. ಪರಮ ಅನ್ಯಾಯವನ್ನೇ ಅನುಭವಿಸುವ ಸ್ಥಿತಿ ಉಳಿದುಕೊಂಡಿದೆ. ಕನ್ನಡವನ್ನು ಎಲ್ಲ ಹಂತದಲ್ಲೂ ಬಳಸುವಲ್ಲಿ ಆಳುವ ಸರ್ಕಾರಗಳು ವಿಫಲಗೊಂಡಿವೆ. ರಾಜ್ಯ ಸರ್ಕಾರಗಳದ್ದೆ ಈ ಕತೆಯಾದರೆ, ಮೊದಲಿನಿಂದಲೂ ಕನ್ನಡನಾಡನ್ನು ಕೇವಲವಾಗಿ ಕಾಣುತ್ತಿರುವ ದೆಹಲಿ ದೊರೆಗಳು ಈ ಹೊತ್ತಿಗೂ ಆ ಚಾಳಿಯನ್ನು ಮುಂದುವರಿಸಿದ್ದಾರೆ.**

# ಡಾ.ರಾಜ್ ಕುರಿತು ಪಿಎಚ್.ಡಿ: ಭಾಗ್ಯಶ್ರೀ ವಿರಕ್ತಮಠ

ಭಾಷೆ, ಸಂಸ್ಕೃತಿ ಮತ್ತು ಅಸ್ಮಿತೆಯ ಪ್ರಶ್ನೆಗಳು ಇಂದಿನ ಅಕಾಡೆಮಿಕ್ ವಲಯದಲ್ಲಿ ಗಂಭೀರ ಸಂವಾದಕ್ಕೆ ಒಳಪಡಬೇಕಾದ ಪ್ರಮುಖ ವಿಷಯಗಳಾಗಿವೆ. ಈ ಸಂದರ್ಭದಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಚಲನಚಿತ್ರಗಳನ್ನು ಇಂಗ್ಲಿಷ್ ಅಧ್ಯಯನದ ವಸಾಹತೋತ್ತರ ಚೌಕಟ್ಟಿನಲ್ಲಿ ವಿಶೇಷಿಸುವ ಯುವ ಸಂಶೋಧಕರ ಪ್ರಯತ್ನಗಳು ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತವೆ. ಅಂತಹ ಸಂಶೋಧಕರ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದದ ಯುವ ಸಂಶೋಧಕಿ ಭಾಗ್ಯಶ್ರೀ ವಿರಕ್ತಮಠ ಅವರ ಹೆಸರು ಗಮನಾರ್ಹವಾಗಿದೆ.



ಹುನಗುಂದದ ಮಣ್ಣಿನಲ್ಲಿ ಹುಟ್ಟಿ, ಕನ್ನಡ ಸಂಸ್ಕೃತಿಯ ಬೇರುಗಳಿಂದ ಪೋಷಿತರಾಗಿ, ಇಂಗ್ಲಿಷ್ ಅಧ್ಯಯನದ ಮೂಲಕ ಕನ್ನಡ ಅಸ್ಮಿತೆಯ ಅರ್ಥವನ್ನು ಹೊಸ ಚೌಕಟ್ಟಿನಲ್ಲಿ ಅನ್ವೇಷಿಸುತ್ತಿರುವ ಯುವ ಸಂಶೋಧಕರಲ್ಲಿ ಅವರು ಪ್ರಮುಖ ಸ್ಥಾನವನ್ನು ಹೊಂದಿದ್ದಾರೆ. 1996 ರಲ್ಲಿ ಜನಿಸಿದ ಇವರು, ಕನ್ನಡ ಬೌದ್ಧಿಕ ವಲಯದಲ್ಲಿ ಭಾಷೆ, ಸಂಸ್ಕೃತಿ ಮತ್ತು ಚಲನಚಿತ್ರ ಅಧ್ಯಯನಗಳನ್ನು ಹೊಸ ದೃಷ್ಟಿಕೋನದಲ್ಲಿ ಪರಿಗಣಿಸುವ ಸಂಶೋಧಕಿಯಾಗಿ ಗುರುತಿಸಿಕೊಂಡಿದ್ದಾರೆ.

ತಂದೆ ಲಿಂಗೈಕ ಮೃತ್ಯುಂಜಯ ಹಾಗೂ ತಾಯಿ ದಾನೇಶ್ವರಿ (ಮುಖ್ಯೋಪಾಧ್ಯಾಯರು, ಸರಕಾರಿ ಪ್ರೌಢ ಶಾಲೆ,ಇಂಗಳಗಿ) ಇವರ ಬದುಕಿನ ಪ್ರೇರಣಾ ಮೂಲಗಳು. ಕನ್ನಡ ಶಿಕ್ಷಕಿಯಾಗಿರುವ ತಾಯಿಯ ಶಿಸ್ತು, ಮೌಲ್ಯಬೋಧನೆ ಮತ್ತು ಕನ್ನಡ ಭಾಷೆಯ ಮೇಲಿನ ನಿಷ್ಠೆಯೇ ಭಾಗ್ಯಶ್ರೀ ಅವರಲ್ಲಿ ಕನ್ನಡ ಅಧ್ಯಯನದ ಆಳವಾದ ಆಸಕ್ತಿಗೆ ದಿಕ್ಕು ನೀಡಿದೆ. ಇದಕ್ಕೆ ಜೊತೆಯಾಗಿಯೇ ಅಜ್ಜ-ಅಜ್ಜಿಯ ಅಪಾರ ಪ್ರೀತಿ,ಕಾಳಜಿ ಮತ್ತು ಸಂಸ್ಕಾರಪೂರ್ಣ ವಾತಾವರಣವೂ ಅವರ ವ್ಯಕ್ತಿತ್ವ ಮತ್ತು ಚಿಂತನೆಯ ರೂಪುಗೊಳಿಸುವಿಕೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.

ಭಾಗ್ಯಶ್ರೀ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಹುನಗುಂದದ ವಿ.ಮ.ಶಾಲೆಯಲ್ಲಿ (2000–2011) ಪೂರ್ಣಗೊಳಿಸಿ, 2011 ರಲ್ಲಿ ಹತ್ತನೇ ತರಗತಿಯನ್ನು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ನಂತರ ಸರ್ಕಾರಿ ಪದವಿ ಪೂರ್ವ ಕಾಲೇಜು,ವಿದ್ಯಾನಗರ, ಹುನಗುಂದದಲ್ಲಿ ಪದವಿ ಪೂರ್ವ ಶಿಕ್ಷಣ ಪಡೆದು 2014ರಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಅವಧಿಯಲ್ಲೇ ಭಾಷೆ ಮತ್ತು ಸಾಹಿತ್ಯದ ಮೇಲಿನ ಇವರ ಆಸಕ್ತಿ ಸ್ಪಷ್ಟವಾಗಿ ರೂಪುಗೊಂಡಿತು.

34ನೇ ಪುಟದಿಂದ

## ಸಮಾಜದ ಕನ್ನುಡಿ



**ರಕ್ಷಿತ್ ಗೌಡ ಎಂ.**

ಕನ್ನಡ ರಾಷ್ಟ್ರೀಯತೆಯ ಪ್ರತಿಪಾದಕರು ಮತ್ತು ಚಿಂತಕರು

# ರೈತ – ಸೈನಿಕ ಈ ದೇಶದ ಬೆನ್ನೆಲುಬು ಅಂತ

ದಿನಾಂಕ 21–12–2025 ರಂದು ಭಾನುವಾರ ಹೆಚ್.ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ಶೈಕ್ಷಣಿಕ ಘಟಕದ ವತಿಯಿಂದ ಶ್ರೀಯುತ ಸುರೇಂದ್ರ ನಾಡಗುಡ್ಡೇಹೋಟೆಲ್ 'ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಗಳು' ಶಿಕ್ಷಕ ಪರ್ವ ಭಾರತ ಸರ್ಕಾರ ಇವರು ಮತ್ತು ಶ್ರೀಯುತ ಡಾ. ಮಲಕಪ್ಪರವರು ಅಲಿಯಾಸ್ ಮಹೇಶ್‌ರವರು 'ಅಧ್ಯಕ್ಷರು' ರಾಜ್ಯ ಶೈಕ್ಷಣಿಕ ಘಟಕ ಇವರ ನೇತೃತ್ವದಲ್ಲಿ ಅಂದರೆ ಇವರಿಬ್ಬರೂ ಸೇರಿ ಆಯೋಜಿಸಿದ್ದಂತಹ ಶಿಕ್ಷಕ ಕ್ಷೇತ್ರದಲ್ಲಿ ಶ್ರೇಷ್ಠ ಸೇವೆ ಸಲ್ಲಿಸಿರುವ ಸಾಧಕ ಶಿಕ್ಷಕರಿಗೆ ರಾಜ್ಯಮಟ್ಟದ "ಕರ್ನಾಟಕ ಶಿಕ್ಷಕ ರತ್ನ ಪ್ರಶಸ್ತಿ – 2025" ಈ ಒಂದು ಗೌರವ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾಗಡಿ ಮುಖ್ಯರಸ್ತೆಯ ಕಡಬಗೆರೆ ಕ್ರಾಸ್ ನಲ್ಲಿರುವ ಗಾಂಧಿ ವೃದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದರು. ಇದರ ಜತೆಗೇ ಗಾಂಧಿನಗರ ಸಾಹಿತ್ಯ ಸೇವಾ ಸಂಸ್ಥಾನ ಚಾರಿಟೇಬಲ್ ಟ್ರಸ್ಟ್ (ಕರ್ನಾಟಕ ಘಟಕ)ದ ಸಹಯೋಗದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಗಾಂಧಿ ರಾಷ್ಟ್ರೀಯ ಶಾಂತಿ ಪ್ರಶಸ್ತಿ – 2025 ಪ್ರದಾನ ಕಾರ್ಯಕ್ರಮವನ್ನೂ ಆಯೋಜಿಸಿದ್ದರು.

ಈ ಕಾರ್ಯಕ್ರಮದ ನಿರೂಪಣೆಯ ಜತೆಗೆ ಆಶಯ ನುಡಿಗಳನ್ನಾಡುವ ಹೊಣೆಯನ್ನೂ ಹೊರಿಸಿದ್ದರು. ಹಾಗಾಗಿ ಇಂದಿನ ಕಾರ್ಯಕ್ರಮದಲ್ಲಿ 5 – 10 ನಿಮಿಷದಲ್ಲಿ ಕಿರು ಭಾಷಣವನ್ನು ಮುಗಿಸಬೇಕೆಂಬ ಪೂರ್ವ ನಿಯೋಜನೆಯಂತೆ ಸಿದ್ಧನಾಗಿದ್ದೆ. ಆ ಆಶಯ ನುಡಿಗಳೇ ನನ್ನ ಈ ತಿಂಗಳ ಅಂಕಣವಾಗಿಸಿದ್ದೇನೆ.

ಇವತ್ತಿನ ಈ ವೇದಿಕೆಯ ಮೇಲೆ ನಿಂತು ಈ ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗ್ತಿರೋದು ನನಗಂತೂ ಬಹಳ ಸಂತೋಷ. ಕಾರಣ ನಾನೂ ಸಹ ಓರ್ವ ಮೇಷ್ಟ್ರು ಮಗನೇ. ಇವತ್ತು ಇಲ್ಲಿ ಸನ್ಮಾನಿತನಾಗ್ತಿರೋದು ಯಾವುದೇ ಅಧಿಕಾರಸ್ಥರಲ್ಲ–ಯಾವುದೇ ಹುದ್ದೆಗಳನ್ನ ಅಲಂಕರಿಸಿದೋರಲ್ಲ. ಇವರು ಸಮಾಜದ ಶಿಲ್ಪಿಗಳು. ಭವಿಷ್ಯ ಭಾರತದ ನಿರ್ಮಾತೃಗಳು. ಶಿಕ್ಷಕ ಅಂದ್ರೆ ಬರೀ ಪುಸ್ತಕದಲ್ಲಿರೋದನ್ನ ಪಾಠ

ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದ ವ್ಯಕ್ತಿಗಳನ್ನು ಗುರುತಿಸಿ ಅವರ ಶ್ರಮವನ್ನು ಗುರುತಿಸಿ ಗೌರವ ನೀಡಿದಾಗ ಸಮಾಜದ ಇತರರಿಗೂ ಅಂತಹ ಒಂದು ಸಾಧನೆ ಸೇವೆ ಮಾಡ್ಬೇಕು ಅನ್ನೋ ಸ್ಫೂರ್ತಿ ಬರಲಿ








ಮಾಡೋನಲ್ಲ. ಶಿಕ್ಷಕ ಅಂದ್ರೆ ಅಧಿಕಾರದಲ್ಲಿರೋ ಮನಸ್ಸಿಗೆ ಬೆಳಕು ನೀಡುವವನು. ದಾರಿ ತಪ್ಪಿದ ಬದುಕಿಗೆ ದಿಕ್ಕು ತೋರಿಸುವವನು. ನಮ್ಮೆಲ್ಲ ಗೆಲುವಿನ ಹಿಂದೆ ಮೌನವಾಗಿ ನಿಂತವರು ಶಿಕ್ಷಕರು.

ಎಲ್ರೂ ಹೇಳ್ತಾರೆ ರೈತ ಈ ದೇಶದ ಬೆನ್ನೆಲುಬು ಸೈನಿಕ ಈ ದೇಶದ ಬೆನ್ನೆಲುಬು ಅಂತ. ನಾನು ಹೇಳ್ತೀನಿ ಒಬ್ಬ ಶಿಕ್ಷಕ ಸಹ ಯಾವುದೇ ದೇಶದ ಬೆನ್ನೆಲುಬೇ ಓರ್ವ ಎಂಜಿನಿಯರ್ ತಪ್ಪು ಮಾಡದ್ರೆ ಒಂದು ಕಟ್ಟಡವ್ರೋ ಒಂದು ಅಣೆಕಟ್ಟೋ ಕುಸಿಯುತ್ತೆ. ಅದನ್ನ ಮತ್ತೆ ನಿರ್ಮಿಸಬಹುದು ಮತ್ತೆ ಕಟ್ಟಬಹುದು. ಆದ್ರೆ ಓರ್ವ ಶಿಕ್ಷಕನೇ ತಪ್ಪು ಮಾಡಿದ್ರೆ ತನ್ನ ಜವಾಬ್ದಾರಿಯನ್ನ ಮರೆತ್ರೆ ಇಡೀ ದೇಶವೇ ಕುಸಿಯುತ್ತೆ. ಹಾಗಾಗಿ ದೇಶದ ಬುನಾದಿಯನ್ನ ಆ ಬುನಾದಿಯನ್ನ ನಿರ್ಮಾಣ ಮಾಡೋರೇ ಶಿಕ್ಷಕರು. ಇಂತಹ ಒಂದು ಮಹಾನ್ ಸೇವೆಯನ್ನ ಹಣದಿಂದಾಗಲೀ ಯಾವುದೇ ಪದಕದಿಂದಾಗಲೀ ತೂಕ ಮಾಡೋದಕ್ಕಾಗಲೀ ಅಳೆಯೋದಕ್ಕಾಗಲೀ ಸಾಧ್ಯ ಇಲ್ಲ. ಆದ್ರೂ ಸಮಾಜದ ಒಂದು ಕೃತಜ್ಞತೆಯ ಸಂಕೇತವಾಗಿ ಈ ಒಂದು ಗೌರವದ ಕಾರ್ಯಕ್ರಮ ಅಷ್ಟೇ.

ಇನ್ನು ಸಮಾಜದಲ್ಲಿ ಸಾಧನೆಗೈದವರಿಗೆ ಸನ್ಮಾನ ಮಾಡೋದು ಅಂದ್ರೆ ಅದು ಸಮಾಜದ ಅಭಿವೃದ್ಧಿಗೇ ಕೊಡುಗೆ ನೀಡಿದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದ ವ್ಯಕ್ತಿಗಳನ್ನು ಗುರುತಿಸಿ ಗೌರವ ನೀಡಿದಾಗ ಸಮಾಜದ ಇತರರಿಗೂ ಅಂತಹ ಒಂದು ಸಾಧನೆ ಸೇವೆ ಮಾಡ್ಬೇಕು ಅನ್ನೋ ಸ್ಫೂರ್ತಿ ಬರಲಿ ಪ್ರೇರಣೆ ಆಗಲಿ ಅಂತ. ಈ ಮೂಲಕ ಸಮಾಜದ ಎಲ್ಲಾ ವರ್ಗದವರನ್ನೂ ಎಲ್ಲಾ ಕ್ಷೇತ್ರದವರನ್ನೂ ಸಹ ಒಂದೇ ವೇದಿಕೆಗೆ ತರೋದು.

ಈ ಮೂಲಕ ಸಮಾಜದ ಮೌಲ್ಯಗಳನ್ನ ಎತ್ತಿ ಹಿಡಿಯೋ ಒಂದು ಪ್ರಯತ್ನ. ಯಾವುದೇ ಒಂದು ನಾಡಿಗೆ ಸಜ್ಜನರು(ಒಳ್ಳೆಯವರು) ಉತ್ತಮರು ಅಂತ ಏನ್ ಇರ್ತಾರಲ್ಲ ಅವರು ಒಂದು ಸಂಪತ್ತಿದ್ದಂತೆ. ಹಾಗಾಗಿ ಸಮಾಜದ ಬಗ್ಗೆ ಕಾಳಜಿ ದಯೆ ಅನುಕಂಪ ಹೊಂದಿದ ಇಂತಹವರನ್ನು ಗೌರವಿಸ್ತಿರೋ ಈ ಒಂದು ಕಾರ್ಯಕ್ರಮಕ್ಕೆ ನಾನೂ ಒಬ್ಬ ಸಾಕ್ಷಿ ಆಗ್ತಿರೋದು ನನ್ನ ಸೌಭಾಗ್ಯ ಅಂತ ಭಾವಿಸ್ತೀನಿ.■



# ಜೆಪಿ ಬದುಕಿದ್ದರೆ ಮತ್ತೊಂದು ಹೋರಾಟಕ್ಕೆ ಸಿದ್ಧರಾಗುತ್ತಿದ್ದರು

● ಕೆ.ಎಸ್. ನಾಗರಾಜ್

ಲೋಕ ನಾಯಕ ಜಯಪ್ರಕಾಶ್ ನಾರಾಯಣ್ ರವರು ಯಾವ ಉದ್ದೇಶಗಳಿಗಾಗಿ ತಮ್ಮ ಜೀವಿತದ ಅವಧಿಯಲ್ಲಿ ಬದುಕಿದ್ದರೂ ಮತ್ತು ಹೋರಾಟವನ್ನು ಮಾಡಿದರು, ಆ ಎಲ್ಲ ಆಶಯಗಳು ಇಂದು ದಿಕ್ಕುತಪ್ಪುತ್ತಿರುವ ಹಿನ್ನೆಲೆಯಲ್ಲಿ ಒಂದೊಮ್ಮೆ ಜೆಪಿ ಇನ್ನೂ ಜೀವಂತವಾಗಿ ಇದ್ದಿದ್ದರೆ ತಮ್ಮ ಅನುಯಾಯಿಗಳ ವಿರುದ್ಧವೇ ಹೋರಾಟವನ್ನು ಮಾಡುತ್ತಿದ್ದರು.

1902ರಲ್ಲಿ ಹುಟ್ಟಿದಂತಹ ಜೆಪಿ ನವರು ಸಾವಿರದ ಒಂಬೈನೂರ ಎಪ್ಪತ್ತೊಂಬತ್ತರಲ್ಲಿ ತಮ್ಮ 77ನೇ ವಯಸ್ಸಿನಲ್ಲಿ ತಮ್ಮ ಬದುಕಿನ ಪಯಣವನ್ನು ಮುಗಿಸಿದರು.

ವಿವಾಹವಾಗಿಯೂ ಬ್ರಹ್ಮಚರ್ಯ ದೀಕ್ಷೆಯನ್ನು ತಮ್ಮ ಪತ್ನಿ ಸ್ವೀಕರಿಸಿದ ಕಾರಣಕ್ಕೆ ,ತಾವು ಸಹ ಅದರಂತೆ ಬದುಕಿನ ಉದ್ದಕ್ಕೂ ನಡೆದುಕೊಂಡು ದೇಶ ಸೇವೆಗಾಗಿ ಸಾಂಸಾರಿಕ ಸುಖವನ್ನೇ ತ್ಯಾಗ ಮಾಡಿದ ಜೆಪಿ ಯ ಹೆಸರು ಹೇಳುವ ಯೋಗ್ಯತೆ ಎಷ್ಟು ಮಂದಿಗೆ ಇದೆ ಎಂದು ತಮ್ಮ ಹೃದಯಗಳನ್ನು ಕೇಳಿಕೊಳ್ಳಬೇಕು.

ಮಹಾತ್ಮ ಗಾಂಧೀಜಿ ರವರ ವಿಚಾರಧಾರೆಗಳಿಗೆ ಪ್ರಭಾವಿತರಾಗಿ ಹಲವಾರು ದಶಕಗಳ ಕಾಲ ನಿರಂತರ ಹೋರಾಟ ನಡೆಸಿ ಸೆರೆಮನೆ ವಾಸವನ್ನ ಅನುಭವಿಸಿ ತಮ್ಮ ಬದುಕನ್ನ ದೇಶ ಸೇವೆಗೆ ಸಮರ್ಪಿಸಿಕೊಂಡಿದ್ದರು. 1942ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಮಾರು ವೇಷದಲ್ಲಿ ದೇಶದಾದ್ಯಂತ ಸಂಚಾರವನ್ನು ಮಾಡಿ ಚಳವಳಿಯನ್ನು ಜೀವಂತವಾಗಿ ಇಡುವ ಸಲುವಾಗಿ ಸಾಹಸದ ಕಾರ್ಯಕ್ಕೆ ಕೈಹಾಕಿ ಅಂತಿಮವಾಗಿ ಬ್ರಿಟಿಷರಿಗೆ ಸೆರೆಯಾಗಿ, ಸೆರೆಮನೆ ವಾಸದಲ್ಲಿ ಇವರು ಅನುಭವಿಸಿದ ಹಿಂಸೆ, ಯಾತನೆ ಎಷ್ಟೊಂದು ದೊಡ್ಡದು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅಧಿಕಾರದ ಕಡೆ ತಿರುಗಿ ನೋಡಲಿಲ್ಲ. ಅಧಿಕಾರವನ್ನು ವಹಿಸಿಕೊಳ್ಳುವಂತೆ ಕೇಳಿಕೊಂಡರು ಅದನ್ನು ತಿರಸ್ಕರಿಸಿದರು. ನಾನು ಹೋರಾಟ ಮಾಡಿದ್ದು ದೇಶ ಸೇವೆಗಾಗಿ ಅಧಿಕಾರಕ್ಕಾಗಿ ಅಲ್ಲ ಎನ್ನುವ ಇವರ ಮಾತನ್ನು ಇಂದು ನಾವು ಎಷ್ಟು ಮಂದಿ ಅನುಸರಿಸಲು ಸಾಧ್ಯ.

ದೇಶಕ್ಕೆ ಸ್ವಾತಂತ್ರ ಬಂದ ನಂತರವೂ ತಮ್ಮ ಪಾಡಿಗೆ ತಾವು ವಿಶ್ರಾಂತಿ ಜೀವನ ನಡೆಸಬಹುದಿತ್ತು, ಆದರೆ ಆ ರೀತಿ ಮಾಡದೆ ಮತ್ತೆ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ತಮ್ಮ ದೇಹವನ್ನು ದೇಶಕ್ಕಾಗಿ ದಂಡಿಸಿದರು. ವಿನೋಬಾ ರವರ ಭೂದಾನ ಚಳುವಳಿಯಲ್ಲಿ ಭಾಗವಹಿಸಿದರು. ಅಂಚೆ ಕಾರ್ಮಿಕರ ಮತ್ತು ರೈತರ ಹಾಗೂ ರೈಲ್ವೆ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟವನ್ನು ಮಾಡಿದರು.

ಮನಃಪರಿವರ್ತನೆಗಾಗಿ ಹಾತೊರೆಯುತ್ತಿದ್ದ ನೂರಾರು ಡಕಾಯಿತರ ಪ್ರಮುಖ ವಾಹಿನಿಗೆ ತರುವ ಸಲುವಾಗಿ ಚಂಬಲ್ ಕಣಿವೆಯಲ್ಲಿ ಇವರು ನಡೆಸಿದಂತಹ ಕಾರ್ಯ, ದೇಶ ಎಂದೂ ಮರೆಯುವ ಹಾಗಿಲ್ಲ. ಇವರ ಧರ್ಮಪತ್ನಿ ಪ್ರಭಾವತಿ ಅವರೊಂದಿಗೆ ಚಂಬಲ್ ಕಣಿವೆಯ ಪ್ರದೇಶದಲ್ಲಿ ವಾಸ್ತವ್ಯವನ್ನು ಹೂಡಿ ಅಲ್ಲಿನ ಡಕಾಯಿತರೊಂದಿಗೆ ಸಂಪರ್ಕವನ್ನು ಬೆಳೆಸಿ ಅವರ ಮನವನ್ನು ಒಲಿಸಿ, ಅವರನ್ನು ಶರಣಾಗತಿಯನ್ನಾಗಿ ಮಾಡಿಸಿ ಅವರನ್ನು ಸಹ

ಮನುಷ್ಯರನ್ನಾಗಿ ಪರಿವರ್ತಿಸಿದ ಪವಿತ್ರ ಕಾರ್ಯವನ್ನು ಮಾಡಿದವರು ಜೆ ಪಿ ರವರು. ಚಂಬಲ್ ಕಂಡ ಬೆಳಕು ಎಂಬ ಹೆಸರಿನಲ್ಲಿ ಅನೇಕ ಪುಸ್ತಕಗಳು ಬಂದಿದೆ. ಅಂದು ಬುದ್ಧ ಅಂಗೋಲಿಮಾಲನನ್ನ ಬದಲಾಯಿಸಿದ ರೀತಿಯಲ್ಲಿ ಜೆಪಿ ರವರು ಡಕಾಯಿತರ ಮನಸ್ಸನ್ನು ಬದಲಾಯಿಸಿದರು.

ದೇಶದಲ್ಲಿ ನಿರುದ್ಯೋಗ, ಸ್ವಾರ್ಥ, ಭ್ರಷ್ಟಾಚಾರ, ದಮನಕಾರಿ ಪ್ರವೃತ್ತಿಗಳು ತಲೆಯೆತ್ತಿದಾಗ ಅದಕ್ಕಾಗಿ ಹೋರಾಟವನ್ನು ನಡೆಸಿ ಸಂಪೂರ್ಣ ಕ್ರಾಂತಿಯ ಕರೆಯನ್ನ ನೀಡಿ ದೇಶದಾದ್ಯಂತ ಪ್ರವಾಸವನ್ನು ಮಾಡಿ ವಿದ್ಯಾರ್ಥಿ ಯುವಜನರ ಸಂಘಟನೆಯನ್ನು ನಡೆಸಿ, 1972 ರಿಂದ 1977 ರ ಅವಧಿಯಲ್ಲಿ ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿಯೇ ಹೊಸ ಇತಿಹಾಸವನ್ನು ಬರೆದಂತಹ ಕೀರ್ತಿಗೆ ಕಾರಣಕರ್ತರಾದವರು, ಜೆಪಿ ರವರು.

ಅಂದು ಜೆ ಪಿ ರವರ ಜೊತೆಯಲ್ಲಿ ಅವರು ಪ್ರಸ್ತಾಪಿಸಿದ ವಂಶ ಪಾರಂಪರಿಕ ಆಡಳಿತದ , ಚುನಾವಣೆಯಲ್ಲಿ ಹಣದ ಪಾತ್ರ, ಸಾರ್ವಜನಿಕ ಜೀವನದಲ್ಲಿ ,,, ಜಾತೀಯತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ವಿಲಾಸಿ ಜೀವನ, ಇವುಗಳ ವಿರುದ್ಧ ಹೋರಾಟವನ್ನು ಮಾಡಿ ಸೆರೆಮನೆ ವಾಸವನ್ನ ಅನುಭವಿಸಿ ಹೊರಬಂದವರು ಬಹುತೇಕ ನಾಯಕರು, ಜೆಪಿ ರವರ ಎಲ್ಲ ಆಶಯಗಳಿಗೆ ಎಳ್ಳು ನೀರು ಬಿಟ್ಟು ಅದರ ವಿರುದ್ಧವಾಗಿ ಬದುಕುತ್ತಿದ್ದಾರೆ. ತಮ್ಮ ಕುಟುಂಬದ ಕುಡಿಗಳನ್ನ ರಾಜಕಾರಣದಲ್ಲಿ ಯೋಗ್ಯತೆ ಇರಲಿ ಬಿಡಲಿ ಪ್ರಮುಖ ಸ್ಥಾನದಲ್ಲಿ ಪ್ರತಿಷ್ಠಾಪಿಸಲು ನಡೆಸುವಂತಹ ತಂತ್ರಗಾರಿಕೆಗಳನ್ನು ನೋಡಿದಾಗ ಹೇಸಿಗೆ ಎನಿಸುತ್ತದೆ.

ಜೆಪಿರವರ ಹೆಸರನ್ನು ಹೇಳಿಕೊಂಡು ಬೆಳೆದವರು, ಅವರ ಆದರ್ಶಗಳನ್ನೇ ಗುರಿಯಾಗಿ ಮಾಡಿಕೊಂಡು ಸಂಘಟನೆಗಳನ್ನ ಪಕ್ಷಗಳನ್ನ ಕಟ್ಟಿದವರು, ಇಂದು ತಮ್ಮ ಕಚೇರಿಗಳಲ್ಲಿ ಜೆಪಿ ರವರ ಭಾವಚಿತ್ರವನ್ನು ಮಾತ್ರ ಉಳಿಸಿಕೊಂಡು ಅವರ ಅಂದು ವ್ಯಕ್ತಪಡಿಸಿದ ಭಾವನೆಗಳಿಗೆ ತಿಲಾಂಜಲಿಯನ್ನ ಇಟ್ಟಿದ್ದಾರೆ.







ಸಮಾಜವಾದಿ ಪಕ್ಷದ 90 ವರ್ಷಗಳ ನೆನಪಿನ ಕಾರ್ಯಕ್ರಮಗಳು ದೇಶದಾದ್ಯಂತ ನಡೆಯುತ್ತಿದೆ.. ವೇದಿಕೆಗಳ ಮೇಲೆ ಜೆಪಿ, ಲೋಹಿಯಾ ಆಚಾರ್ಯ ನರೇಂದ್ರ ದೇವ, ಶಾಂತವೇರಿ ಗೋಪಾಲಗೌಡ ಹೀಗೆ ಅನೇಕರ ಚಿತ್ರಗಳು ರಾರಾಜಿಸುತ್ತದೆ. ಕಾರ್ಯಕ್ರಮಗಳಿಗೆ ಬರುವ ಸಮಾಜವಾದದ ಹಿನ್ನೆಲೆಯಲ್ಲಿ ಬೆಳೆದು ಬಂದಿರುವವರು ಅತಿಥಿಗಳಾಗಿ, ಮುಖ್ಯ ಅತಿಥಿಗಳಾಗಿ ಭಾವಚಿತ್ರಗಳಿಗೆ ಪುಷ್ಪವನ್ನು ಅರ್ಪಿಸಿ, ಅವಕಾಶ ಸಿಕ್ಕಿದರೆ ತಮ್ಮನ್ನು ವೈಭವಿಕರಿಸಿಕೊಂಡು ನಾಯಕರನ್ನು ಸ್ಮರಿಸಿಕೊಂಡು ಮಾತನಾಡಿ, ವೇದಿಕೆ ಇಳಿಯುತ್ತಿದ್ದಂತೆ ಮಾತಿಗೂ ಮತ್ತು ಕೃತಿಗೂ ಸಂಬಂಧವಿಲ್ಲದಂತೆ ಬದುಕುತ್ತಾರೆ.

ಅಕ್ಟೋಬರ್ 2 ಮತ್ತು ಅಕ್ಟೋಬರ್ 11 ಮಾರ್ಚ್ 23 ಇವೆಲ್ಲವೂ ಗಾಂಧಿ, ಜೆಪಿ ,ಲೋಹಿಯಾ ಪ್ರಸ್ತಾಪಿಸಿದ ವಿಚಾರಗಳಲ್ಲಿ ನಂಬಿಕೆಯ ಜೊತೆಗೆ ಬದ್ಧತೆಯಿಂದ ಬದುಕುತ್ತಿರುವ ಬೆರಳು ಎಣಿಸುವಷ್ಟು ಮಂದಿಗೆ ಮಾತ್ರ ಪವಿತ್ರ ದಿನ ಉಳಿದ ಜನರಿಗೆ ಇದೊಂದು ಕೇವಲ ಕಾರ್ಯಕ್ರಮ ವಷ್ಟೇ.

ಜೆಪಿ ರವರಿಗೆ ಅದೆಷ್ಟು ಗೌರವ ಕೊಡುತ್ತಿವೋ ಇಲ್ಲವೋ ಕಡೆಯ ಪಕ್ಷ ಬೆಂಗಳೂರಿನ ಮೆಟ್ರೋ ನಿಲ್ದಾಣದಲ್ಲಿ ಜಯಪ್ರಕಾಶ್ ನಿಲ್ದಾಣ ವೆಂದು ತಪ್ಪು ತಪ್ಪಾಗಿ ನಾಮಕರಣ ಮಾಡಿರುವ ಆ ಒಂದು ತಪ್ಪನ್ನಾದರೂ ಸರಿಪಡಿಸಿ ಲೋಕನಾಯಕ ಜಯಪ್ರಕಾಶ್ ನಾರಾಯಣ್ ನಿಲ್ದಾಣ ವೆಂದು ಮರುನಾಮಕರಣ ಮಾಡಿ ಅಲ್ಲೊಂದು ನಾಮಫಲಕವನ್ನ ಅಳವಡಿಸಿದರೆ ಸದ್ಯಕ್ಕೆ ಜೆಪಿ ರವರಿಗೆ ನಾವು ಸಲ್ಲಿಸುವ ಗೌರವವಾಗುತ್ತದೆ. ಜೆಪಿ ರವರ ಹೆಸರಿನಲ್ಲಿ ಜೆಪಿ ನಗರವಿದೆ ಆದರೆ ಜೆಪಿ ರವರ ಹೆಸರಿನಲ್ಲಿ ಅಲ್ಲಿ ಯಾವ ಕುರುಹುಗಳು ಇಲ್ಲ. ಅಲ್ಲಿ ವಾಸ ಮಾಡುವ ಜನರಿಗೂ ಮತ್ತು ಆ ಪ್ರದೇಶಗಳಿಗೆ ಹೋಗುವ ಜನರಿಗೂ ಜೆಪಿ ಎಂದರೆ ಯಾರು ಎಂದು ತಿಳಿದೇ ಇಲ್ಲ. ಪಡೆಯ ಪಕ್ಷ ಬಿಬಿಎಂಪಿ ಅವರು ಅಲ್ಲಿ ಎಲ್ಲಿಯಾದರೂ ಒಂದು ನಾಮಫಲಕವನ್ನು ಅಳವಡಿಸಿ ಜೆಪಿ ರವರ ಬಗ್ಗೆ ನಾಲ್ಕು ಸಾಲುಗಳುಳ್ಳ ಒಂದು ಕಲ್ಲನ್ನು ಹಾಕಿಸಿದರೆ ಸಾರ್ಥಕವಾಗುತ್ತದೆ

# ಅವರಿಗೆ ಪ್ರೇರಕ ಶಕ್ತಿ ಆಗಿದ್ದವರು ತಂದೆ ಕುವೆಂಪು



● ಶ್ರೀಮತಿ ರಾಜೇಶ್ವರಿ ತೇಜಸ್ವಿ

ಗೆಳೆಯನಾಗಿ, ಪತಿಯಾಗಿ, ನನ್ನ ಮಕ್ಕಳ ತಂದೆಯಾಗಿ, ಲೇಖಕನಾಗಿ, ದಾರ್ಶನಿಕನಾಗಿ ನಾನು ಕಂಡ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ವ್ಯಕ್ತಿತ್ವವನ್ನು ಬಣ್ಣಿಸುವುದು ನನಗೆ ಸವಾಲಿನ ಸಂಗತಿಯೇ. ಅವರ ಮೇರು ವ್ಯಕ್ತಿತ್ವದಡಿ, ಸಣ್ಣ ಮಸ್ತಿಷ್ಕದವಳಾದ ನಾನು, ತೇಜಸ್ವಿಯವರ ಅಪಾರ ಬೌದ್ಧಿಕ ವ್ಯಕ್ತಿತ್ವವನ್ನು ಅಕ್ಷರಗಳಲ್ಲಿ ಕಟ್ಟಿಕೊಡಲಾರೆ ಅನಿಸುತ್ತೆ. ಅವರ ಪತ್ನಿಯಾಗಿ ಬೇಕಾದರೆ " ಎಲ್ಲರಂತಲ್ಲ ನನ್ನ ಗಂಡ" ಎಂದು ಹೆಮ್ಮೆಯಿಂದ ಪತಿ ಪ್ರೀತಿಯ ಅಗಾಧ ಪ್ರತಿಭೆಯನ್ನು ಸುಲಲಿತವಾಗಿ ಅನಾವರಣಗೊಳಿಸಬಲ್ಲೆ. 41 ವರ್ಷಗಳ ನಮ್ಮ ದಾಂಪತ್ಯ ಜೀವನ ಅದೆಷ್ಟು ಬೇಗ ಕಳೆದುಹೋಯಿತೆಂದು ಯೋಚಿಸಿದಾಗ ಅಲ್ಲಿ ಪತಿಯ ಗಟ್ಟಿ ವ್ಯಕ್ತಿತ್ವ ಗೋಚರವಾಗುತ್ತದೆ.

ಅವರು ನನಗೆ ಪರಿಚಯವಾಗಿದ್ದು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ (1958). ನಮ್ಮಿಬ್ಬರ ಮೊದಲ ಭೇಟಿಯಲ್ಲೆ ನಮ್ಮದು ಜನ್ಮ ಜನ್ಮಾಂತರದ ಪರಿಚಯದಂತೆ ಭಾಸವಾಗಿತ್ತು. ಅವರು ದೊಡ್ಡ ಕವಿಯೊಬ್ಬರ ಮಗ ಎಂಬ ಯಾವ ಹಮ್ಮು-ಬಿಮ್ಮು ಇಲ್ಲದೆ ನನ್ನೆಡೆ ಸ್ನೇಹದ ನಗೆ ಬೀರಿದ್ದರು. ಈ ಸ್ನೇಹ ಪ್ರೇಮದ ರೂಪ ಹೇಗೆ ಪಡೆಯಿತೆಂಬುದನ್ನು ಸ್ಪಷ್ಟವಾಗಿ ಹೇಳಲಾರೆ. ಅದ್ಯಾವುದೊ ಅಯಸ್ಕಾಂತದ ಸೆಳೆತದಂತೆ ನಮ್ಮಿಬ್ಬರನ್ನು ಆವರಿಸುತ್ತಾ ಹೋಯಿತೆಂದು ಮಾತ್ರ ಹೇಳಬಲ್ಲೆ.

ಮಾಸ್ಟರ್ ಡಿಗ್ರಿ ಮುಗಿದ ನಂತರವೂ ನಮ್ಮ ಅಂತರ್ಜಾತಿ ಪ್ರೇಮ ವಿವಾಹದ ರೂಪ ಪಡೆಯಲು ನಾಲ್ಕು ವರ್ಷ ಕಾಯಬೇಕಾಯಿತು. ಅವರಿಗಿನ್ನೂ ಉದ್ಯೋಗ ಸಿಕ್ಕಿರಲಿಲ್ಲ. ಹೀಗಿರುವಾಗ ಅವರ ಸ್ನೇಹಿತ ಕಡಿದಾಳ ಶಾಮಣ್ಣರೊಂದಿಗೆ ಸೇರಿ ಪ್ರಿಂಟಿಂಗ್ ಪ್ರೆಸ್ ಶುರು ಮಾಡಿದರು. ಜೊತೆಯಲ್ಲಿಯೇ, 1962ರಲ್ಲಿ 'ಲಹರಿ' ಎಂಬ ಸಾಹಿತ್ಯಕ ಮಾಸ ಪತ್ರಿಕೆಯನ್ನು ಹೊರ ತರುತ್ತಿದ್ದರು. ಯಾವುದೂ ಲಾಭ ತಂದು ಕೊಡಲಿಲ್ಲ. ಹೀಗಾಗಿ ನಮ್ಮ ಮದುವೆ ಯೋಗ ಸಹ ಕೂಡಿಬರಲಿಲ್ಲ. ಹೀಗಿದ್ದರೂ ಬೆಂಗಳೂರಿನ ನನ್ನ ತವರು ಮನೆಗೆ ಬಂದು ಹೋಗುತ್ತಿದ್ದರು. ಪಶುಸಂಗೋಪನಾ ಇಲಾಖೆ ಸಹಾಯಕ ಲೆಕ್ಕಾಧಿಕಾರಿಯಾಗಿದ್ದ ಬಿ.ವಿ.ರಂಗಪ್ಪ-ರಾಮಕ್ಕ ಎಂಬ ದಂಪತಿಯ ಮೂರು ಹೆಣ್ಣು-ಇಬ್ಬರು ಗಂಡು ಮಕ್ಕಳಲ್ಲಿ ಕೊನೆಯವಳಾದ ನನಗೆ ಮದುವೆ ಈಗಲೆ ಆಗಬೇಕೆಂಬ ಒತ್ತಡವೂ ಇರಲಿಲ್ಲ. ಜಾತಿ-ಅಂತಸ್ತು ನಮ್ಮಿಬ್ಬರದು ಬೇರೆಯಾಗಿದ್ದರೂ ನಮ್ಮ ಭಾವನೆಗಳು ಮಾತ್ರ ಭಿನ್ನವಾಗಿರಲಿಲ್ಲ .

1965ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಸಮೀಪ ಜಮೀನು ಖರೀದಿಸಿ 'ಚಿತ್ರಕೂಟ' ಎಂಬ ತೋಟ ಮಾಡಿ ಪರಿಸರದ ಸೇವೆಗೆ ನಿಂತರು. ಇದರ ಮಧ್ಯೆ ಒಮ್ಮೆ ತಂದೆ ಕುವೆಂಪು ತಾಯಿ ಹೇಮಾವತಿ ಅವರಿಗೆ ನನ್ನನ್ನು ಪರಿಚಯಿಸಿ ಮದುವೆ ಯಾಗುವ ಪ್ರಸ್ತಾಪ ಮಾಡಿದ್ದರು. ಮಗನ ಇಷ್ಟಕ್ಕೆ ವಿರುದ್ಧವಾಗಿ ಮಾತನಾಡದ ಅವರು 1966ರ ನವೆಂಬರ್.24ರಂದು ಚಿತ್ರಕೂಟದ ತೋಟದಲ್ಲೇ ನಮ್ಮಿಬ್ಬರ ಕುಟುಂಬ ಮತ್ತು ಹಿತೈಷಿಗಳ ಸಮ್ಮುಖದಲ್ಲಿ 'ಮಂತ್ರ ಮಾಂಗಲ್ಯ'ದ ಮೂಲಕ ಸರಳ ವಿವಾಹ ಮಾಡಿದರು. ನಾನು ದಾಂಪತ್ಯ ಜೀವನಕ್ಕೆ ಕಾಲಿರಿಸಿದ ದಿನದಿಂದ ಅವರ ಕೊನೆ

ಉಸಿರೆಳೆಯುವ 41ವರ್ಷಗಳವರೆಗೂ ನನಗೆ ಹೀಗಿರು, ಹೀಗೆ ಮಾಡು ಎಂದು ಯಾವತ್ತೂ ಉಪದೇಶ ಮಾಡಿದವರಲ್ಲ . "ನಿನಗೆ ಹೇಗೆ ಇರಬೇಕೆನಿಸುತ್ತೊ ಹಾಗೆ ಇರು. ನನ್ನ ಅಪ್ಪಣೆ ಯಾವುದಕ್ಕೂ ಕೇಳಬೇಡ" ಎಂದು ಸರ್ವ ಸ್ವತಂತ್ರ ನೀಡಿದ್ದರು.

ನಾನು ಮಾವ–ಪತಿಯಂತೆ ಸಾಹಿತ್ಯ ಕೃಷಿ ಮಾಡಬೇಕೆಂಬ ಹಂಬಲ ಇಟ್ಟುಕೊಂಡಿದ್ದೆ . ಆದರೆ ಸಂಸಾರ ನಿಭಾವಣೆಯ ಜವಾಬ್ದಾರಿಯಲ್ಲಿ ಸಾಧ್ಯವಾಗಲಿಲ್ಲ. ಆದರೆ ಅವರು ಮಾತ್ರ ದಿನದಿಂದ ದಿನಕ್ಕೆ ಹೊಸದಿಕ್ಕು ಹಿಡಿಯುತ್ತಾ ಸಾಹಿತ್ಯ ಲೋಕದ ಪರ್ಯಟನೆ ಮಾಡಿಬಿಟ್ಟರು. ಅವರು ಮೊದಲು ಬರೆದ ಸಣ್ಣ ಕತೆ 'ಲಿಂಗ ಬಂದ' (1957ರಲ್ಲಿ ಪ್ರಜಾವಾಣಿ ದೀಪಾವಳಿ ವಿಶೇಷಾಂಕ ಪ್ರಶಸ್ತಿ ಪಡೆದಿತ್ತು)ದಿಂದ ಮೊದಲ್ಗೊಂಡು ಮಿಲೇನಿಯಂ ಸೀರೀಸ್‌ವರೆಗೂ ಒಂದಕ್ಕೊಂದು ಭಿನ್ನ ಕಥಾವಸ್ತು ಲೇಖನ ಶೈಲಿಗಳನ್ನೇ ಆಶ್ರಯಿಸುತ್ತಾ ಹೋದರು. ಯಾವುದರಲ್ಲೂ ಏಕತಾನತೆ ಕಾಣದಂತೆ ನೋಡಿಕೊಂಡರು. ಈ ಕಾರಣಕ್ಕಾಗಿಯೆ ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯುವಂತಾಯಿತು.

1960ರಲ್ಲಿ 'ಸ್ವಗತ ಲಹರಿ'ಎಂಬ ಮೊದಲ ಕವನ ಸಂಕಲನ ಹೊರ ತಂದರೆ, 1964ರಲ್ಲಿ ವ್ಯಕ್ತಿ ವಿಶಿಷ್ಟ ಸಿದ್ದಾಂತ, ಯಮಲ ಪ್ರಶ್ನೆ ಎಂಬ ನಾಟಕ ಬರೆದರು. ಇವರ ಮೊದಲ ಕಥಾ ಸಂಕಲನ 'ಹುಲಿಯೂರಿನ ಸರಹದ್ದು, ಮತ್ತು ಕತೆಗಳು; ಮೊದಲ ಕಿರು ಕಾದಂಬರಿ 'ಸ್ವರೂಪ' 1966ರಲ್ಲಿ ಪ್ರಕಟವಾಯಿತು. ನಂತರ ಬರೆದದ್ದು ಕಾದಂಬರಿ ಕರ್ವಾಲೊ. 1988ರಲ್ಲಿ 'ಚಿದಂಬರ ರಹಸ್ಯ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು.ಹೆಚ್ಚು ಹೆಸರು ಸಂಪಾದಿಸಿಕೊಟ್ಟಿದ್ದು 'ಮಿಲೇನಿಯಂ ಸೀರೀಸ್'ನ 16 ಸಂಪುಟ ಹೊರ ತಂದಾಗ. ಯುವಜನ ಬಹಳ ಮೆಚ್ಚಿಕೊಂಡು ಅಂತಹ ಪುಸ್ತಕ ಸರಣಿ ಬೇಕೆಂದು ಭಾರಿ ಒತ್ತಾಯ ಕೇಳಿ ಬರತೊಡಗಿದಾಗ ಮತ್ತೆ 16 ಸಂಪುಟ ಹೊರ ತರುವ ಚಿಂತನೆ ನಡೆಸುತ್ತಿದ್ದರು. 'ಮಾಯಾಲೋಕ ಭಾಗ–1' ಬರೆದ ನಂತರ ಎರಡನೇ ಭಾಗಕ್ಕೂ ತಯಾರಿ



ನಡೆಸುತ್ತಿದ್ದರು. ಆದರೆ ವಿಧಿಬರಹ ಬೇರೆಯಾಗಿತ್ತು. ಅವರ ಕನಸುಗಳು ಅಪೂರ್ಣವಾದವು. ಅಷ್ಟೇ ಅಲ್ಲ ಕನ್ನಡಿಗರ ನಿರೀಕ್ಷೆಗಳು ಹುಸಿಯಾದವು. ಅವರ ಅಗಲುವಿಕೆ ನಿರ್ಮಿಸಿದ ನಿರ್ವಾತವನ್ನು ನೋಡುವಾಗಲೆಲ್ಲಾ ನನಗೆ ದುಃಖ ಇನ್ನಷ್ಟು ಹೆಚ್ಚಾಗುತ್ತದೆ.

ಅವರ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರಿದ ಮೂವರು ವ್ಯಕ್ತಿಗಳೆಂದರೆ ಭಾರತ ಕಂಡ ಅಪ್ರತಿಮ ಸಮಾಜವಾದಿ ರಾಮ್‌ಮನೋಹರ್ ಲೋಹಿಯಾ, ಕರ್ನಾಟಕ ಕಂಡ ಅದ್ಭುತ ಕಾದಂಬರಿಕಾರ ಶಿವರಾಮ ಕಾರಂತ ಹಾಗೂ ತಂದೆಯಾಗಿ ಗುರುವಾಗಿ, ಮಾರ್ಗದರ್ಶಿಯಾಗಿ, ಅವರೆಲ್ಲರ ಕೆಲಸಗಳಿಗೆ ಪ್ರೇರಕ ಶಕ್ತಿಯಾಗಿ ನಿಂತಿದ್ದ ಕುವೆಂಪು. ಈ ಮೂವರು ಅವರ ಬದುಕಿನ ಎಲ್ಲಾ ಸ್ತರಗಳಲ್ಲೂ ಆವರಿಸಿಕೊಂಡುಬಿಟ್ಟಿದ್ದರು. ಮೂವರ ವ್ಯಕ್ತಿತ್ವವೂ ಬದುಕಿನೆಡೆ ಭಿನ್ನ ದೃಷ್ಟಿಕೋನ ಇದ್ದಿದ್ದರಿಂದ ತೇಜಸ್ವಿ ಅವರಲ್ಲೂ ಪ್ರತಿಯೊಂದನ್ನೂ ಭಿನ್ನ ಭಿನ್ನವಾಗಿ ನೋಡುವ, ವಿಶ್ಲೇಷಿಸುವ ಬೌದ್ಧಿಕ ಶಕ್ತಿ ಅಗಾಧವಾಗಿ ಬೆಳೆಯಿತು. ಇದರಿಂದಾಗಿ ಯಾವುದನ್ನೂ ಸುಲಭವಾಗಿ ಒಪ್ಪಿಕೊಳ್ಳದ ಮನೋಭಾವ ಅವರಲ್ಲಿ ಪಡಿಮೂಡಿತ್ತು. ಪ್ರಕೃತಿಯಲ್ಲಿನ ಪಶು ಪಕ್ಷಿಗಳನ್ನಷ್ಟೇ ಅಲ್ಲದೆ, ಗಿಡಮರಗಳನ್ನೂ ಸೂಕ್ಷವಾಗಿ ಗಮನಿಸಿ ಆ ಕುರಿತು ಅಧ್ಯಯನ ಮಾಡಬಲ್ಲವ ರಾಗಿದ್ದರು. ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಎಲ್ಲಾ ಮೂಲಗಳಿಂದಲೂ ಹುಡುಕಿದ ನಂತರವೇ, ಬರವಣಿಗೆಗೆ ಇಳಿಯುತ್ತಿದ್ದರು. ಅವರ ಈ ತಾಳ್ಮೆ ಮತ್ತು ಅಧ್ಯಯನಶೀಲತೆ ನನ್ನಲ್ಲಿ ಇಂದಿಗೂ ಬೆರಗು ಮೂಡಿಸುತ್ತದೆ.

ಕನ್ನಡ ಭಾಷೆ ಉಳಿವು, ಬೆಳವಣಿಗೆ ಕುರಿತು ಅವರು ಚಿಂತನೆ ನಡೆಸಿದ್ದರು. ಜಾಗತಿಕ ಭಾಷೆಯಾದ ಇಂಗ್ಲಿಷ್ ನಮ್ಮೆಲ್ಲರ ಮನೆಮನಗಳನ್ನು ಆವರಿಸಿ ಬಿಟ್ಟಿದೆ. ಇದರಿಂದ ಕನ್ನಡ ಭಾಷೆ ಉಳಿದು ಬೆಳೆಯಲು ಸಾಹಿತ್ಯಿಕವಾಗಿ ಮಾತ್ರವಲ್ಲ ತಾಂತ್ರಿಕವಾಗಿಯೂ ಸಜ್ಜುಗೊಳ್ಳಬೇಕು. ಇಂದು ಕಂಪ್ಯೂಟರ್ ನಮ್ಮ ಬದುಕಿನ ಎಲ್ಲಾ ಸ್ತರಗಳಲ್ಲೂ ಹಬ್ಬಿ ಬಿಟ್ಟಿದೆ. ಮುಂದೊಂದು ದಿನ ಕಂಪ್ಯೂಟರ್ ಇಲ್ಲದ ದಿನವನ್ನು ಊಹಿಸಿಕೊಳ್ಳುವುದೂ ಅಸಾಧ್ಯ . ಇ–ಆಡಳಿತ, ಇ–ವಾಣಿಜ್ಯ, ಇ–ಶಿಕ್ಷಣ ಎಂಬಂತೆ ಎಲ್ಲಕ್ಕೂ ವಿದ್ಯುನ್ಮಾನ ಮಾಧ್ಯಮ ಹಾಸುಹೊಕ್ಕಾಗಿ ಬಿಟ್ಟಿದೆ. ಕನ್ನಡ ಭಾಷೆ ಭವಿಷ್ಯದ ಜಾಗತಿಕ ಸವಾಲು ಎದುರಿಸಲು ಕಂಪ್ಯೂಟರ್‌ನಲ್ಲಿ ಕನ್ನಡ ತಂತ್ರಾಂಶ ಬೇಕಾಗುತ್ತೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಕುವೆಂಪು ಕನ್ನಡ ತಂತಾಂಶ ಹೊರತರುವಲ್ಲಿ ಯಶಸ್ವಿಯಾದರು.

'ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು' ಎಂಬ ತಂದೆ ಕುವೆಂಪು ವಾದವನ್ನು ಒಪ್ಪುತ್ತಿದ್ದರಾದರೂ, ಜಾಗತಿಕ ಭಾಷೆಯಾದ ಇಂಗ್ಲಿಷನ್ನು ಅಷ್ಟೆ ಸದೃಢವಾಗಿ ಕಲಿತಿರಬೇಕು. ಇದಕ್ಕಾಗಿ ಪ್ರೌಢಶಾಲೆವರೆಗೆ ಕನ್ನಡ ಮಾಧ್ಯಮ ಕಡ್ಡಾಯವಾಗಿ ಮಕ್ಕಳು ಕಲಿಯಬೇಕೆಂದು ಬಲವಾಗಿ ಪ್ರತಿಪಾದಿಸುತ್ತಿದ್ದರು.

ಅವರ ನಿಲುವಿಗೆ ಕಾರಣ ಮಾತೃ ಭಾಷೆಯಲ್ಲಿ ಕಲಿತ ಮಕ್ಕಳು ವಿಶಾಲವಾಗಿ ವಿಷಯವನ್ನು ಚೆನ್ನಾಗಿ ಅರ್ಥೈಸುತ್ತವೆ ಎಂಬುದಾಗಿತ್ತು. ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳು ಉನ್ನತ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವಾಗ ಕಷ್ಟವಾಗುತ್ತೆ ಎಂಬ ಲೋಕ ರೂಢಿ ಆಪಾದನೆ ಒಪ್ಪುತ್ತಿರಲಿಲ್ಲ. ಪ್ರಾಥಮಿಕ ಹಂತದಿಂದಲೆ ಇಂಗ್ಲಿಷನ್ನು ಐಚ್ಛಿಕ ಭಾಷೆಯಾಗಿ ಕಲಿಯುತ್ತಾ ಬಂದರೆ, ಕಾಲೇಜು ಹಂತದಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಬದಲಾಯಿಸಿಕೊಳ್ಳುವಾಗ ತೊಡಕಾಗುವುದಿಲ್ಲ. ಕಲಿಯುವ ಶ್ರದ್ಧೆ, ಕಲಿಯುವ ಮತ್ತು ಕಲಿಸುವ ರೀತಿ ಸರಿ ಇದ್ದರೆ ಯಾವ ಸಮಸ್ಯೆಯೂ ಬಾಧಿಸುವುದಿಲ್ಲ ಎಂದು ಭಾವಿಸಿದ್ದರು. ಇದಕ್ಕೆ ತಮ್ಮಿಬ್ಬರ ಮಕ್ಕಳನ್ನ ಉದಾಹರಣೆ ಯಾಗಿಟ್ಟುಕೊಳ್ಳುತ್ತಿದ್ದರು.

ಅವರು ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲೆ ಓದಿದವರು. ನಮ್ಮ ಮಕ್ಕಳಾದ ಸುಶ್ಮಿತಾ, ಈಶಾನ್ಯ ಸಹ ಮೈಸೂರಿನ ಮಾನಸಗಂಗೋತ್ರಿ ಕನ್ನಡಶಾಲೆಯಲ್ಲೆ ಪ್ರಾಥಮಿಕ, ಮಹಾರಾಜದಲ್ಲಿ ಪ್ರೌಢಶಾಲೆವರೆಗೆ ವ್ಯಾಸಂಗ ಮಾಡಿದವರು. ಅವರಿಬ್ಬರು ಈಗ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿದ್ದಾರೆ. ಎಲ್ಲಾ ಕನ್ನಡ ಮಾಧ್ಯಮದ ಮಕ್ಕಳಂತೇ ಇವರು ಕಾಲೇಜು ಸೇರಿದಾಗ ಕಷ್ಟಪಟ್ಟರು. ಆದರೆ ಬಹುಬೇಗ ಇಂಗ್ಲಿಷ್ ಮಾಧ್ಯಮದಲ್ಲಿ ಹಿಡಿತ ಸಾಧಿಸಿದ್ದರು. ಅದರಲ್ಲೂ ಈಶಾನ್ಯೆ ಕಾಲೇಜಿನ ಆರಂಭದ ದಿನಗಳಲ್ಲಿ ಹೊಂದಿಕೊಳ್ಳಲಾರದೆ ಅತ್ತೇ ಬಿಟ್ಟಿದ್ದಳು. ಆದರೆ ಕೆಲವೇ ತಿಂಗಳಲ್ಲಿ ಇಂಗ್ಲಿಷ್ ಭಾಷೆ ಮೇಲೆ ಪಾಂಡಿತ್ಯಗಳಿಸಿದಳು. 'ಲಾರೆನ್ಸ್ ಇಂಗಲ್ಸ್'ನ ಪುಸ್ತಕ ಕನ್ನಡ ಅನುವಾದ ಮಾಡಿದ್ದಲ್ಲದೆ, ಈಗ ಗೆರಾಲ್ಡ್ ಡ್ಯೂರಲ್‌ನ ಕೃತಿಯನ್ನು ಭಾಷಾಂತರಿಸುವ ತಯಾರಿಯಲ್ಲಿದ್ದಾಳೆ. ಇಬ್ಬರು ಮಕ್ಕಳೂ ಸ್ವಸಾಮರ್ಥ್ಯ, ಸ್ವಂತ ಪರಿಶ್ರಮದ ಮೇಲೆ ಬೆಳೆದರೆ ಹೊರತು, ಅಪ್ಪನ-ತಾತನ ಯಾವ ಪ್ರಭಾವವನ್ನೂ ಬಳಸಿಕೊಳ್ಳಲಿಲ್ಲ. ಸ್ವಂತ ಛಲ-ಬಲದ ಮೇಲೆ ಮಕ್ಕಳು ಬೆಳೆಯಬೇಕೆಂಬ ತೇಜಸ್ವಿ ಅವರ ಆಸೆಗೆ ಚ್ಯುತಿ ಬಾರದ ಹಾಗೆ ವಿದ್ಯಾವಂತರಾದರು.

ತೇಜಸ್ವಿಯವರನ್ನ ನಾನು ವಿವಾಹವಾದಾಗಲು ಜಾತಿಯೇ ಗಡಿದಾಟಿ ಬಿಟ್ಟಿದ್ದವು. ಅಲ್ಲಿಂದ ಮುಂದೆ ಜಾತಿಯ ವಿಷಯವೇ ನಮ್ಮ ಮನೆಯಲ್ಲಿ ಬಂದಿಲ್ಲ. ನಮ್ಮಿಬ್ಬರು ಮಕ್ಕಳು ಅವರಿಷ್ಟ ಪಟ್ಟಂತೆಯೇ ಜಾತಿಯ ಗಡಿದಾಟಿ ವಿವಾಹವಾದರು. ಸುಶ್ಮಿತಾ ಮಂಗಳೂರು ಮೂಲದ ದೀಪಕ್ ಶೆಣೈರನ್ನು ಮದುವೆಯಾದರೆ, ಈಶಾನ್ಯ ಮೈಸೂರಿನ ಪ್ರಭಾ ಚಿತ್ರಮಂದಿರ ಹಿಂಭಾಗ ಇರುವ ಆಟೋಮೊಬೈಲ್ ಡೀಲರ್ ವಿ.ಎಸ್. ಖಾನೋಲ್ಕರ್ ಕುಟುಂಬದ ಮನು ಖಾನೋಲ್ಕರ್ ಮಗ ಜ್ಞಾನೇಶ್ ಖಾನೋಲ್ಕರ್‌ನ್ನು ಮದುವೆಯಾಗಿ ಬೆಂಗಳೂರಿನಲ್ಲೆ ನೆಲೆಸಿದ್ದಾಳೆ.

ಅವರೊಂದಿನ್ನಷ್ಟು ವರ್ಷ ಬದುಕಿದ್ದರೆ ಕನ್ನಡಕ್ಕೆ ಮತ್ತೊಂದು ಜ್ಞಾನ ಪೀಠ ಪ್ರಶಸ್ತಿ ಬರುತ್ತಿತ್ತು. ತಂದೆ-ಮಗ ಇಬ್ಬರೂ ಜ್ಞಾನಪೀಠ ಪ್ರಶಸ್ತಿ ಪಡೆದ ದೇಶದ ಮೊದಲಿಗರೆಂಬ ಹೆಗ್ಗಳಿಕೆ ಕನ್ನಡಕ್ಕೆ ಬರುತಿತ್ತೆಂಬ ಮಾತನ್ನು ಹಲವರು ಹೇಳಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಅವರು ಬದುಕಿದ್ದರೆ ಜ್ಞಾನಪೀಠ ಬರುತಿತ್ತೋ ಬಿಡುತಿತ್ತೋ, ಆದರೆ ಕನ್ನಡಿಗರ ಜ್ಞಾನಭಂಡಾರ ಮತ್ತಷ್ಟು ಸಮೃದ್ಧವಾಗುತ್ತಿತ್ತು. ಇವರ ಹಲವು ಕಾದಂಬರಿಗಳು ಚಲನಚಿತ್ರಗಳಾಗಿವೆ. 1988ರಲ್ಲಿ ತೇಜಸ್ವಿ ಅವರ "ತಬರನ ಕತೆ" ಚಲನಚಿತ್ರವಾಗಿ ಕೇಂದ್ರ ಸರ್ಕಾರ ನೀಡುವ ಅತ್ಯುತ್ತಮ ಪ್ರಥಮ ಚಿತ್ರ ಪ್ರಶಸ್ತಿ ಜೊತೆಗೆ, ಇದರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, ಈ ಚಿತ್ರದಲ್ಲಿ ಅಭಿನಯಿಸಿದ ನಟ ಕಮಲ ಹಾಸನ್ ಅಣ್ಣ ಹಾಗು ನಟಿ ಸುಹಾಸಿನಿ ತಂದೆ ಚಾರು ಹಾಸನ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಬಂದಿತು. ಈ ಮೂಲಕ ಅಭಿನಯಕ್ಕಾಗಿ ಒಂದೇ ಕುಟುಂಬದ ಮೂರು ಮಂದಿ ಪ್ರಶಸ್ತಿ ಗೆದ್ದ ಹೆಗ್ಗಳಿಕೆ ಹಾಸನ್ ಕುಟುಂಬ ಸಂಪಾದಿಸಿತು.

ಹಾಗೇ, 1973ರಲ್ಲಿ ಚಲನಚಿತ್ರವಾದ ತೇಜಸ್ವಿ ಅವರ ಕತೆ ಆಧರಿಸಿ ಖ್ಯಾತ ಕಲಾತ್ಮಕ ಚಿತ್ರಗಳ ನಿರ್ದೇಶಕ ಎನ್.ಲಕ್ಷ್ಮಿ ನಾರಾಯಣ್ ನಿರ್ದೇಶಿಸಿದ "ಅಬಚೂರಿನ ಪೋಸ್ಟ್ ಆಫೀಸ್" ಕೇಂದ್ರ ಸರ್ಕಾರದ ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ ಪಡೆದಿತ್ತು. (2015ರಲ್ಲಿ ತೇಜಸ್ವಿ ಅವರ ಜನಪ್ರಿಯ ಕಾದಂಬರಿ "ಕಿರಂಗೂರಿನ ಗಯ್ಯಾಳಿಗಳು" ಚಲನಚಿತ್ರವಾಗಿಸಿದ ಮಹಿಳಾ ನಿರ್ದೇಶಕಿ ಸುಮನಾ ಕಿತ್ತೂರು ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದಿದ್ದರು) ಕೃಷಿ, ಸಾಹಿತ್ಯ, ಪರಿಸರ, ಹೋರಾಟ ಎಂಬಿತ್ಯಾದಿ ಹಲವಾರು ಮಗ್ಗಲು ಗಳೊಂದಿಗೆ ಹೊರಳಿಕೊಳ್ಳುತ್ತಾ ಬದುಕಿನ ರಥವನ್ನು (ಜನನ 1938ರ ಸೆಪ್ಟೆಂಬರ್.8) 69ವರ್ಷ ಕಾಲ ಉರುಳಿಸಿಕೊಂಡು ಬಂದರು. ಇನ್ನೂ ಮಾಡುವ ಕೆಲಸ ಬಹಳ ಇದೆ ಎಂದು ಹೇಳುತ್ತಲೆ 2007ರ ಏಪ್ರಿಲ್ 5ರ ಮಧ್ಯಾಹ್ನ ಥಟ್ಟಂತ ಹೋಗಿಬಿಟ್ಟರು.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಹುಟ್ಟಿ, ಚಿಕ್ಕಮಗಳೂರು ಜಿಲ್ಲೆಯ ತಾಲೂಕು ಮೂಡಿಗೆರೆಯಲ್ಲಿ ಸಾವಿನೊಂದಿಗೆ ಪ್ರಕೃತಿಯಲ್ಲಿ ಲೀನವಾದ ಅವರ ಬಗೆಗಿನ ಬದುಕಿನ ನೆನಪುಗಳನ್ನು ಕಿರು ಹೊತ್ತಿಗೆಯಲ್ಲಿ ಡಿಸೆಂಬರ್‌ನಲ್ಲಿ ತರಬೇಕೆಂದಿದ್ದೇನೆ. ಹಾಗೆಯೇ ಪತ್ರಿಕೆಗಳಿಗೆ ಅವರು ಬರೆದ ಲೇಖನಗಳ ಸಂಗ್ರಹ ಮಾಡಿ 'ಹೊಸ ವಿಚಾರಗಳು' ಎಂಬ ಶೀರ್ಷಿಕೆಯಡಿ ಪುಸ್ತಕ ಹೊರ ತರುವ ಕಾರ್ಯದಲ್ಲಿ ಈಗ ಅಣಿಯಾಗಿದ್ದೇನೆ. ಅವರು ಮಾಡಬೇಕೆಂದುಕೊಂಡಿದ್ದ ಬೆಟ್ಟದಷ್ಟು ಕೆಲಸದಲ್ಲಿ ಹಿಡಿಯಷ್ಟನ್ನಾದರೂ ನನ್ನ ಜೀವಿತಾವಧಿಯಲ್ಲಿ ಮಾಡಬೇಕೆಂಬ ಸಂಕಲ್ಪ ನನ್ನದು.

(ಶ್ರೀಮತಿ ರಾಜೇಶ್ವರಿ ತೇಜಸ್ವಿ ಅವರು ದಿ.14-12-2021 ರಂದು ನಿಧನರಾದರು. ಅವರ ನಾಲ್ಕನೇ ಪುಣ್ಯಸ್ಮರಣೆಗಾಗಿ 2010ರಲ್ಲಿ ನಡೆಸಿದ ಸಂದರ್ಶನ ಪ್ರಕಟಿಸಲಾಗಿದೆ.)

# ಮತಾಂಧತೆ ಮತ್ತು ಮೂರ್ಖತನ



**ಟಿಪ್ಪುವಿನ ಎರಡು ಮುಖಗಳು**

ಭಾಗ–2

**(ಕಳೆದ ಸಂಚಿಕೆಯಿಂದ)**

ಹೀಗಾಗಿಯೇ, ಬ್ರಿಟಿಷರು ಮೂರನೇ ಮೈಸೂರು ಯುದ್ಧದಲ್ಲಿ ಟಿಪ್ಪುವನ್ನು ಸೋಲಿಸಿದಾಗ ಅವನೊಂದಿಗೆ ರಾಜಿ ಒಪ್ಪಂದ ಮಾಡಿಕೊಳ್ಳದೆ ಅವನ ಮಕ್ಕಳನ್ನೆ ಒತ್ತೆ ಇಟ್ಟುಕೊಂಡು ಅವನಿಗೆ ಸನ್ಮಾರ್ಗ ಕಲಿಸಲು ಯತ್ನಿಸಿದರು. ಆದರೆ ಪುಂಡು ಮನಸ್ಥಿತಿಯ ಟಿಪ್ಪು ಕೇರಳದ ಮಲಬಾರಿ ಜನರನ್ನು ಕ್ರೂರವಾಗಿ ಹಿಂಸಿಸಿ ಮತಾಂತರ ಮುಂದುವರೆಸಿದಾಗ, ಮೀರ್ ಸಾದಿಕ್ ಬ್ರಿಟಿಷರ ಜೊತೆ ಕೈಜೋಡಿಸಲು ಮುಂದಾದ. ಆದರೆ, ದಿವಾನ್ ಪೂರ್ಣಯ್ಯ ಇದಕ್ಕೆ ಅವಕಾಶ ಕೊಡದೆ, ಮೈಸೂರಿನ ರಾಜಮಾತೆ ಲಕ್ಷ್ಮಮ್ಮಣ್ಣಿಯೊಂದಿಗೆ ರಹಸ್ಯ ಒಪ್ಪಂದ ಮಾಡಿಕೊಂಡು ಟಿಪ್ಪುವನ್ನು ಅವನ ಕೋಟೆಯಲ್ಲೆ ಕಟ್ಟಿ ಹಾಕಿ ಕೊಲ್ಲುವಂತೆ ಮಾಡಿದರು. ಟಿಪ್ಪು ಮತಾಂಧನಾಗಿರದಿದ್ದರೆ,ಕರ್ನಾಟಕದ ಕರಾವಳಿ ತೀರದಲ್ಲಿ,ಕೇರಳದಲ್ಲಿ ಮುಸ್ಲಿಮರು ಇರುತ್ತಿರಲಿಲ್ಲ. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಟಿಪ್ಪು ಸೋಲುತ್ತಲೂ ಇರಲಿಲ್ಲ. ಹಾಗೆಯೇ,ಹೀನಾಯವಾಗಿ ಆತ ಸಾಯುತ್ತಲೂ ಇರಲಿಲ್ಲ. ಸತ್ಯದ ಇತಿಹಾಸ ತಿಳಿಯದೆ ಬ್ರಿಟಿಷರೊಂದಿಗೆ ಹೋರಾಡಿದ್ದೆ ಶೂರತನ ಎಂಬಂತೆ ಮಾತಾಡುವ ಮೂರ್ಖರು ಹೆಚ್ಚಾಗುತಿರುವುದರಿಂದಲೇ ಇಂದು ಟಿಪ್ಪು ಗುಣಗಾನ ನಡೆಯುತ್ತಿದೆ.

ಟಿಪ್ಪು ಬ್ರಿಟಿಷರೊಂದಿಗೆ ರಾಜಿ ಮಾಡಿಕೊಂಡಿದ್ದರೆ, ಅವರ ವಂಶಸ್ಥರೆ ಇಂದಿನವರೆಗೂ ಅರಮನೆಯ ವೈಭೋಗದಲ್ಲಿ ಮೆರೆಯುತ್ತಿದ್ದರೆಂದು ಕೆಲ ತಿಳಿಗೇಡಿಗಳು ಮಾತನಾಡುತ್ತಾರೆ. ಹೈದರಾಲಿ–ಟಿಪ್ಪುವಿನ ವಿಷಕಾರಿ ಮನಸ್ಥಿತಿ ಕಂಡೇ ಹೈದರಾಬಾದಿನ ನಿಜಾಮ ಕೂಡಾ ಅವನ ಪುಂಡಾಟಿಕೆ ಬೆಂಬಲಿಸಿರಲಿಲ್ಲ. ವಾಸ್ತವವಾಗಿ ಟಿಪ್ಪುವನ್ನು ಸೋಲಿಸಿದ್ದು ಮೈಸೂರು ಸಂಸ್ಥಾನದ ಜನರೇ ಹೊರತು,ಬ್ರಿಟಿಷರಲ್ಲ. ಟಿಪ್ಪು ಆಸ್ಥಾನದಲ್ಲಿ ದಿವಾನರಾಗಿದ್ದ ಪೂರ್ಣಯ್ಯನವರೆ ಅವನ ಮತಾಂಧತನ ಕಂಡು ತಿರುಗಿ ಬಿದ್ದಿದ್ದರು.

**ಟಿಪ್ಪು ಮತಾಂಧತೆಗೆ ಸಿರಾಜುದ್ದಿನ್‌ದೌಲನೇ ಸ್ಫೂರ್ತಿ:**

ಇಂದು ಬಾಂಗ್ಲಾ ದೇಶ ಸೃಷ್ಟಿಯಾಗಲು ಕ್ರಿ.ಶ.1905ರಲ್ಲಿ ಬ್ರಿಟಿಷರು ಬಂಗಾಳ ರಾಜ್ಯವನ್ನು ಎರಡು ಭಾಗಗಳಾಗಿಸಿದ್ದರು. ಹಿಂದೂ–ಮುಸ್ಲಿಂ ಧರ್ಮದ ಆಧಾರದಲ್ಲಿ ಬಂಗಾಳ ವಿಭಜಿಸಲು ಬ್ರಿಟಿಷರಿಗೆ ಅವಕಾಶ ಸಿಕ್ಕಿದ್ದು,ಕ್ರಿ.ಶ.1757ರ ಪ್ಲಾಸಿ ಕದನದಲ್ಲಿ ಹತನಾದ ಬಂಗಾಳದ ನವಾಬ ಮಿರ್ಜಾ ಮುಹಮ್ಮದ್‌ಸಿರಾಜುದ್ದಿನ್‌ದೌಲ. ಈತ ಬಂಗಾಳ ಸಮುದ್ರ ತೀರ ಪ್ರದೇಶಗಳಲ್ಲಿದ್ದ ಹಿಂದೂಗಳನ್ನು ಮತಾಂತರಿಸಿ, ಬಂಗಾಳ ಕೊಲ್ಲಿಯನ್ನು ಮುಸ್ಲಿಂ ಬಾಹುಳ್ಯವಾಗಿಸಿದ್ದ. ಈಸ್ಟ್ ಇಂಡಿಯಾ ಕಂಪೆನಿಯ ಕಿಲಾಡಿ ಸೇನಾಧಿಕಾರಿ ರಾಬರ್ಟ್ ಕ್ಲೈವ್ ಪ್ಲಾಸಿ ಕದನದಲ್ಲಿ ಮಣಿಸಿರದಿದ್ದರೆ, ಅಳಿದುಳಿದ ಹಿಂದೂ ಬಂಗಾಳಿಗಳೂ ಸಹ ಇಸ್ಲಾಂಗೆ ಮತಾಂತರ ಹೊಂದಿರುತ್ತಿದ್ದರು.

ಸಿರಾಜುದ್ದಿನ್ ದೌಲ ಕ್ರಿ.ಶ.1757ರ ಪ್ಲಾಸಿ ಕದನದಲ್ಲಿ ಹತನಾದಾಗ ಟಿಪ್ಪು 5 ವರ್ಷದ ಮಗು. ಇವನ ತಾತ ಫತೇ ಮಹಮದ್ ಅಲಿ, ಇವನ ತಂದೆ ಹೈದರ್ ಅಲಿ, ದೊಡ್ಡಪ್ಪ, ಅಕ್ಬರ್ ಅಲಿ ತಮಿಳುನಾಡಿನ ಆರ್ಕಾಟ್ ನವಾಬನ ಬಳಿ ಸೈನಿಕರಾಗಿ ಕೆಲಸ ಮಾಡುತ್ತಿದ್ದರು. ಮೈಸೂರು ಸಂಸ್ಥಾನಕ್ಕೆ ಹೈದರಾಲಿ ಬರಲು ಮೂಲ ಕಾರಣ ದಳವಾಯಿ (ಮಂತ್ರಿ ಅಥವ ಸೇನಾಪತಿ) ಗಳಾದ ಕಳಲೇದೇವರಾಜಯ್ಯ ಹಾಗೂ ನಂಜರಾಜಯ್ಯ. ಕ್ರಿ.ಶ. 1734–1766ರವರೆಗೆ ಆಳಿದ ಇಮ್ಮಡಿ ಕೃಷ್ಣರಾಜ ಒಡೆಯರ್‌ವರೆಗೂ ಯದುವಂಶದ ಆಳ್ವಿಕೆ ನಿರಂತರವಾಗಿ ನಡೆದುಕೊಂಡು ಬಂದಿತ್ತು.

ಆದರೆ ಕಳಲೇದೇವರಾಜಯ್ಯ ಹಾಗೂ ನಂಜರಾಜಯ್ಯ ಎಂಬ ದಳವಾಯಿಗಳ ಪಿತೂರಿಯಿಂದ ದುರ್ಬಲರಾದ ಇಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಅಧಿಕಾರದಿಂದ ಪಲ್ಲಟಗೊಳಿಸುವಲ್ಲಿ ಕುದುರೆ ದಳ ನೋಡಿಕೊಳ್ಳುತ್ತಿದ್ದ ಸೈನಿಕ ಹೈದರಾಲಿ ಯಶಸ್ವಿಯಾಗಿದ್ದ. ಮೊಘಲ್ ಸಾಮ್ರಾಟರ ದಕ್ಷಿಣಭಾರತದ ಪ್ರತಿನಿಧಿಯಾಗಿದ್ದ ತಮಿಳುನಾಡಿನ ಆರ್ಕಾಟ್ ನವಾಬನ ಬಳಿ ಹೈದರ್‌ಅಲಿ ತಂದೆ ಫತೇ ಮಹಮದ್ ಸೈನಿಕರಾಗಿದ್ದರು. ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಜನಿಸಿದ ಹೈದರ್‌ಅಲಿ ತನ್ನ ಅಣ್ಣ ಅಕ್ಬರ್ ಅಲಿಯೊಂದಿಗೆ ಆರ್ಕಾಟ್ ಸೇನಾ ದಳ ಸೇರಿದ್ದ. ಅಲ್ಲಿ ಸ್ಥಳೀಯವಾಗಿ ಹೇಗೆ ಸಾಮ್ರಾಜ್ಯ ವಿಸ್ತರಿಸಬಹುದು ಎಂಬುದನ್ನು ತಿಳಿದುಕೊಂಡ. ಮೈಸೂರು ಸಂಸ್ಥಾನದ ದಳವಾಯಿ (ಮಂತ್ರಿ ಮತ್ತು ಸೇನಾಪತಿ) ದೇವರಾಜರ ಮೂಲಕ ಕುದುರೆದಳ ಸಿದ್ದಪಡಿಸಿಕೊಡುವ ಕೆಲಸಕ್ಕೆ ನಿಯೋಜಿತನಾದ.

ಕ್ರಿ.ಶ.1749ರಲ್ಲಿ ಬೆಂಗಳೂರಿನ ದೇವನಹಳ್ಳಿ ಕೋಟೆಯನ್ನು ಮುತ್ತಿಗೆ ಹಾಕಿ ವಶಪಡಿಸಿಕೊಳ್ಳುವುದರಲ್ಲಿ ತೋರಿಸಿದ ಹೈದರ್‌ಅಲಿ ಯುದ್ಧ ಕೌಶಲ್ಯ ಗಮನಿಸಿ, ಒಂದು ಸೇನಾ ತುಕಡಿಯ ಮುಖ್ಯಸ್ಥನನ್ನಾಗಿಸಿದ. ಹೀಗೇ ಹಂತಹಂತವಾಗಿ ಮೈಸೂರು ಸೇನೆಯಲ್ಲಿ ಉನ್ನತ ಹುದ್ದೆ ಏರುತ್ತಾ ಹೋದ ಹೈದರಾಲಿ, ಮೈಸೂರು ರಾಜಾಧಿಕಾರ ಕಬಳಿಸಲು ಒಳ ಸಂಚು ರೂಪಿಸಿದ್ದ ದಳವಾಯಿ ದೇವರಾಜ ಮತ್ತು ಸರ್ವಾಧಿಕಾರಿ ನಂಜರಾಜರಿಗೆ ಚಳ್ಳೆ ಹಣ್ಣು ತಿನ್ನಿಸಿದ. ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರ್ ವಿಶ್ವಾಸ ಗಳಿಸುತ್ತಾ, ಸೇನಾಧಿಪತಿಯಾದ. ನಂತರ ಅವರನ್ನೇ ಮೂಲೆಗುಂಪು ಮಾಡಿದ. ಇಂಥ ಸೇನಾ ಚತುರ ಹೈದರಾಲಿ ಪೂರ್ಣ ಹೆಸರು ಸೈಯದ್ ವಾಲ್ ಷರೀಫ್ ಹೈದರ್ ಅಲಿಖಾನ್. ಕಡಪ ಜಿಲ್ಲೆಯ ಕೋಟೆ ಕಾವಲುಗಾರನ ಮಗಳು ಫಾತಿಮಾರನ್ನು ವಿವಾಹವಾಗಿದ್ದ. ಇವರ ಏಕಮಾತ್ರ ಪುತ್ರ ಟಿಪ್ಪು ಕ್ರಿ.ಶ.1751ರ ಡಿಸೆಂಬರ್.1 ರಂದು ಜನಿಸಿದ. ಬಹಳ ವರ್ಷಗಳಿಂದ ಮಕ್ಕಳಿಲ್ಲದೆ ಕೊರಗುತ್ತಿದ್ದ ಹೈದರ್‌ಅಲಿ ಚಿತ್ರದುರ್ಗ ಬಳಿಯ ತಿಪ್ಪೇರುದ್ರಸ್ವಾಮಿಗೆ ಹರಕೆ ಹೊತ್ತಿದ್ದರಿಂದ ಜನಿಸಿದ ಮಗುವಿಗೆ ತಿಪ್ಪು ಅಂತ ಹೆಸರಿಟ್ಟ ಅಂತ ಜನಪದರ ಕತೆ ಇದೆ. ಆದರೆ, ತಿಪ್ಪು ಮಸ್ತಾನ್ ಎಂಬ ಫಕೀರನ ಆಶೀರ್ವಾದದಿಂದ ಜನಿಸಿದ್ದಕ್ಕೆ ತಿಪ್ಪು ಅಂತ ಹೆಸರಿಟ್ಟ ಅನ್ನಲಾಗುತ್ತೆ. ತಿಪ್ಪು ಹೆಸರು ಬ್ರಿಟಿಷರ ಬಾಯಲ್ಲಿ ಟಿಪ್ಪು ಆಯಿತು.

ಕ್ರಿ.ಶ.1766ರಲ್ಲಿ ಎರಡನೆಯ ಕೃಷ್ಣರಾಜ ಒಡೆಯರ್ ಅವರ ಮರಣಾನಂತರ ಮೈಸೂರಿನ ಸೇನಾಧಿಪತಿಯಾಗಿದ್ದ ಹೈದರ್ ಅಲಿ ರಾಜಮನೆತನದವರನ್ನು ಮೈಸೂರಿನ ಅರಮನೆಗೆ ಕಳುಹಿಸಿ, ಶ್ರೀರಂಗಪಟ್ಟಣ ಪ್ರದೇಶದ ಆಡಳಿತವನ್ನು ಕೈಗೆ ತೆಗೆದುಕೊಂಡ.



ಉರ್ದು ಮಾತಾಡುವ ಮುಸ್ಲಿಂ ಸೈನಿಕರಿಗೆ ಭಾಷಾ ಸಂವಹನ ತಿಳಿದಿದ್ದರಿಂದ ಭಾರತದ ಯಾವ ಭಾಗದಲ್ಲಾದರೂ ಮುಸ್ಲಿಂ ಆಡಳಿತಗಾರರ ಸೇನೆ ಸೇರುತ್ತಿದ್ದರು. ಇವರೆಲ್ಲಾ ಬಾಡಿಗೆ ಆಧಾರದ ಮೇಲೆ ಸಿಗುತ್ತಿದ್ದರಿಂದ ಬಂಗಾಳದ ಸಿರಾಜುದ್ದಿನ್‌ದೌಲನ ಬಳಿ ಇದ್ದ ಸೈನಿಕರು ಆರ್ಕಾಟ್ ನವಾಬನ ಸೇನೆ ಸೇರಿದ್ದರು. ಇವನ ಪತನದ ನಂತರ ಹೈದರ್ ಅಲಿ ಮೂಲಕ ಮೈಸೂರು ಸೇನೆ ಸೇರಿದ್ದರು. ಇವರೆಲ್ಲಾ ಹರಿತವಾದ ಕತ್ತಿ, ನುರಿತವಾದ ಯುದ್ಧ ಕೌಶಲ್ಯ ತಿಳಿದಿದ್ದರಿಂದ ಈ ಬಾಡಿಗೆ ಸೈನಿಕರಿಗೆ ಸದಾ ಬೇಡಿಕೆ ಇದ್ದೇ ಇತ್ತು. ಇವರನ್ನೆಲ್ಲಾ ಸೇರಿಸಿಕೊಂಡು ಬಲಿಷ್ಠವಾದ ಸೈನ್ಯ ಕಟ್ಟಿದ ಹೈದರ್ ಅಲಿ ಎರಡನೇ ಮೈಸೂರು ಯುದ್ಧದಲ್ಲಿ ಆಂಗ್ಲರೊಂದಿಗೆ ಹೋರಾಡುವಾಗ ಕ್ರಿ.ಶ.1782ರಲ್ಲಿ ಚಿತ್ತೂರು ಬಳಿ ಮರಣಹೊಂದಿದ. ಹೈದರ್‌ನ ಪುತ್ರನಾದ ಟಿಪ್ಪು ಬ್ರಿಟಿಷರೊಂದಿಗೆ ಮದರಾಸಿನಲ್ಲಿ ಶಾಂತಿ ಒಪ್ಪಂದ ಮಾಡಿಕೊಂಡು, ಮೈಸೂರು ಸಂಸ್ಥಾನದ ಸುಲ್ತಾನನಾದ.

ಐರೋಪ್ಯರ ವಿಸ್ತರಣೆಯನ್ನು ತಡೆಯಲು ಟಿಪ್ಪು ಸುಲ್ತಾನನು ಮತ್ತೆರಡು ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ತೊಡಗಿದ. ಕ್ರಿ.ಶ.1792ರ ಮೂರನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಭಾಗಶಃ ಸೋತು ಕದನ ಸಂಧಾನ ಮಾಡಿಕೊಂಡ. ಇದಕ್ಕಾಗಿ ತನ್ನ ಇಬ್ಬರು ಗಂಡು ಮಕ್ಕಳನ್ನು ಬ್ರಿಟಿಷರ ಬಳಿ ಒತ್ತೆಯಾಳಾಗಿಟ್ಟಿದ್ದ. ಕ್ರಿ.ಶ.1799ರ ಮೇ.4ರಂದು ಶನಿವಾರ ಮಧ್ಯಾಹ್ನ ನಡೆದ ನಾಲ್ಕನೆಯ ಹಾಗು ಕೊನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ ಮರಣ

ಹೊಂದಿದ. ಟಿಪ್ಪು ಕಾಲಾನಂತರ ಮೈಸೂರು ಸಂಸ್ಥಾನ ಮತ್ತೆ ಒಡೆಯರ್ ವಂಶಸ್ಥರ ಪಾಲಾಯಿತು. ಮಹಾರಾಣಿ ಲಕ್ಷ್ಮೀದೇವಿ ಬ್ರಿಟೀಷರೊಂದಿಗೆ ಒಪ್ಪಂದ ಮಾಡಿಕೊಂಡರು. ಇದರಿಂದ ಕ್ರಿ.ಶ.1799ರ ಜುಲೈ.4 ರಂದು ಗುರುವಾರ 5 ವರ್ಷದ ಬಾಲಕ ಮುಮ್ಮಡಿಕೃಷ್ಣ ರಾಜ ಒಡೆಯರ್‌ಗೆ ಪಟ್ಟಾಭಿಷೇಕವಾಯಿತು.

ಸಿರಾಜುದ್ದಿನ್‌ದೌಲನನ್ನೆ ಅನುಕರಣೆ ಮಾಡಿದ ಟಿಪ್ಪು ಸುಲ್ತಾನ್, ಕರ್ನಾಟಕ-ಕೇರಳದ ಕರಾವಳಿ ತೀರವನ್ನು ಇಸ್ಲಾಮೀಕರಣಗೊಳಿಸಲು ಅವ್ಯಾಹತವಾಗಿ ತನ್ನ ಮತಾಂಧ ಸೇನಾ ಪಡೆಗಳಿಂದ ಮತಾಂತರ ನಡೆಸಿದ. ಈತನನ್ನು ಲಾರ್ಡ್ ವೆಲ್ಲೆಸ್ಲಿ ಯುದ್ದ ಮಾಡಿ ಕೊಂದಿರದಿದ್ದರೆ, ಕ್ರಿ.ಶ.1947ರ ಸ್ವಾತಂತ್ರ್ಯದ ಹೊತ್ತಿಗಾಗಲೇ ಪೂರ್ವ ಪಾಕಿಸ್ತಾನ-ಪಶ್ಚಿಮ ಪಾಕಿಸ್ತಾನ ಅಂತ ವಿಭಜಿಸುವಾಗ ದಕ್ಷಿಣ ಪಾಕಿಸ್ತಾನ ಅಂತಾನೂ ಹುಟ್ಟಿಕೊಳ್ಳುತ್ತಿತ್ತು. ದಕ್ಷಿಣ ಭಾರತವನ್ನು ಇಸ್ಲಾಮಿಕ್ ರಾಜ್ಯ ಮಾಡುವ ಟಿಪ್ಪು ಆಲೋಚನೆಯನ್ನು ಜಾರಿಗೆ ತರಲು ಕೇರಳಾದಲ್ಲಿ ಇತ್ತೀಚೆಗೆ ಮದನಿ ನೇತೃತ್ವದಲ್ಲಿ ಮುಸ್ಲಿಂ ಭಯೋತ್ಪಾದಕರು ಹುಟ್ಟಿಕೊಂಡಿದ್ದಾರೆ. ಆ ಗುಂಪೇ 2008ರಲ್ಲಿ ಬೆಂಗಳೂರಿನ ಕ್ರಿಕೆಟ್ ಸ್ಟೇಡಿಯಂ ಮತ್ತಿತರ ಕಡೆ ಬಾಂಬ್ ಇಟ್ಟು, ಅಮಾಯಕ ಮಹಿಳೆಯೊಬ್ಬರನ್ನು ಬಲಿ ತೆಗೆದುಕೊಂಡಿದ್ದರು.

ಕೇರಳ ಗಡಿ ಭಾಗವಾದ ಮೈಸೂರು, ಕೊಡಗು, ಮಂಗಳೂರು, ಶಿವಮೊಗ್ಗ, ಬೆಂಗಳೂರುಗಳಲ್ಲಿ ಕೋಮುವ್ಯಾಧಿ ಮುಸ್ಲಿಂ ಮತಾಂಧತೆ ಬೆಳೆಯುತ್ತಿದೆ. ಹಿಂದೂ ಸಂಘಟನೆಯ ಕಾರ್ಯಕರ್ತರನ್ನು ಬರ್ಬರವಾಗಿ ಕೊಲ್ಲುತ್ತಿದ್ದಾರೆ. ಕರಾವಳಿ ಹೊರತು, ಬೇರೆಡೆ ಹಿಂದೂ ಸಂಘಟನೆಗಳಿಂದ ಪ್ರತೀಕಾರದ




ಹತ್ಯೆ ಗೀಳು ಬೆಳೆದಿಲ್ಲ. ಇದೊಂದು ಸಮಾಧಾನಕರ ಸಂಗತಿಯಾದರೂ, ಬೆಂಗಳೂರಿನ ಶಾಸಕ ಹ್ಯಾರೀಸ್ ಮಗ ಮೊಹಮದ್ ನಲ್ಪಾಡ್‌ನಂಥ ಪುಂಡ ರಾಜ್ಯ ಯುವ ಕಾಂಗ್ರೆಸ್ ಚುಕ್ಕಾಣಿ ಹಿಡಿಯುತ್ತಿರುವುದು, ಪೋಲೀಸ್ ಅಧಿಕಾರಿಗಳು ಇಂಥ ಪುಂಡ ನಲ್ಪಾಡನನ್ನು ಅವನ ಪಾಡಿಗೆ ಪುಂಡಾಟಿಕೆ ಮಾಡಲು ಬಿಟ್ಟಿರುವುದು ಬಹಳ ಅಪಾಯಕಾರಿ. ಇದರಿಂದ ಬೆಂಗಳೂರು, ಮಂಗಳೂರು, ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಮಲಬಾರಿ ಮುಸ್ಲಿಮರ ಸಂಖ್ಯೆ ಅವ್ಯಾಹತವಾಗಿ ಹೆಚ್ಚಾಗುತ್ತಿದೆ. ಇದು ಇನ್ನಾವ ಅನಾಹುತ ತರುವುದೋ ಎಂಬ ಆತಂಕ ಹೆಚ್ಚಾಗುತ್ತಿದೆ.

## ಇಸ್ಲಾಂ ಮತ್ತು ಭಯೋತ್ಪಾದನೆ:

ಇಸ್ಲಾಂ ಧರ್ಮದ ಭಯೋತ್ಪಾದನೆಗೆ ಸುದೀರ್ಘ ಇತಿಹಾಸವಿದೆ. ಇದನ್ನರಿಯದೆ ಮುಸ್ಲಿಂ ಮತಾಂಧರನ್ನು ಓಲೈಸುವುದು ಬಹಳ ಅಪಾಯಕಾರಿ. ಆತ್ಮಾಹುತಿ ದಾಳಿ, ಸಾಮೂಹಿಕವಾಗಿ ಸಾರ್ವಜನಿಕರನ್ನು ಕೊಲ್ಲುವ ಭಯೋತ್ಪಾದನಾ ಗುಂಪು, ಗೆರಿಲ್ಲಾ ಯುದ್ಧ ನಡೆಸುವ ಕುಕೃತ್ಯ ಜಗತ್ತಿನಲ್ಲಿ ಮೊಟ್ಟಮೊದಲ ಬಾರಿಗೆ ಪರಿಚಯಿಸಿದ್ದು ಇಸ್ಮಾಯಿಲ್-ಇತೇ ಎಂಬ ಮುಸ್ಲಿಂ ಭಯೋತ್ಪಾದಕ ಸಂಘಟನೆ. ಕ್ರಿ.ಶ. 1092ರಲ್ಲಿ ಪರ್ಶಿಯಾದಿಂದ (ಇರಾನ್) ಸಿರಿಯಾವರೆಗೆ ಇಸ್ಲಾಂ ಧರ್ಮಸ್ಥಾಪನೆಗಾಗಿ ಅಲ್ಲಿದ್ದ ಯೆಝ್ದಿ ಸಮುದಾಯದವರನ್ನು ಅವರ ಪಾರ್ಸಿ ಧರ್ಮ ಬಿಟ್ಟು ಇಸ್ಲಾಂ ಧರ್ಮ ಸ್ವೀಕರಿಸುವಂತೆ ಮಾಡಿತ್ತು. ಮತಾಂತರಿತ ಈ ಪಾರ್ಸಿ ಧರ್ಮೀಯರೆ ಈಗಿನ ಷಿಯಾ ಮುಸ್ಲಿಮರಾಗಿದ್ದಾರೆ.ಸಾವಿರಾರು ವರ್ಷಗಳಿಂದಲೂ ಕಪ್ಪು ವರ್ಣದ ಅರಬ್ಬರನ್ನು ಕೀಳಾಗಿ ನೋಡುತ್ತಿದ್ದ ಪಾರ್ಸಿ ಧರ್ಮೀಯರಾದ ಬಿಳಿ ಮೈ ಬಣ್ಣದ ಯೆಜ್ಡಿ ಸಮುದಾಯದವರನ್ನು ಇಸ್ಲಾಂಗೆ ಬಲಾತ್ಕಾರವಾಗಿ ಮತಾಂತರಿಸಿದ ನಂತರ ಇವರು ಷಿಯಾ ಮುಸ್ಲಿಮರೆಂದೇ ಗುರುತಿಸಿಕೊಂಡರು.ಅರಬ್ ಮತ್ತು ಯೆಝ್ದಿ ಸಮುದಾಯದ ನಡುವೆ ಇಸ್ಲಾಂ ಪೂರ್ವದಿಂದಲೂ ಭಾರಿ ಯುದ್ದಗಳು ನಡೆಯುತ್ತಿದ್ದರಿಂದ ಇಸ್ಲಾಂಗೆ ಮತಾಂತರವಾಗಿ ಷಿಯಾ ಮುಸ್ಲಿಮರಾದರೂ,ಸುನ್ನಿ ಮುಸ್ಲಿಮರೊಂದಿಗಿನ ದ್ವೇಷ ಈಗಲೂ ಕೊನೆಗೊಂಡಿಲ್ಲ.ಇಂಥ ಯೆಝ್ದಿ ಸಮುದಾಯದ ಷಿಯಾ ಮುಸ್ಲಿಮರನ್ನು ಸಂಪೂರ್ಣವಾಗಿ ನಾಶ ಮಾಡಲು ಈಗ ಹುಟ್ಟಿಕೊಂಡಿರುವ ಉಗ್ರ ಸಂಘಟನೆಯೆ ಸೌದಿ ಅರೇಬಿಯಾ ಸುಲ್ತಾನ ಸೃಷ್ಟಿಸಿದ ಐಸಿಸ್ ಉಗ್ರರು!

**(ಮುಂದುವರೆಯುವುದು)**



# ಉರ್ದು ನಾಮಫಲಕಕ್ಕೆ ಮಸಿ ಬಳಿದ ಧೀರ ಕನ್ನಡಿಗರು

● ಜಯರಾಮ್

ಇದು ಕನ್ನಡಿಗರೆಲ್ಲಾ ಹೆಮ್ಮೆಯಿಂದ ಬೀಗುವ ವಿಷಯ. ಮುಸ್ಲಿಂ ಬಾಹುಳ್ಯದ ಪ್ರದೇಶಕ್ಕೆ ಹೋಗಿ, 'ಅಜೀಜ್ ಸೇಟ್ ವೃತ್ತ' ಅಂತಉರ್ದುವಿನಲ್ಲಿ ಬರೆದಿದ್ದಮೈಸೂರು ಮಹಾನಗರಪಾಲಿಕೆ ನಾಮಫಲಕಕ್ಕೆ ಕಪ್ಪು ಮಸೀ ಬಳಿದು ದಿಟ್ಟತನ ತೋರಿಸಿದ ಧೀರಕನ್ನಡಿಗರು ಬೇರಾರೂ ಅಲ್ಲ ಮಂಡ್ಯ ಜಿಲ್ಲೆಯ"ಕರ್ನಾಟಕ ರಕ್ಷಣಾ ವೇದಿಕೆ", 'ಕರುನಾಡ ಸೇವಕರು' ಮತ್ತಿತರ ಕನ್ನಡ ಸಂಘಟನೆಗಳ ನಾಯಕರು. ಸರ್ಕಾರದ ಅಧಿ ನಿಯಮದ ಪ್ರಕಾರ ಸರ್ಕಾರಿ ನಾಮಫಲಕಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆ ಹೊರತು ಬೇರೆಯಾವ ಭಾಷೆ ಬಳಸದಂತೆ ಎಚ್ಚರಿಸಿದ್ದಲ್ಲದೆ, ಹಾಲಿ ಇರುವ ಅನ್ಯ ಭಾಷಾ ನಾಮಫಲಕಗಳನ್ನು ಬದಲಿಸುವಂತೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರನ್ನು ಸಹ ಒತ್ತಾಯಿಸಿ ಬಂದಿದ್ದಾರೆ.

'ಕರುನಾಡ ಸೇವಕರು' ಸಂಘಟನೆ ರಾಜ್ಯ ಅಧ್ಯಕ್ಷ ಲೋಕೇಶ್‌ಗೌಡ, ಕರ್ನಾಟಕ ರಕ್ಷಣಾ ವೇದಿಕೆ ಮಂಡ್ಯ ಜಿಲ್ಲಾಧ್ಯಕ್ಷರಾದ ಹೆಚ್.ಡಿ.ಜಯರಾವ್, 'ಕರುನಾಡ ಸೇವಕರು' ಸಂಘಟನೆ ರಾಜ್ಯ ವಕ್ತಾರ ನಾಗಣ್ಣಗೌಡ, 'ಕರುನಾಡ ಸೇವಕರು' ಸಂಘಟನೆ ಮೈಸೂರು ಜಿಲ್ಲಾಧ್ಯಕ್ಷ ಎಸ್.ಕೆ.ರಾಜೂಗೌಡ, 'ಗಜ ಕೇಸರಿ ಕನ್ನಡಿಗರ ಸೇನೆ' ಸಂಘಟನೆ ರಾಜ್ಯ ವಕ್ತಾರರಾದ ಶ್ರೀನಿವಾಸ ಗೌಡ, ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ ಮುಖಂಡ ರಾಜೇಂದ್ರಸಿಂಗ್ ಬಾಬು, ಕನ್ನಡ ಸಂಘಟನೆಗಳ ಮುಖಂಡರಾದ ಪರಮೇಶ್, ಮುದ್ದೇಗೌಡ, ಕನ್ನಡ ಪ್ರಕಾಶ ಮತ್ತಿತರ ಧೀರ ಕನ್ನಡಿಗರು ಕಳೆದ ಡಿಸೆಂಬರ್. 10ರಂದು ಮೈಸೂರಿನ ಬೆಂಗಳೂರು ರಸ್ತೆಯಲ್ಲಿರುವ 'ಅಜೀಜ್‌ಸೇಟ್ ವೃತ್ತ' ಎಂಬ ನಗರಪಾಲಿಕೆ ನಾಮಫಲಕದಲ್ಲಿ ಉರ್ದು ಅಕ್ಷರ ಬರೆದಿರುವುದನ್ನು ಕಂಡು, ಅದಕ್ಕೆ ಕಪ್ಪು ಮಸೀ ಬಳಿದು ದಿಟ್ಟತನ ಪ್ರದರ್ಶಿಸಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರದ ಅಧಿನಿಯಮದ ಪ್ರಕಾರ ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಅಗ್ರಮಾನ್ಯ ಭಾಷೆ.

ಸರ್ಕಾರದ ನಾಮ ಫಲಕಗಳಲ್ಲಿ ಕನ್ನಡ ಶೇ.70ರಷ್ಟು ಮತ್ತು ಇಂಗ್ಲಿಷ್ ಶೇ.30ರಷ್ಟು ಬಳಸಲು ಅವಕಾಶವಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಹೊರತು ಬೇರೆ ಭಾಷೆಗಳನ್ನು ಸರ್ಕಾರಿ ಫಲಕಗಳಲ್ಲಿ ಬಳಸಲು ಅವಕಾಶವಿಲ್ಲ. ಹೀಗಿದ್ದರೂ ಕೆಲ ಭಾಷಾಂಧ ಕಿಡಿಗೇಡಿಗಳು ಅಲ್ಪಸಂಖ್ಯಾತರಿರುವ ಪ್ರದೇಶಗಳಲ್ಲಿ ಮೈಸೂರು ಮಹಾನಗರ ಪಾಲಿಕೆ ನಾಮಫಲಕಗಳಲ್ಲಿ ಉರ್ದು ಭಾಷೆಕಂಡು ಬರುತ್ತಿದೆ.ಇದು ಅಕ್ಷಮ್ಯ ಮತ್ತು ಸ್ಥಳೀಯ ಭಾಷಾ ಸಾರ್ವಭೌಮತೆ ವಿರುದ್ಧದ ಪ್ರದರ್ಶನವಾಗಿದೆ ಎಂದು ಆಕ್ರೋಶಗೊಂಡ ಕನ್ನಡ ವಿರೋಧಿಗಳಿಗೆ ಕನ್ನಡ ಧೀರ ಪಡೆತಕ್ಕ ಪಾಠ ಕಲಿಸಲು ಮುಂದಾಗಿದೆ.

ಕನ್ನಡ ಸಾರ್ವಭೌಮತೆ ವಿರುದ್ಧ ಸವಾರಿ ಮಾಡಲು ಹೊರಟಿರುವುದರ ವಿರುದ್ಧ ನಮ್ಮ 'ಕರುನಾಡ ಸೇವಕರು' 'ಕರ್ನಾಟಕ ರಕ್ಷಣಾ ವೇದಿಕೆ' ಮತ್ತಿತರ ಕನ್ನಡ ಸಂಘಟನೆಗಳು ಹೋರಾಡುತ್ತಾ ಬಂದಿವೆ. ಹೀಗಿದ್ದರೂ ಕನ್ನಡ ಸಾರ್ವಭೌಮತ್ವಕ್ಕೆ ಧಕ್ಕೆ ತರುವಘಟನೆ ನಡೆಯುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಸುಭಾಷ್ ನಗರದ ದಂಡು ಮಾರಮ್ಮ ದೇವಸ್ಥಾನ ಸಮೀಪದಲ್ಲಿ ಮೈಸೂರು ಮಹಾನಗರ ಪಾಲಿಕೆ ಅಳವಡಿಸಿರುವ 'ಅಜೀಜ್ ಸೇಟ್ ವೃತ್ತ' ಎಂಬ ನಾಮ ಫಲಕದಲ್ಲಿ ಉರ್ದು ಭಾಷೆ ಕಂಡು ಬಂದಿದ್ದನ್ನು ಗಮನಿಸಿ, ಕಳೆದ ಡಿಸೆಂಬರ್.10ರಂದು ಅದನ್ನು ಮಸಿ ಬಳಿದು ಅಳಿಸುವ ಪ್ರಯತ್ನ ಮಾಡಿದೆವು. ಅಷ್ಟರಲ್ಲಿ ಕೆಲ ತಿಳಿಗೇಡಿಗಳು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಅಜ್ಜು ಮತ್ತು ಈತನ ಸೋದರರ ನೇತೃತ್ವದಲ್ಲಿ ಬಂದು ಬೆದರಿಸಲು ನೋಡಿದರು. ಆದರೆ, ನಮ್ಮ ದಿಟ್ಟ ಕನ್ನಡ ಹೋರಾಟಗಾರರು ಸಮಯೋಚಿತ ವೀರತನ ಪ್ರದರ್ಶಿಸಿ, ಅವರಿಗೆ ಕಾನೂನಿನ ಪಾಠ ಕಲಿಸಲು ಮುಂದಾದರು. ಅಷ್ಟರಲ್ಲಿ ಸ್ಥಳಕ್ಕೆ ಆಗಮಿಸಿದ ಪೋಲೀಸರು ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಕನ್ನಡ ನೆಲದ ಅನ್ನತಿಂದು ಕನ್ನಡ ಭಾಷೆಗೆ ದ್ರೋಹ ಬಗೆಯುತ್ತಿರುವ ಗೂಂಡಾ ಪ್ರವೃತ್ತಿಯವರಿಗೆ ಕರ್ನಾಟಕ ಸರ್ಕಾರದ ಕಾನೂನಿನ ತಿಳುವಳಿಕೆ ನೀಡಿ, ಸರ್ಕಾರಿ ನಾಮಫಲಕಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಹೊರತು ಅನ್ಯಭಾಷೆ ಬಳಸದಂತೆ ಎಚ್ಚರವಹಿಸಬೇಕೆಂದು ಕಳೆದ ಡಿಸೆಂಬರ್.22ರಂದು ಮೈಸೂರು ಮಹಾನಗರಪಾಲಿಕೆ ಆಯುಕ್ತರು ಮತ್ತು ಮೈಸೂರು ನಗರ ಪೋಲೀಸ್ ಆಯುಕ್ತರಿಗೆ ಮನವಿ ಪತ್ರ ನೀಡಿದ್ದಲ್ಲದೆ, ಅಂದೇ ಪತ್ರಿಕಾ ಗೋಷ್ಠಿಯನ್ನು ಮೈಸೂರು ಪತ್ರಕರ್ತರ ಭವನದಲ್ಲಿ ನಡೆಸಿದ್ದಾರೆ. ಅಲ್ಪಸಂಖ್ಯಾತರು ತಮ್ಮ ಮಾತೃಭಾಷೆ ಕಲಿಯುವುದು ಮತ್ತು ಬಳಸುವುದು ಅವರ ಐಚ್ಛಿಕ ವಿಷಯವೇ ಹೊರತು, ಸಾರ್ವತ್ರಿಕವಲ್ಲ. ಈ ನೆಲದ ಭಾಷೆಯಾದ ಕನ್ನಡವನ್ನು ಗೌರವಿಸಬೇಕು, ಭಾಷಾ ಸೌಹಾರ್ದತೆಯಿಂದ ವರ್ತಿಸುವುದನ್ನು ಪಾಲಿಸಬೇಕು ಎಂಬುದನ್ನು ತಿಳಿಗೇಡಿಗಳಿಗೆ ತಿಳಿಸಿ ಬಂದಿದ್ದಾರೆ.

ಅಲ್ಪಸಂಖ್ಯಾತರು ಶಾಲೆಗಳಲ್ಲಿ ಕನ್ನಡ ಕಲಿತಿರುವುದರಿಂದ ಕನ್ನಡದಲ್ಲಿರುವ ನಾಮಫಲಕವನ್ನು ಓದುವ ಮತ್ತು ತಿಳಿಯುವ ಜ್ಞಾನವಿದೆ. ಈ ಹಿನ್ನೆಲೆಯಲ್ಲಿ ಮುಂದಿನ 15 ದಿನಗಳಲ್ಲಿ ಅಲ್ಪಸಂಖ್ಯಾತ ಪ್ರದೇಶಗಳಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಫಲಕಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಹೊರತು ಬೇರಾವ ಭಾಷೆಗಳು ಕಂಡು ಬರದಂತೆ ಮೈಸೂರು ಮಹಾ ನಗರಪಾಲಿಕೆ ಆಯುಕ್ತರು ನೋಡಿ ಕೊಳ್ಳಬೇಕು. ಈಗಾಗಲೇ ಕನ್ನಡ ಮತ್ತು ಇಂಗ್ಲಿಷ್ ಹೊರತು ಉರ್ದು ಸೇರಿದಂತೆ ಇತರೆ ಭಾಷೆಯಲ್ಲಿ ಬರೆದಿರುವ ಸರ್ಕಾರಿ ನಾಮಫಲಕಗಳನ್ನು ಅಳಿಸಿ ಹಾಕಬೇಕು. ಇಲ್ಲದಿದ್ದರೆ, 'ಕರುನಾಡ ಸೇವಕರು' 'ಕರ್ನಾಟಕ ರಕ್ಷಣಾ ವೇದಿಕೆ' ಸೇರಿದಂತೆ ವಿವಿಧ ಕನ್ನಡ ಸಂಘಟನೆಗಳು ಒಗ್ಗೂಡಿ ಮೈಸೂರು ಮಹಾನಗರ ಪಾಲಿಕೆ ಮುಂದೆ ಬೃಹತ್ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಸಹ ಕನ್ನಡ ಧೀರ ಪಡೆ ಎಚ್ಚರಿಸಿದೆ. ಹೀಗೇ, ಕನ್ನಡ ಪರವಾಗಿ ದಿಟ್ಟ ಹೋರಾಟ ನಡೆಸುತ್ತಿರುವ ಇಂಥ ಕನ್ನಡ ವೀರಯೋಧರ ಸಂಖ್ಯೆ ಕೋಟ್ಯಾಂತರವಾಗಿ ಕನ್ನಡ ಸಾರ್ವಭೌಮತೆಯನ್ನು





# ಮದ್ಯ ವ್ಯಸನಕ್ಕೆ ಕೋಟ್ಯಾಂತರ ಬಲಿ

## ನೆನಪಾಗುವ ಮದ್ಯಪಾನ ವಿರೋಧಿ ಶ್ರೀಮತಿ ಯಶೋಧರ ದಾಸಪ್ಪ

● ಎಸ್. ಪ್ರಕಾಶ್ ಬಾಬು

ನಿಮಗೆಲ್ಲ ನಕಲಿ ಮದ್ಯದ ವ್ಯವಹಾರ ಗೊತ್ತಿಲ್ಲ ಅನ್ನಿಸುತ್ತೆ. ಈ ನಕಲಿ ಮದ್ಯ ವ್ಯಾಪಾರ ಮಾಡದೇ ಯಾರೂ ಲಕ್ಷಾಂತರ ಖರ್ಚು ಮಾಡಿ ಬಾರು ವೈನ್ ಸ್ಟೋರ್ ನಡೆಸೋಲ್ಲ. ಮನೆಯಲ್ಲೇ ಕಳಪೆ ಸ್ಪಿರಿಟ್ ತಂದು, ಅದಕ್ಕೆ ಕಲರ್ ಹಾಕಿ, ಅದಕ್ಕೆ ಬೇಕಾದ ವಿಸ್ಕಿ, ರಮ್, ಬ್ರಾಂಡಿ ಫ್ಲೇವರ್ ಹಾಕಿ, ಬಾಟಲಿನ ಮೇಲೆ ಬೇಕಾದ ಲೇಬಲ್ ಅಂಟಿಸಿ, ಕಾರ್ಕ್ ಹಾಕಿ ಮಾರುವುದು 50ವರ್ಷಗಳಿಂದ ನಡೆದು ಬರುತ್ತಿದೆ. ಇದೇ ಒಂದು ದೊಡ್ಡ ಮಾಫಿಯ. ಇದರ ಬಗ್ಗೆ ಯಾರೂ ಆಳವಾಗಿ ತಿಳಿದಿಲ್ಲ. ಹೀಗಾಗಿ, ಕೆಲವರು ಮದ್ಯದ ಅಮಲಿನಲ್ಲಿ ತೇಲುತ್ತಿದ್ದಾರೆ. ಇಂತಹ ನಕಲಿ ಮದ್ಯ ಸೇವಿಸಿಯೇ ಈಗಿನ ಯುವಕರು ಮಧ್ಯ ವಯಸ್ಸಿಗೆ ಗೊಟಕ್ ಅನ್ನುತ್ತಿದ್ದಾರೆ.

ಆದರೆ, ರಾಜ್ಯದ ಸಿದ್ದರಾಮಯ್ಯ ಸರ್ಕಾರ ಮದ್ಯ ಮಾರಾಟದಿಂದಲೇ ಬಿಟ್ಟಿ ಭಾಗ್ಯ ಮತ್ತು ತಮ್ಮ ಭ್ರಷ್ಟ ಜೋಳಿಗೆ ಸರಿದೂಗಿಸುವ ಲೆಕ್ಕಾಚಾರ ಹಾಕಿಕೊಂಡಿದ್ದಾರೆ. ಕಂಡೋರ ಮಕ್ಕಳ ಬಾಯಿಗೆ ಮಣ್ಣು ಹಾಕಿ ಮೆರೆಯುವ ಈ ಅಂಧಾದುಂಧಿ ದರ್ಬಾರ್‌ಗೆ ಪ್ರತಿವರ್ಷ ಕರ್ನಾಟಕದಲ್ಲಿ ಸಾಯುತ್ತಿರುವ ಕುಡುಕರ ಸಂಖ್ಯೆ ಲಕ್ಷಾಂತರವಿದೆ. ಕೇವಲ ಮದ್ಯ ಸೇವನೆಯಿಂದ ಬರುವ ಲಿವರ್ ಸೋರಿಯಾಸಿಸ್ ಎಂಬ ಖಾಯಿಲೆಯಿಂದ ಪ್ರತಿವರ್ಷ ಸಾಯುತ್ತಿರುವವರ ಸಂಖ್ಯೆ 5 ಲಕ್ಷಕ್ಕೂ ಅಧಿಕ ಅಂತ ಸರ್ಕಾರಿ ಅಂಕಿಅಂಶಗಳೆ ಹೇಳುತ್ತವೆ. ಇದಕ್ಕೆ ಕಾರಣ, ಮದ್ಯ ಹೆಚ್ಚು ಕುಡಿದಿದ್ದಕ್ಕಿಂತ ಮದ್ಯ ದರ ಹೆಚ್ಚಿಸಿದ್ದರಿಂದಲೇ ಮದ್ಯವ್ಯಸನಿಗಳ ಮಸಣ ಯಾತ್ರೆ ಹೆಚ್ಚಾಗಿದೆ. ಸಿದ್ದರಾಮಯ್ಯ ಸರ್ಕಾರ ಅವೈಜ್ಞಾನಿಕವಾಗಿ ಯರ್‍ರಾಬಿರ್‍ರಿ ಮದ್ಯದ ಮೇಲೆ ತೆರಿಗೆ ಬರೆ ಹಾಕುತ್ತಿರುವುದರಿಂದ 10ರೂಪಾಯಿಗೆ ಸಿಗುವ ಮದ್ಯ ನೂರು ರೂಪಾಯಿಯಾಗುತ್ತಿದೆ. ಅಂದರೆ, ಯಾವುದೇ ಮದ್ಯದ ಅಸಲಿ ದರಕ್ಕೆ ಹತ್ತು ಪಟ್ಟು ತೆರಿಗೆ ಬೀಳುತ್ತಿರುವದರಿಂದ ನಕಲಿ ಮದ್ಯ ತಯಾರಕರು ಗಲ್ಲಿ ಗಲ್ಲಿಗಳಲ್ಲಿ ಹುಟ್ಟಿಕೊಂಡಿದ್ದಾರೆ. ಇಂಥ ಸಂದಿಗ್ದ ಸಮಯದಲ್ಲಿ ಕಲಬೆರಕೆ ಮತ್ತು ನಕಲಿ ಮದ್ಯ ತಯಾರಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾದ ಅಬ್ಕಾರಿ ಅಧಿಕಾರಿಗಳು ಮಂತ್ಲಿ ಫಿಕ್ಸ್ ಮಾಡಿಕೊಂಡು ಕುಡುಕರ ಹಣ ಬೀಳಿಸುತ್ತಿದ್ದಾರೆ. ಸಾಲದೆಂಬಂತೆ ಇತ್ತೀಚೆಗೆ 750ಕ್ಕೂ ಹೆಚ್ಚು ಹೊಸ ವೈನ್ ಮತ್ತು ಬಾರ್ ತೆರೆಯಲು ಲೈಸೆನ್ಸ್ ಕೊಟ್ಟು ರಾಜ್ಯ ಹಾಳು ಮಾಡುತ್ತಿರುವ ಬಿಟ್ಟಿ ಭಾಗ್ಯಕ್ಕೆ ಹಣ ಹೊಂದಿಸುತ್ತಿದ್ದಾರೆ.

ಸಂಪೂರ್ಣ ಮದ್ಯ ನಿಷೇಧಕ್ಕಾಗಿ ಹೋರಾಡುತ್ತಿರುವ ಉತ್ತರ ಕರ್ನಾಟಕದ ಸಂಘಟನೆಯಾದ ಮದ್ಯ ನಿಷೇದ ಆಂದೋಲನ ರಾಜ್ಯ ಸಂಚಾಲಕಿ ವಿದ್ಯಾ ಪಾಟೀಲ್, ನಾಗರತ್ನ ಪಾಟೀಲ್, ಮಲ್ಲಿಕಾರ್ಜುನ ಸತ್ಯಂಪೇಟೆ, ಶರಣಗೌಡ ಕೊಲ್ಲಾರ, ಸುಶೀಲಮ್ಮ, ಮಲ್ಲಿಕಾರ್ಜುನ್, ಬನ್ನಪ್ಪ ಮತ್ತಿತರರ




ನೇತೃತ್ವದಲ್ಲಿ ಉತ್ತರ ಕರ್ನಾಟಕದ ಮಹಿಳೆಯರು ಕಳೆದ ನವೆಂಬರ್ 25 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ತೀವ್ರವಾದ ಪ್ರತಿಭಟನೆಯನ್ನು ನಡೆಸಿ, ಪರವಾನಗಿ ಇಲ್ಲದ ಅಂಗಡಿಗಳಿಂದ ನಿರಂತರ ಅಕ್ರಮ ಮದ್ಯ ಮಾರಾಟದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಯಾದಗಿರಿ ಮೂಲದ ಮದ್ಯ ನಿಷೇದ ಆಂದೋಲನ ಸಂಘಟನೆಯ ನಿರಂತರ ಪ್ರತಿಭಟನೆಗಳ ಹೊರತಾಗಿಯೂ ಅಕ್ರಮ ಮದ್ಯ ಮಾರಾಟವನ್ನು ತಡೆಯಲಾಗಿಲ್ಲ ಮತ್ತು ಪೊಲೀಸ್ ಮತ್ತು ಅಬಕಾರಿ ಇಲಾಖೆಗಳ ನಿಷ್ಕ್ರಿಯತೆಯಿಂದಾಗಿ ನಿರಂತರವಾಗಿ ಮುಂದುವರೆದಿದೆ. ರಾಜ್ಯದಲ್ಲಿ ಮದ್ಯಪಾನ ನಿಷೇಧ ಮಾಡಬೇಕೆಂದು ಒಂದು ಕೋಟಿಗೂ ಅಧಿಕ ಮಹಿಳೆಯರ ಸಹಿ ಉಳ್ಳ ಮನವಿ ಸಲ್ಲಿಸಿದ ನಂತರವೂ, ಭಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಮದ್ಯ ಮಾರಾಟದ ಲೈಸೆನ್ಸ್‌ನ್ನು ಸಾವಿರಾರು ಸಂಖ್ಯೆಯಲ್ಲಿ ಹೆಚ್ಚಿಸಲು ಮುಂದಾಗಿದ್ದಾರೆ.

ಮದ್ಯ ಸುಲಭವಾಗಿ ಲಭ್ಯವಾದ ನಂತರ ಗ್ರಾಮೀಣ ಪ್ರದೇಶಗಳಲ್ಲಿ ಯುವಕರು ವ್ಯಸನಿಯಾಗುತ್ತಿರುವುದರಿಂದ ಪರವಾನಗಿ ಪಡೆದ ಮದ್ಯದ ಅಂಗಡಿಗಳಲ್ಲದೆ, ದಿನಸಿ ಅಂಗಡಿಗಳಲ್ಲಿ ಪ್ರತಿ ಹಳ್ಳಿಯ ಮನೆಮನೆಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದು ಹೆಚ್ಚಾಗಿದೆ ಎಂದು ಯಾದಗಿರಿ ಮೂಲದ ಮದ್ಯ ನಿಷೇದ ಆಂದೋಲನ ಸಂಘಟನೆಯ ಮಹಿಳೆಯರು ಬೃಹತ್ ಸಂಖ್ಯೆಯಲ್ಲಿ ಬೇಂಗಳೂರಿಗೆ ಬಂದು ಹೋರಾಟ ನಡೆಸಿದ ಒಂದು ತಿಂಗಳಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತಷ್ಟು ಹೊಸ ಮದ್ಯ ಲೈಸೆನ್ಸ್ ಕೊಡಲು ಮುಂದಾಗುತ್ತಾರೆಂದರೆ ಎಂಥ ಭಂಡ ಮುಖ್ಯಮಂತ್ರಿ ಇವರು ಅಂತ ಮದ್ಯ ನಿಷೇಧ ಆಂದೋಲನದ ಮಹಿಳೆಯರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಮಹಾರಾಷ್ಟ್ರ, ಗುಜರಾತ್ ಮತ್ತು ಇತರ ಹಲವು ರಾಜ್ಯಗಳು ಗ್ರಾಮ ಸಭೆಗಳನ್ನು ನಡೆಸಲು ಪಂಚಾಯತ್ ರಾಜ್ ಕಾಯ್ದೆಯಡಿ ಗ್ರಾಮ ಪಂಚಾಯಿತಿಗಳಿಗೆ ಗಣನೀಯ ಅಧಿಕಾರವನ್ನು ನೀಡಿವೆ. ಅಲ್ಲಿನ ಹಳ್ಳಿಗಳಲ್ಲಿ ಮದ್ಯಪಾನ ಮಾರಾಟದ ಲೈಸೆನ್ಸ್ ಪಡೆಯಲು ಗ್ರಾಮ ಸಭೆಗಳಲ್ಲಿ ಭಾಗವಹಿಸುವ ಕನಿಷ್ಠ ಶೇ.20ರಷ್ಟು ಮಹಿಳೆಯರಿಂದ ಕಡ್ಡಾಯ ಅನುಮತಿಯನ್ನು ಪಡೆಯಬೇಕೆಂಬ ನಿಯಮ ಜಾರಿಗೆ ತಂದಿದ್ದಾರೆ. ಹಾಗೇ, ಅಕ್ರಮ ಮದ್ಯ ಮಾರಾಟವನ್ನು ತಡೆಯಲು ಹಲವು ಕಠಿಣ ಕಾನೂನುಗಳನ್ನು ಅಳವಡಿಸಿದೆ. ಕರ್ನಾಟಕ ರಾಜ್ಯ ಸರ್ಕಾರವು ನಮ್ಮಲ್ಲೂ ಇದೇ ರೀತಿಯ ಮದ್ಯ ನಿಯಂತ್ರಣ ಕಾನೂನುಗಳನ್ನು ತಂದರೆ ನಕಲಿ ಮದ್ಯ ತಯಾರಿಕೆ ಮತ್ತು ಅಕ್ರಮ ಮದ್ಯ ಮಾರಾಟಗಳು ನಿಲ್ಲುತ್ತವೆ. ಇದರಿಂದ ಕುಡುಕರ ಪ್ರಾಣವೂ ಉಳಿಯುತ್ತೆ. ಈ ಕುಡುಕರ ನಂಬಿ ಬದುಕುವ ಕುಟುಂಬಗಳೂ ಬೀದಿ ಪಾಲಾಗದೆ ಬದುಕುಳಿಯುತ್ತವೆ.

ರಾಜ್ಯ ಸರ್ಕಾರ ಪ್ರತಿ ಗ್ರಾಮದಲ್ಲಿ ಮಹಿಳಾ ಜಾಗೃತಿ ಸಮಿತಿಗಳನ್ನು ರಚಿಸಬೇಕು ಮತ್ತು ಅಕ್ರಮ ಮದ್ಯ ಮಾರಾಟವನ್ನು ತಡೆಯಲು ಅವುಗಳಿಗೆ ಅರೆ-ನ್ಯಾಯಾಂಗ






ಅಧಿಕಾರವನ್ನು ನೀಡಬೇಕು. "ಸಾರಾಯಿ ಬೇಡ, ಶಿಕ್ಷಣ ಬೇಕು; ಬೀರು ಬೇಡ, ನೀರು ಬೇಕು" ಎಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಘೋಷಣೆ ಕೂಗಿ ಪ್ರತಿಭಟಿಸಿದ್ದ ಉತ್ತರ ಕರ್ನಾಟಕ ಮದ್ಯ ನಿಷೇಧ ಆಂದೋಲನದ ಮಹಿಳೆಯರು ಮನೆಗೆ ಹೋಗಿ ನೆಮ್ಮದಿಯಾಗಿ ನಿರಾಳವಾಗುವ ಮುನ್ನವೇ ಅಬ್ಕಾರಿ ಸಚಿವ ಮುಧೋಳದ ಆರ್.ಬಿ.ತಿಮ್ಮಾಪುರ್ ಮೂಲಕ ಹೊಸದಾಗಿ ಬಾರ್ ಮತ್ತು ವೈನ್ ಸ್ಟೋರ್‌ಗೆ ಲೈಸೆನ್ಸ್ ಕೊಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ದರಾಗುತ್ತಾರೆಂದರೆ, ಇವರೆಂಥ ಭಂಡ ಮುಖ್ಯಮಂತ್ರಿ ಅನ್ನೋದು ಮನದಟ್ಟಾಗುತ್ತದೆ. ಮದ್ಯ ವ್ಯಸನಕ್ಕೆ ಕೋಟ್ಯಾಂತರ ಯುವಕರು ಬಲಿಯಾಗುತ್ತಿದ್ದರೂ, ನಾಡಿನ ಭವಿಷ್ಯ ರೂಪಿಸುವ ಯುವ ಪೀಳಿಗೆ ಹಾಳು ಬೀಳುತ್ತಿರುವುದು ತಿಳಿದ ನಂತರವೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಸಾವಿರಾರು ಮದ್ಯ ಪರವಾನಗಿ ನೀಡಲು ಹುಚ್ಚು ಸಾಹಸ ಮಾಡುತ್ತಾರೆಂದರೆ, ಅವರು ಜನರ ಉದ್ದಾರ ಮಾಡಲು ಅಧಿಕಾರ ನಡೆಸಲು ಕುಳಿತಿಲ್ಲ, ಜನರ ಹೆಣ ಬೀಳಿಸಿ ಹಣ ಮಾಡಲು ಕುಳಿತಿದ್ದಾರೆ ಅನ್ನೋದು ಮನದಟ್ಟಾಗುತ್ತದೆ.

ಮನೆ ಹಾಳು ಮಾಡುವ ಇಂತಹ ಅಪಾಯಕಾರಿ ಮದ್ಯ ಪಾನ ಕಂಡೇ 1966ರಲ್ಲಿ ನಿಜಲಿಂಗಪ್ಪ ಸಂಪುಟದಲ್ಲಿ ಆಗಷ್ಟೇ ರಚಿಸಲಾದ ಸಮಾಜ ಕಲ್ಯಾಣ ಸಚಿವೆ ಆಗಿದ್ದ ಶ್ರೀಮತಿ ಯಶೋಧರ ದಾಸಪ್ಪ ಮದ್ಯಪಾನ ನಿಷೇಧ ಮಾಡಬೇಕು ಅಂತ ಒತ್ತಾಯಿಸಿದ್ದರು. ರಾಜ್ಯದ ಮೊದಲ ಸಂಪುಟ ದರ್ಜೆ ಸಚಿವೆ ಹಾಗೂ 1950ರಲ್ಲೇ ಮೊದಲ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾದ ಯಶೋಧರಮ್ಮನ ಮಾತಿಗೆ ಕಿವಿಗೊಡದೆ, ಉಡಾಫೆ ಮಾತಾಡಿದ ಅಂದಿನ ಹಣಕಾಸು ಮಂತ್ರಿ ರಾಮಕೃಷ್ಣ ಹೆಗ್ಡೆ ಮತ್ತು ಕಂದಾಯ ಮಂತ್ರಿ ವೀರೇಂದ್ರ ಪಾಟೀಲ್ ವಿರುದ್ಧ ಸಿಡಿದೆದ್ದು ರಾಜೀನಾಮೆ ನೀಡಿ ಹೊರ ನಡೆದರು. ಗಾಂಧೀಜಿ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದು, ಅವರು ಪ್ರತಿಪಾದಿಸಿದ ಮದ್ಯ ಪಾನ ನಿಷೇದ ಜಾರಿ ಆಗುವವರೆಗೂ ವಿಧಾನ ಸೌಧದ ಮೆಟ್ಟಿಲು ತುಳಿಯೋಲ್ಲ ಎಂದು ಹೊರ ನಡೆದಿದ್ದರು. ಹಾಗೇ,ಶ್ರೀಮತಿ ಯಶೋಧರ ದಾಸಪ್ಪ ಶಪಥ ಮಾಡದೇ ಇದ್ದಿದ್ದರೆ, ಅವರ ಶಿಷ್ಯರಾದ ದೇವರಾಜ್ ಅರಸು ಮುಂಚೆಯೇ ಮುಖ್ಯಮಂತ್ರಿ ಆಗಬಹುದಿತ್ತು. ಹೀಗಾಗಿದ್ದರೆ, ಮೊದಲ ಮಹಿಳಾ ಮುಖ್ಯ ಮಂತ್ರಿ ಎಂಬ ಹೆಗ್ಗಳಿಕೆಯು ಯಶೋಧರ ದಾಸಪ್ಪ ಅವರಿಗೇ ಸಿಗುತ್ತಿತ್ತು. ಆದರೇ ತತ್ವ ನಿಷ್ಠೆಗೆ ಬದ್ಧರಾಗಿ ರಾಜಕೀಯ ಸನ್ಯಾಸ ಸ್ವೀಕರಿಸಿದರು. ಇದರಿಂದ ಆಕೆ ಯಾರೂ ಅನ್ನೋದು ಇರಲಿ, ಅವರ ಹೆಸರನ್ನೇ ಜನ ಮರೆತು ಬಿಟ್ಟಿದ್ದಾರೆ.

ಜನ ಯಶೋಧರಮ್ಮನನ್ನು ಮರೆತಿದ್ದರೂ, ಅವರು ಪ್ರತಿಪಾದಿಸಿದ ಮದ್ಯ ಪಾನ ನಿಷೇದ ಜಾರಿಗೆ ತಂದಿದ್ದರೆ ಈ 60ವರ್ಷಗಳಲ್ಲಿ ಕೋಟ್ಯಂತರ ಜೀವಗಳು ಉಳಿಯುತ್ತಿದ್ದವು. ಅದೆಷ್ಟೋ ಕುಟುಂಬಗಳು ಚೆನ್ನಾಗಿರುತ್ತಿದ್ದವು. ಈಗಲೂ ಕಾಲ ಮಿಂಚಿಲ್ಲ, ಸಂಪೂರ್ಣ ಮದ್ಯಪಾನ ನಿಷೇದ ಮಾಡಿದರೆ, ಸಾವಿನ ದಾರಿಯಲ್ಲಿರುವ ಅದೆಷ್ಟೋ ಜೀವಗಳು, ಸಂಸಾರಗಳು ಬದುಕುಳಿಯುತ್ತವೆ. ಬಹು ಮುಖ್ಯವಾಗಿ ಯುವಕರು ಬೀದಿ ಹೆಣವಾಗುವುದು ತಪ್ಪುತ್ತೆ. ಕರ್ನಾಟಕದಲ್ಲಿ ಮದ್ಯಪಾನ ನಿಷೇಧ ಆಗಲೇಬೇಕೆಂದು ಶ್ರೀಮತಿ ಯಶೋಧರದಾಸಪ್ಪ ನಡೆಸಿದ ಸಾತ್ವಿಕ ಹೋರಾಟ ಮತ್ತು ಅಧಿಕಾರ ತ್ಯಾಗದ ವಿವರ ಪ್ರತ್ಯೇಕ ಬಾಕ್ಸ್ ನಲ್ಲಿದೆ ಓದಿ.

# ಮದ್ಯಪಾನ ವಿರೋಧಿಸಿ ಮಂತ್ರಿ ಬಿಟ್ಟ ಯಶೋಧರಮ್ಮ

ನೆಹರು ಸಂಪುಟದಲ್ಲಿ ರೈಲ್ವೆ ಸಚಿವರಾಗಿದ್ದ ಹೆಚ್.ಸಿ.ದಾಸಪ್ಪ ಮತ್ತು ನಿಜಲಿಂಗಪ್ಪ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವೆಯಾಗಿದ್ದ ಯಶೋಧರಾ ದಂಪತಿ, ತಮಗೆ ಸಿಕ್ಕ ಅಧಿಕಾರವನ್ನು ವೈಯಕ್ತಿಕ ದಾಖಲೆ ಅಥವ ಹೆಸರಿಗೆ ಮಾತ್ರ ಅನುಭವಿಸದೆ, ನೈಜ ಜನಪರ ಕಾಳಜಿಯಲ್ಲಿ ದುಡಿಯುತ್ತಿದ್ದರು. 1964ರಲ್ಲಿ ಶಾಸ್ತ್ರೀ ಸಂಪುಟದಲ್ಲಿ ನೀರಾವರಿ ಮತ್ತು ಕೈಗಾರಿಕಾ ಸಚಿವರಾಗಿದ್ದ ಎಚ್.ಸಿ.ದಾಸಪ್ಪ ತಾಂಜೇನಿಯಾ ಪ್ರವಾಸದ ನಂತರ ಅನಾರೋಗ್ಯ ಪೀಡಿತರಾಗಿ 1964ರ ಅಕ್ಟೋಬರ್.28ರಂದು ದೆಹಲಿಯಲ್ಲಿ ನಿಧನರಾದರು. ಪತಿ ಸಾವಿನ ಆಘಾತದ ನಂತರ ಶ್ರೀಮತಿ ಯಶೋಧರ ದಾಸಪ್ಪ ಅವರು ಸ್ವಲ್ಪ ಚೇತರಿಸಿಕೊಳ್ಳುವಷ್ಟರಲ್ಲಿ ನಿಜಲಿಂಗಪ್ಪನವರ ಮಂತ್ರಿಮಂಡಲದ ಕೆಲವು ಬಲಿಷ್ಠ ಸಚಿವರು ರಾಜ್ಯದಲ್ಲಿ ಪಾನ ನಿರೋಧ ಕಾಯಿದೆಯನ್ನು ರದ್ದು ಗೊಳಿಸಿ ಮಾರುಕಟ್ಟೆಗಳಲ್ಲಿ ಮುಕ್ತವಾಗಿ ಹೆಂಡ-ಸಾರಾಯಿ ಮತ್ತಿತರ ಮದ್ಯಪಾನೀಯಗಳು ದೊರೆಯುವಂತೆ ಮಾಡಬೇಕೆಂದು ಪ್ರಸ್ತಾಪ ಮಾಡಲಾರಂಭಿಸಿದರು. ಇಂಥ ಸಂದರ್ಭದಲ್ಲೆ 1965ರಲ್ಲಿ ತುಮಕೂರು ಸಹಿತ ಹಲವೆಡೆ ಸಂಭವಿಸಿದ ಕಳ್ಳಭಟ್ಟಿ ದುರಂತದ ನೆಪ ಮಾಡಿಕೊಂಡು ಸರ್ಕಾರಿ ಸಾರಾಯಿ ಮಾರಾಟವಿಲ್ಲದ ಜಿಲ್ಲೆಗಳಲ್ಲಿ ಸಾರಾಯಿ ಮಾರಾಟಕ್ಕೆ ಸರ್ಕಾರದ ಮೇಲೆ ಒತ್ತಡ ಹೇರತೊಡಗಿದರು.



ಇದು 1966ರ ಜನವರಿ ತಿಂಗಳಲ್ಲಿ ನಡೆದ ಸಂಪುಟ ಸಭೆಯಲ್ಲಿ ಹಣಕಾಸು ಸಚಿವರಾಗಿದ್ದ ರಾಮಕೃಷ್ಣ ಹೆಗಡೆ ಮಂಡಿಸಿದಾಗ, ಸಭೆಯಲ್ಲಿದ್ದ ಸಮಾಜ ಕಲ್ಯಾಣ ಸಚಿವೆ ಶ್ರೀಮತಿ ಯಶೋಧರಾ ದಾಸಪ್ಪ ತೀವ್ರವಾಗಿ ವಿರೋಧಿಸಿದರು. ಸಾರಾಯಿ ಹರಾಜಿನಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರುಪಾಯಿ ಆದಾಯ ಬರುತ್ತೆ ಎಂದು ಹಣಕಾಸು ಮಂತ್ರಿ ರಾಮಕೃಷ್ಣ ಹೆಗಡೆ ಅವರು ಹೇಳಿದಾಗ ನಖಶಿಖಾಂತ ಉರಿದು ಬಿದ್ದ ಶ್ರೀಮತಿ ಯಶೋಧರಾ ದಾಸಪ್ಪ, ಹೆಂಡ-ಸಾರಾಯಿ ಸಹವಾಸದಿಂದ ಬಡ ಕುಟುಂಬಗಳು ಬೀದಿ ಪಾಲಾಗುತ್ತವೆ. ಗಾಂಧಿ ತತ್ವದಂತೆ ರಾಜ್ಯದಲ್ಲಿ ಸಂಪೂರ್ಣವಾಗಿ ಪಾನ ನಿರೋಧ ಜಾರಿಗೊಳಿಸಬೇಕಿದ್ದರೂ, ಮದ್ಯಪಾನ ನಿಷೇಧ ಇರುವ ಜಿಲ್ಲೆಗಳಲ್ಲಿ ಮದ್ಯಪಾನ ಜಾರಿಗೆ ತರುವುದು ಸರಿಯಲ್ಲ. ಕುಡುಕರ ಹಣದಿಂದ ಸರ್ಕಾರ ನಡೆಸುವ ದುರ್ಗತಿ ಈ ರಾಜ್ಯಕ್ಕೆ ಬಂದಿಲ್ಲ. ಕಳ್ಳಭಟ್ಟಿ ತಯಾರಿಸುವವರನ್ನು ಕಠಿಣ ಕಾನೂನಿಂದ ನಿಗ್ರಹಿಸುವ ಬದಲು, ಅವರಿಗೆ ಹೆದರಿ ಸಾರಾಯಿ ಮಾರಾಟಕ್ಕೆ ಅವಕಾಶಕೊಡುವುದು ಅಕ್ಷಮ್ಯ ಎಂದು ವಾದಿಸಿದರು.

ಈ ಸಂದರ್ಭದಲ್ಲಿ ಹಣಕಾಸು ಸಚಿವ ರಾಮಕೃಷ್ಣ ಹೆಗಡೆ ಮಾತಾಡಿದ ಹಗುರವಾದ ಮಾತು ಸಚಿವೆ ಯಶೋಧರದಾಸಪ್ಪ ಅವರನ್ನು ಕೆರಳಿಸಿತು. ಸಭೆಯಲ್ಲಿ ಒಬ್ಬ ಮಹಿಳೆ ಇದ್ದಾರೆಂಬ ಪರಿಜ್ಞಾನವಿಲ್ಲದೆ ಅಸಭ್ಯವಾಗಿ ಮಾತನಾಡುವವರ ಸಂಪುಟದಲ್ಲಿ ತಾವಿರುವಿದಿಲ್ಲ ಅಂತ ಅಲ್ಲೆ ರಾಜಿನಾಮೆ ಬರೆದು ಹೊರಬಂದರು. ವಿಧಾನಸೌಧದಿಂದ ಮನೆಗೆ ಹೋಗುವಾಗಲೂ ಸರ್ಕಾರಿ ವಾಹನವನ್ನು ಬಳಸದೆ ಖಾಸಗಿ ವಾಹನದಲ್ಲೆ ಹೋಗಿದ್ದು ಅವರ ಕಾರ್ಯ ನಿಷ್ಟೆಗೆ ಸಾಕ್ಷಿಯಾಗಿತ್ತು.

ಯಶೋಧರಾ ದಾಸಪ್ಪನವರ ರಾಜೀನಾಮೆಯ ಪ್ರಕರಣ ದೇಶಾದ್ಯಂತ ದೊಡ್ಡ ಸುದ್ದಿಯಾಯಿತು. ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ ಸೇರಿದಂತೆ ಹಿರಿಯ ಮುತ್ಸದ್ಧಿಗಳು ಮೈಸೂರು ರಾಜ್ಯ ಸರ್ಕಾರದ ಕ್ರಮವನ್ನು ಕಟುವಾಗಿ ಟೀಕಿಸಿದರು. ಯಶೋಧರಾ ದಾಸಪ್ಪನವರ ದಿಟ್ಟತನ ಮತ್ತು ತತ್ವನಿಷ್ಠೆಯನ್ನು ಪ್ರಶಂಸಿಸಿದರು. ಜ್ಞಾನಪೀಠ ವಿಜೇತ ಸಾಹಿತಿ ಮಾಸಿವೆಂಕಟೇಶ ಅಯ್ಯಂಗಾರ್ ತಮ್ಮ ಮಾಸಪತ್ರಿಕೆ “ಜೀವನ”ದಲ್ಲಿ ಯಶೋಧರಾ ಅವರ ರಾಜಿನಾಮೆ ಕುರಿತು “ತಾಯಿ ಯಶೋಧರಾ ದಾಸಪ್ಪ” ಎಂಬ ಶೀರ್ಷಿಕೆಯಡಿ ಸಂಪಾದಕೀಯ ಬರೆದು ಯಶೋಧರಾ ದಾಸಪ್ಪನವರ ನಿಲುವನ್ನು ಅಭಿನಂದಿಸಿದರು. ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಗಾಂಧೀತತ್ವಾಧಾರಿತ ಯಶೋಧರಮ್ಮನ ನಿಲುವನ್ನು ಪ್ರಶಂಸಿಸಿದರು. ಕನ್ನಡದ

ಸುಪ್ರಸಿದ್ಧ ಸಾಹಿತಿ ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರು ತಮ್ಮ ಮಾಸಪತ್ರಿಕೆ "ಜೀವನ"ದಲ್ಲಿ ಯಶೋಧರಾ ಅವರ ರಾಜೀನಾಮೆ ಕುರಿತು "ತಾಯಿ ಯಶೋಧರಾ ದಾಸಪ್ಪ" ಎಂಬ ಶೀರ್ಷಿಕೆಯಡಿ ಅಗ್ರಲೇಖನ (ಸಂಪಾದಕೀಯ; 'ಜೀವನ' ಪತ್ರಿಕೆ, ಜನವರಿ 1966) ಬರೆದರು.

ಶ್ರೀಮತಿ ಯಶೋಧರದಾಸಪ್ಪ ನೀಡಿದ ರಾಜೀನಾಮೆಯನ್ನು ಹಿಂಪಡೆಯಬೇಕೆಂದು ಮುಖ್ಯಮಂತ್ರಿ ನಿಜಲಿಂಗಪ್ಪ ನಡೆಸಿದ ಪ್ರಯತ್ನ ವಿಫಲವಾಯಿತು. ಸಚಿವ ಸಂಪುಟ ಸಭೆಯಲ್ಲಿ ಸ್ವೀಕರಿಸಿರುವ ಮದ್ಯಪಾನ ಜಾರಿ ನೀತಿಯನ್ನು ಹಿಂತೆಗೆದುಕೊಳ್ಳುವವರೆಗೂ ರಾಜೀನಾಮೆ ಹಿಂಪಡೆಯುವುದಿಲ್ಲ ಅಂತ ಸ್ಪಷ್ಟವಾಗಿ ಹೇಳಿ, ಗಟ್ಟಿ ನಿಲುವು ತಾಳಿದರು. ಹೀಗೇ ಸುಮಾರು ಆರು ತಿಂಗಳ ಕಾಲ ಮುಖ್ಯಮಂತ್ರಿ ನಿಜಲಿಂಗಪ್ಪ ಯಾವುದೇ ತೀರ್ಮಾನ ಸ್ಪಷ್ಟವಾಗಿ ತಳೆಯದೆ ಮುಂದೂಡುತ್ತಾ ಹೋದರು. ದಿನ ಕಳೆದಂತೆ ಲಿಕ್ಕರ್ ಲಾಬಿ ಮೇಲುಗೈ ಸಾಧಿಸುತ್ತಾ ಹೋಯಿತು.

ಕರ್ನಾಟಕದ ಸಚಿವ ಸಂಪುಟವು ಪಾನನಿರೋಧ ಕಾನೂನನ್ನು ತೆಗೆದುಹಾಕುವ ಘಟ್ಟ ಬಂದಾಗ ಯಶೋಧರಾ ದಾಸಪ್ಪನವರು ಪ್ರಧಾನಿ ಲಾಲ್‌ಬಹಾದೂರ್ ಶಾಸ್ತ್ರಿ ಮತ್ತು ಅಂದಿನ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ್ ಅವರಿಗೂ ಪತ್ರ ಬರೆದು ಸಚಿವ ಪದವಿಗೆ ರಾಜೀನಾಮೆ ನೀಡುವ ಹಿಂದಿನ ತಮ್ಮ ನಿರ್ಧಾರಕ್ಕೆ ಕಾರಣವನ್ನು ತಿಳಿಸಿದರು. ರಾಜ್ಯದಲ್ಲಿ ಜಾರಿ ಇರುವ ಜಿಲ್ಲೆಗಳಲ್ಲಿ ಮದ್ಯಪಾನ ಜಾರಿಗೆ ಅವಕಾಶ ನೀಡಬಾರದೆಂದು ಕೋರಿದರು. ಶ್ರೀಮತಿ ಯಶೋಧರಮ್ಮನ ಪತ್ರಕ್ಕೆ ಸ್ಪಂದಿಸಿದ ಪ್ರಧಾನಿ ಲಾಲ್‌ಬಹಾದೂರ್ ಶಾಸ್ತ್ರಿ ಮುಖ್ಯಮಂತ್ರಿ ನಿಜಲಿಂಗಪ್ಪನವರಿಗೆ ಪತ್ರ ಬರೆದು ಯಶೋಧರಾ ದಾಸಪ್ಪನವರ ಮನವೊಲಿಸಬೇಕೆಂದು ಕೋರಿದರು. ಅದರಂತೆ ಮುಖ್ಯಮಂತ್ರಿ ನಿಜಲಿಂಗಪ್ಪ ಸಚಿವ ಸಂಪುಟದ ಹಿರಿಯ ಸದಸ್ಯರು ಯಶೋಧರಾ ಅವರೊಡನೆ ಘಂಟೆಗಟ್ಟಲೆ ಅನೌಪಚಾರಿಕವಾಗಿ ಮಾತುಕತೆ ನಡೆಸಿ 'ಸರ್ಕಾರವು ಕೈಗೊಳ್ಳುತ್ತಿರುವ ಕ್ರಮವೂ ಪಾನನಿರೋಧ ಕಾನೂನಿನಲ್ಲಿ ಮಾಡುತ್ತಿರುವ ಅಲ್ಪ ಪ್ರಮಾಣದ ಸಡಿಲಿಕೆಯೇ ಹೊರತು, ಪೂರ್ಣ ಪ್ರಮಾಣದಲ್ಲಿ ಪಾನನಿರೋಧ ಕಾಯ್ದೆಯನ್ನು ರದ್ದು ಮಾಡುತ್ತಿಲ್ಲ' ಎಂದು ಸಮರ್ಥನೆ ನೀಡಿದರು.

ಆಗ ಯಶೋಧರಮ್ಮ 'ಒಮ್ಮೆ ಕಾನೂನನ್ನು ಸಡಿಲಿಸಿದ ಮೇಲೆ ಅದು ಮುಕ್ತ ಪಾನ ವಿತರಣೆಗೆ ಹೆಬ್ಬಾಗಿಲನ್ನು ತೆಗೆದಂತೆ ಆಗುವುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಪಾನನಿರೋಧ ಕಾನೂನನ್ನು ಪ್ರಾಮಾಣಿಕವಾಗಿ ಜಾರಿಯಲ್ಲಿಡಿ. ಇಲ್ಲದಿದ್ದರೆ, ನನ್ನ ರಾಜೀನಾಮೆ ಒಪ್ಪಿಕೊಳ್ಳಿ. ಕೋಟಿ ಕೋಟಿ ಹೆಣ್ಣು ಮಕ್ಕಳನ್ನು ಕಣ್ಣೀರಿಗೆ ಗುರಿ ಮಾಡುವ, ದೀನ-ದಲಿತರ ಜೀವನವನ್ನು ಮತ್ತಷ್ಟು ದಾರಿದ್ರ್ಯ ಮತ್ತು ವ್ಯಸನಕ್ಕೆ ತಳ್ಳುವ ಸರ್ಕಾರದ ಕ್ರಮಕ್ಕೆ ನನ್ನ ಸಮ್ಮತಿಯಿಲ್ಲ' ಎಂದು ಸ್ಪಷ್ಟವಾಗಿ ಹೇಳಿದರು.

ಯಶೋಧರಾ ಅವರು ಸಚಿವ ಪದವಿಯನ್ನು ತ್ಯಾಗ ಮಾಡಿದ ತರುಣದಲ್ಲೇ ಗಾಂಧೀ ಸ್ಮಾರಕ ನಿಧಿಯ ಧರ್ಮದರ್ಶಿಗಳ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ಹೊಸ ದೆಹಲಿಗೆ ಹೋಗಿದ್ದರು. ಆಗ ಗಾಂಧೀ ಸ್ಮಾರಕ ನಿಧಿಯ ಧರ್ಮದರ್ಶಿಗಳೆಲ್ಲರೂ ಹೃತ್ಪೂರ್ವಕವಾಗಿ ಯಶೋಧರಾ ಅವರನ್ನು ಅಭಿನಂದಿಸಿದರು. ಧರ್ಮದರ್ಶಿಗಳ ಸಭೆಯಲ್ಲಿ ಪಾಲುಗೊಂಡಿದ್ದ ಆಚಾರ್ಯ ಕೃಪಲಾನಿಯವರಂತೂ ಭಾವಾವೇಶದಿಂದ 'ಯಶೋಧರಾ ತುಂ ಗಂಗಾ ಬನ್ ಗಯೀ' ('ಯಶೋಧರಾ ನೀನು ಗಂಗೆ ಆಗಿ ಬಿಟ್ಟೆ') ಎಂದು ನುಡಿದು ತಮ್ಮ ಅತೀವ ಮೆಚ್ಚುಗೆಯನ್ನು ಅಭಿವ್ಯಕ್ತಗೊಳಿಸಿದ್ದರು.

1966ರ ಜೂನ್ ಹೊತ್ತಿಗೆ ಕರ್ನಾಟಕದ ತುಮಕೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಜಾರಿಯಲ್ಲಿದ್ದ 'ಪಾನ ನಿರೋಧ ನೀತಿ'ಯನ್ನು ಕೈಬಿಡುವ ನಿರ್ಧಾರವನ್ನು ಮಂತ್ರಿಮಂಡಲ ಕೈಗೊಂಡಿತು. ಹಾಗೇ, ಯಶೋಧರಾ ದಾಸಪ್ಪ ತಮ್ಮ ಸಚಿವ ಪದವಿಗೆ ನೀಡಿದ್ದ ರಾಜೀನಾಮೆ ಪತ್ರವನ್ನು ಅಂಗೀಕರಿಸಲಾಯಿತು.

ಅಲ್ಲಿಗೆ ದೀನ-ದಲಿತರ-ಮಾನಿನಿಯರ ರಕ್ಷಣೆಗಿದ್ದ ಮಾತೆ ಯಶೋಧರಾ ದಾಸಪ್ಪ ವಿಧಾನಸೌಧದಿಂದ ಶಾಶ್ವತವಾಗಿ ನಿರ್ಗಮಿಸುವಂತಾಯಿತು. ರಾಷ್ಟ್ರದ ಹಿರಿಯ ಗಾಂಧೀವಾದಿಗಳೂ ಸರ್ವೋದಯ ಚಳವಳಿಯ ಮುಖಂಡರೂ ಸ್ವಾತಂತ್ರ್ಯ ಹೋರಾಟಗಾರರೂ ಸಾರ್ವಜನಿಕ ಹಿತಚಿಂತನೆಯ ಪ್ರಗತಿಪರ ಸಂಸ್ಥೆಗಳ ನೇತಾರರೂ ಯಶೋಧರಾ ದಾಸಪ್ಪನವರ ದಿಟ್ಟತನವನ್ನು ಶ್ಲಾಘಿಸಿದರು. ಸರ್ಕಾರದ ನೀತಿಯನ್ನು ಪ್ರತಿಭಟಿಸಿದರು. ಕರ್ನಾಟಕದ ಸರ್ವೋದಯ ನಾಯಕರು ಬೆಂಗಳೂರಿನ ಗಾಂಧೀಭವನದಲ್ಲಿ ತಲಾ ಮೂರು ಮೂರು ದಿನಗಳ ಕಾಲ ಸರದಿ ಉಪವಾಸಮಾಡಿದರು.

ಮಹಾತ್ಮಾ ಗಾಂಧೀಜಿಯವರು ಜನ ವಿರೋಧಿ ಸರ್ಕಾರವನ್ನು 'ಒಂದು ಆತ್ಮರಹಿತ ಯಂತ್ರ' [The State is a Soulless machine] ಎಂದು ಹೇಳುತ್ತಿದ್ದರು. ಅದರಂತೆಯೇ, ನಿಜಲಿಂಗಪ್ಪ ಸರ್ಕಾರ 'ಒಂದು ಆತ್ಮರಹಿತ ಯಂತ್ರ' ಆಗಿ ವರ್ತಿಸತೊಡಗಿತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಈಚಲು ಮರಗಳನ್ನು ಕತ್ತರಿಸಿ, ಹೆಂಡದ ಗಡಿಗೆಗಳನ್ನು ಒಡೆದು ಹಾಕುವ ಮೂಲಕ ಪ್ರಸಿದ್ಧರಾಗಿದ್ದ ನಿಜಲಿಂಗಪ್ಪನವರು, ಮುಖ್ಯಮಂತ್ರಿಯಾದಾಗ ತಮ್ಮ ಅಧಿಕಾರ ಉಳಿವಿಗಾಗಿ ಹೆಂಡ, ಸಾರಾಯಿ ಮತ್ತಿತರ ಮದ್ಯದಂಗಡಿಗಳಿಗೆ ಧಾರಾಳವಾಗಿ ಪರವಾನಿಗೆ ನೀಡಲಾರಂಭಿಸಿದರು. ಇದರಿಂದ ಮದ್ಯದಂಗಡಿಗಳು ರಾಜ್ಯದೆಲ್ಲೆಡೆ ಕಾಣಿಸಿಕೊಳ್ಳಲಾರಂಭಿಸಿತು.

# ತೋರಿಕೆ ಅಭಿಮಾನದಿಂದ ಪ್ರಯೋಜನವಿಲ್ಲ!

4ನೇ ಪುಟದಿಂದ

ಅಷ್ಟೇಕೆ, ಕೋಲಾರ ಜಿಲ್ಲೆಯ ಕೆಜಿಎಫ್, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ, ಬಳ್ಳಾರಿ–ರಾಯಚೂರು–ಬೀದರ–ವಿಜಾಪುರ–ಬೆಳಗಾವಿ–ಕಾರವಾರ–ಮಂಗಳೂರು–ಕೊಡಗು ಜಿಲ್ಲೆಗಳಲ್ಲಿ ಕನ್ನಡಕ್ಕೆ, ಕನ್ನಡಿಗರಿಗೆ ಮಾನ್ಯತೆಯಿರಲಿಲ್ಲ. ಬಹುತೇಕ ಈ ಜಿಲ್ಲೆಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ತೀರಾ ಅಪರೂಪವಾಗಿತ್ತು. ಅಲ್ಲೂ ತಮಿಳು–ತೆಲುಗು–ಹಿಂದಿ ಚಿತ್ರಗಳ ಪ್ರದರ್ಶನ ರಾಜಾರೋಷಾಗಿ ನಡೆಯುತ್ತಿತ್ತು. ಕನ್ನಡಿಗರು ವಿಧಿಯಿಲ್ಲದೆ ಅವುಗಳನ್ನೇ ನೋಡುವ ದುಸ್ಥಿತಿಯಿತ್ತು. ಈ ಪ್ರದೇಶಗಳಲ್ಲಿ ಕನ್ನಡಿಗರು ಧ್ವನಿಯೆತ್ತಿ ಮಾತಾಡುವ ಸ್ಥಿತಿಯೂ ಇರಲಿಲ್ಲ.

ಅಂತಹ ದಯನೀಯ ಸ್ಥಿತಿಯನ್ನು ಕಂಡು ಸೆಟೆದು ನಿಲ್ಲುವುದು ಸಾಧಾರಣವಾದ ಸಂಗತಿಯಾಗಿರಲಿಲ್ಲ. ಕನ್ನಡದ ಸಾಹಿತಿಗಳು ಮೊದಲು ಧ್ವನಿಯೆತ್ತಿದರು, ಆಮೇಲೆ ನೇರ ಬೀದಿಗಿಳಿದರು. ಕನ್ನಡಿಗರು ಗಾಢ ನಿದ್ದೆಯಿಂದೆದ್ದು ಬೀದಿಗಿಳಿಯಬೇಕೆಂದು ಕರೆ ಕೊಟ್ಟರು. ಶತಮಾನದಿಂದ ಭಯ–ಭೀತಿಯಲ್ಲಿ ಅಡಗಿ ಕೂತಿದ್ದ ಕನ್ನಡಿಗ ಯುವಶಕ್ತಿ ಮೆಲ್ಲಗೆ ಆಚೆ ಇಣುಕಿ ಬೀದಿಗಿಳಿದೇ ಬಿಟ್ಟರು. ಕೂಗಲು ಮುಂದಾದರು. ಅನ್ಯಾಯದ ವಿರುದ್ಧ ಧಿಕ್ಕಾರ ಹಾಕಲು ಧೈರ್ಯ ವಹಿಸಿದರು. ಅವರ ಮುಂದೆ ಸಾಹಿತಿಗಳು, ಕಲಾವಿದರು, ಚಿಂತಕರು ಇದ್ದರು. ಅವರಿಗೆ ಸ್ಫೂರ್ತಿ–ಚೇತನ ಶಕ್ತಿಯಾಗಿ ಕವಿ ಪುಂಗವರ ಝೇಂಕರಿಸುವ ಕಾವ್ಯದ ಸಾಲುಗಳಿದ್ದವು. ಹಾಗಾಗಿ ಕನ್ನಡ–ಕನ್ನಡಿಗರ ಪರ ಜಯಘೋಷ ಮೊಳಗಿದವು.



ಅಲ್ಲಿಂದ ನಾಡಪರವಾದ ಹೋರಾಟಕ್ಕೆ 65 ವರ್ಷಗಳಾಗಿದ್ದರೂ, ಜೀವಂತವಾಗಿ ಉಳಿದುಕೊಂಡಿರುವುದಕ್ಕೆ ಅದೇ 'ಅಭಿಮಾನ'ವಾಗಿದೆ. ಆರೂವರೆ ದಶಕ ಕಳೆದಿದ್ದರೂ ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಪೂರ್ಣ ಪ್ರಮಾಣದ ನ್ಯಾಯ ಸಿಕ್ಕಿರುವುದಿಲ್ಲ. ಪರಮ ಅನ್ಯಾಯವನ್ನೇ ಅನುಭವಿಸುವ ಸ್ಥಿತಿ ಉಳಿದುಕೊಂಡಿದೆ. ಕನ್ನಡವನ್ನು ಎಲ್ಲ ಹಂತದಲ್ಲೂ ಬಳಸುವಲ್ಲಿ ಆಳುವ ಸರ್ಕಾರಗಳು ವಿಫಲಗೊಂಡಿವೆ. ರಾಜ್ಯ ಸರ್ಕಾರಗಳದ್ದೆ ಈ ಕತೆಯಾದರೆ, ಮೊದಲಿನಿಂದಲೂ ಕನ್ನಡನಾಡನ್ನು ಕೇವಲವಾಗಿ ಕಾಣುತ್ತಿರುವ ದೆಹಲಿ ದೊರೆಗಳು ಈ ಹೊತ್ತಿಗೂ ಆ ಚಾಳಿಯನ್ನು ಮುಂದುವರಿಸಿದ್ದಾರೆ. ಕಾವೇರಿ–ಕೃಷ್ಣೆ–ಮಹದಾಯಿ–ಮೇಕೆದಾಟು ವಿಚಾರಗಳನ್ನು ನ್ಯಾಯಾಧೀಕರಣ–ನ್ಯಾಯಾಲಯ–ನಿಯಂತ್ರಣ ಮಂಡಳಿ ಹೆಸರಲ್ಲಿ ಜಗ್ಗಿಸುತ್ತಾ ಅನ್ಯಾಯವನ್ನೇ ಮಾಡುತ್ತಿದ್ದಾರೆ. ಗಡಿ ವಿಚಾರದಲ್ಲೂ ಪರಮ ಅನ್ಯಾಯ ಮುಂದುವರಿದಿದೆ. ಹಾಗಾಗಿ ರಾಜ್ಯದ ಗಡಿ ಭಾಗಗಳು ನೆಮ್ಮದಿ ಭಂಗದ ತಾಣಗಳಾಗಿ ಉಳಿದುಬಿಟ್ಟಿವೆ.

ಇಂತೆಲ್ಲಾ ಅನ್ಯಾಯಗಳ ವಿರುದ್ಧ ಆರಂಭದಲ್ಲಿ ಅನಕೃ, ಮ. ರಾ., ತರಾಸು, ನಾಡಿಗೇರ, ವಾಟಾಳ್, ಜಿನಾಕು, ಪ್ರಭಾಕರರೆಡ್ಡಿ ಮುಂತಾದವರು ಬೀದಿಗಿಳಿದು ಕನ್ನಡಿಗರನ್ನು ಹೋರಾಟದ ಸಾಗರಕ್ಕೆ ಬರುವಂತೆ ಮಾಡಿದರು. ಅದರ ಫಲವಾಗಿ ಕನ್ನಡ ಭಾಷೆಗೆ, ಕನ್ನಡ ಚಿತ್ರರಂಗಕ್ಕೆ, ಕನ್ನಡಿಗರ ಪಾಲಿನ ಉದ್ಯೋಗ ಕ್ಷೇತ್ರದಲ್ಲಿ ಅಷ್ಟಿಷ್ಟು ನ್ಯಾಯ ಸಿಗುವಂತಾಯಿತು. ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರಾಯಿತು. ಕೇಂದ್ರೋದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗ ದೊರಕತೊಡಗಿದ್ದವು. ಅಲ್ಲಿ ಕನ್ನಡಿಗರು ಕನ್ನಡ ಸಂಘಗಳನ್ನು ಸ್ಥಾಪಿಸಿಕೊಂಡು ಒಗ್ಗೂಡುವಂತಾದರು. ರಾಜ್ಯೋತ್ಸವ ಆಚರಿಸಲು ಅಲ್ಲಿಯ ಆಡಳಿತ ವ್ಯವಸ್ಥೆ ಅನುವು ಮಾಡಿಕೊಟ್ಟವು.

ಇದು ಪೂರ್ಣವಾದ ಸಾಧನೆಯಲ್ಲದಿದ್ದರೂ ತಕ್ಕಮಟ್ಟಿನ ಫಲ ಸಿಗುವಂತಾಗಿದ್ದಕ್ಕೆ ಅಂದಿನ ಕನ್ನಡ ಪರ ನಾಯಕರ ಕೆಚ್ಚಿನ ಹೋರಾಟ ಮತ್ತು ತ್ಯಾಗ ಕಾರಣವಾಗಿರುವುದನ್ನು ನಾವು ಮರೆಯಲಾಗದು. ಅಂದಿನ ನಾಯಕರಾಗಲಿ, ಕಾರ್ಯಕರ್ತರಾಗಲಿ 'ತೋರಿಕೆಯ ಅಭಿಮಾನ' ತೋರಿದವರಲ್ಲ. ಕನ್ನಡಕ್ಕಾಗಿ, ಕನ್ನಡನಾಡಿಗಾಗಿ 'ಮಾಡು ಇಲ್ಲವೆ ಮಡಿ' ಎಂಬಂತಹ 'ಎದೆಯಾಳದ ಅಭಿಮಾನ'ವಾಗಿತ್ತು. ಲಾಠಿಯೇಟು, ಲಾಕಪ್ ವಾಸ, ಬೂಟಿನೇಟು, ಸೆರೆವಾಸ, ಕೋರ್ಟ್–ಕೇಸಿಗಾಗಿ ಅಲೆದಾಟಗಳೆಲ್ಲಾ ನಿರಂತರವಾಗಿ ನಡೆದಿದ್ದವು. ಅಷ್ಟಕ್ಕೇ ಅಂಜಿಕೊಂಡು ಹೋರಾಟಕ್ಕೆ ಬೆನ್ನು ತೋರಿಸಿದ ಉದಾಹರಣೆಗಳೇ ಇರಲಿಲ್ಲ.

ಹೋರಾಟದ ಮುಂಚೂಣಿಯಲ್ಲಿದ್ದ ಮ. ರಾಮಮೂರ್ತಿ ಕನ್ನಡಿಗರಿಗೊಂದು ಹಳದಿ–ಕೆಂಪು ಬಾವುಟವನ್ನು ರೂಪಿಸಿ ರಾಜಧಾನಿಯಲ್ಲಿ ಕಂಡಕಂಡ ಕಡೆ ಹಾರಾಡುತ್ತಿದ್ದ ಡಿಎಂಕೆ ಧ್ವಜಗಳನ್ನು ಇಳಿಸಿ, ಅಲ್ಲೆಲ್ಲಾ ಕನ್ನಡ ಬಾವುಟ ಹಾರಿಸಬೇಕೆಂಬ ಕನಸು ತುಂಬಿಕೊಂಡಿದ್ದರು. ಆದರೆ ಕೇವಲ 49ನೇ ವಯಸ್ಸಿನಲ್ಲಿ ದುರಂತ ಸಾವಿಗೆ ಬಲಿಯಾಗಿಬಿಟ್ಟರು. ಕಾದಂಬರಿ ಸಾರ್ವಭೌಮ ಖ್ಯಾತಿಯ ಅನಕೃ ಇಳಿ ವಯಸ್ಸಿನವರೆಗೂ ಕನ್ನಡ ನಾಡಿಗಾಗಿ ಹೋರಾಡಿದ್ದರು. ಕನ್ನಡಕ್ಕಾಗಿ ನಾಯಕಮಣಿಗಳಿಗೆ ಸಲಹೆ ನೀಡುತ್ತಿದ್ದ 12 ವರ್ಷ ಕಾಲ 'ಮೌನ ವ್ರತ' ಆಚರಿಸಿದ್ದ ಅ. ಸಂಜೀವಪ್ಪ ಅನಾಥರಾಗಿ ಪ್ರಾಣಬಿಟ್ಟರು. 'ಕೇಸರಿ ಗೋಪಿನಾಥ್' ಎಂದೇ ಹೆಸರಾಗಿದ್ದ ಕೆಚ್ಚಿನ ಮುಖಂಡ ರೈಲಿಗೆ ತಲೆ ಕೊಟ್ಟು ಬಲಿದಾನವಾದರು. ಮು. ಗೋವಿಂದರಾಜು ಅವರನ್ನು ರೈಲು ಸತ್ಯಾಗ್ರಹದಲ್ಲಿ ರೈಲೇ ರುಂಡ–ಮುಂಡ ತುಂಡರಿಸಿ

ಬಲಿ ಪಡೆಯಿತು. ಪರಭಾಷಿಕರ ಪಾಲಿಗೆ ಸಿಂಹಸ್ವಪ್ನವಾಗಿದ್ದ ಟೋಪಿ ಬಸವರಾಜ್‌ರನ್ನು ಕನ್ನಡ ದ್ರೋಹಿಗಳು ಹತ್ಯೆಗೈದು ದೇಹವನ್ನು ಬಿಸುಟಿದ್ದರು. ಕೆಚ್ಚೆದೆಯ ಯುವ ನಾಯಕರಾಗಿದ್ದ ರಹಮಾನ್‌ಖಾನ್‌ರನ್ನು ರಸ್ತೆಯಲ್ಲಿ ಓಡುತ್ತಿದ್ದ ವಾಹನ ಬಲಿ ಪಡೆದುಕೊಂಡಿತು.

ಹೀಗೇ ಹಲವಾರು ಕನ್ನಡ ಪರವಾಗಿದ್ದ ಮುಖಂಡರು, ಕಾರ್ಯಕರ್ತರು ಅನಾಥರಂತೆ, ಅಸಹಾಯಕರಂತೆ ಜೀವ ಕಳೆದುಕೊಂಡಿದ್ದ ದುರಂತಗಳು ಈ ಹೋರಾಟದ ಕಥಾನಕದಲ್ಲಿ ಅಡಗಿಕೊಂಡಿವೆ ಎಂಬುದನ್ನು ಇಂದಿನವರು ಅರಿಯದಿದ್ದರೆ, ಅವರ ಹಾದಿಗಳು ಸರಾಗವಾಗಿರುವುದಿಲ್ಲ ಎಂದು ಎಚ್ಚರಿಸುವುದು ಅನಿವಾರ್ಯವಾಗಿದೆ. ಅವರಲ್ಲಿದ್ದ ಅಭಿಮಾನ ಕರುಳಿನಿಂದ ಬಂದಿದ್ದಾಗಿತ್ತು. ಅವರ ಮಾತು, ಘೋಷಣೆ, ಧಿಕ್ಕಾರಗಳು ಕೊರಳಿನಿಂದ ಉಲಿದುಲಿದು ಬರುತ್ತಿದ್ದವು. ಅಲ್ಲಿ ಕಪಟವಿರಲಿಲ್ಲ. ಸ್ವಾರ್ಥವಂತೂ ಇರಲಿಲ್ಲ. 'ಮಾಡು ಅಥವಾ ಮಡಿ' ಎಂಬುದಷ್ಟೆ ಅವರ ಪ್ರತಿಜ್ಞೆಯಾಗಿತ್ತು. ಅದವರ ಗುರಿಯಾಗಿತ್ತು. ಅದರಿಂದಾಗಿ, ಅವರೆಲ್ಲಾ ಅಜರಾಮರರಾಗಿದ್ದಾರೆ. ಈ ಶತಮಾನದಲ್ಲೂ ಅವರನ್ನು ನೆನೆಯುವ ಕಾರ್ಯ ನಡೆಯುತ್ತಿದೆ.

ಕಳೆದ ಶತಮಾನದ ದೊಡ್ಡ ನಾಯಕರಲ್ಲಿ ವಾಟಾಳ್ ನಾಗರಾಜ್ ಮಾತ್ರ ನಮ್ಮ ಜೊತೆಗಿದ್ದಾರೆ. ಆ ಶತಮಾನಾಂತ್ಯದಲ್ಲಿ ಹೋರಾಟದ ಕಣಕ್ಕಿಳಿದಿದ್ದ ಸಾ.ರಾ. ಗೋವಿಂದು ಮತ್ತಿತರರಿದ್ದಾರೆ. ಮಿಕ್ಕಂತೆ ಬಹುತೇಕರು ನಮ್ಮ ಜೊತೆಗಿಲ್ಲದಿದ್ದರೂ ಅವರನ್ನು ಇತಿಹಾಸ ನೆನಪಿಸಿಕೊಳ್ಳುವಂತೆ ಮಾಡಬೇಕಾದ್ದು ಇಂದಿನ ಹೋರಾಟಗಾರರ ಪರಮ ಕರ್ತವ್ಯವಾಗಬೇಕಿದೆ. ಇಲ್ಲದಿದ್ದರೆ ನಾಡಪರವಾದ ಹೋರಾಟ ದುರ್ಬಲಗೊಳ್ಳುತ್ತದೆ. ಅಷ್ಟೇ ಅಲ್ಲ, ಈ ಹೊತ್ತಿನ ಹೋರಾಟಗಾರರೆನಿಸಿಕೊಂಡವರು ಈ ಶತಮಾನದಲ್ಲೆ ಕಳೆದು ಹೋಗಬಹುದಾಗಿದೆಯೆಂಬ ಎಚ್ಚರ ಇರಬೇಕಾಗಿದೆ.

ಈ ಬಾರಿಯ ಹತ್ತಾರು ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಾಷಣ ಮಾಡುವ ಅವಕಾಶ ನನಗೆ ಲಭಿಸಿತ್ತು. ಅಂದಿನ ರೋಚಕತೆಯಿಂದ ಕೂಡಿದ ಹೋರಾಟ, ಅಹಿಂಸಾ ಹೋರಾಟದಲ್ಲೂ ಹಿಂಸೆಯನ್ನನುಭವಿಸಬೇಕಾಗಿ ಬಂದಿದ್ದ ದುಸ್ಥಿತಿ, ಆ ಹೋರಾಟದಿಂದಾದ ಫಲ ಇತ್ಯಾದಿಗಳನ್ನು ಬಹುತೇಕ ಕಡೆ ಹೇಳಿದ್ದಾಗ ಕೇಳುಗರೆಲ್ಲರೂ ದಿಗ್ಮೂಢರಂತೆ ಆಲಿಸಿದ್ದನ್ನು ಕಂಡಿದ್ದೆ. ಆಮೇಲೆ ಅಲ್ಲಿಯ ಬಹಳಷ್ಟು ಕೇಳುಗರು 'ಇದೆಲ್ಲಾ ನಮಗೆ ಗೊತ್ತೇ ಇರಲಿಲ್ಲ!' ಅನ್ನುತ್ತಿದ್ದ ಮಾತನ್ನು ಕೇಳಿ ದಿಗ್ಭ್ರಮೆಗೊಳ್ಳುತ್ತಿದ್ದೆ.

ಅಂದರೆ, ಇಂದಿನ ಹೋರಾಟಗಾರರು ಇದನ್ನು ಗಂಭೀರವಾಗಿ ಯೋಚಿಸುವ ಅಗತ್ಯವಿದೆ. ಈ ಬೆಳವಣಿಗೆಗೆ ನೀವೇ ಕಾರಣರಾಗಿರುತ್ತೀರಿ ಎಂಬುದನ್ನು ಮೆಲುಕು ಹಾಕಬೇಕಿದೆ. ಅಂದು ಹತ್ತಾರು ನಾಯಕರು ಮಾತ್ರವೇ ಇದ್ದರು. ಮಿಕ್ಕಂತೆ ಸಹಸ್ರಾರು ಕಾರ್ಯಕರ್ತರಿದ್ದರು. ಆ ನಾಯಕರಲ್ಲಿ ಆ ಕಾರ್ಯಕರ್ತರು ಗೌರವಾದರಗಳನ್ನು ಹೊಂದಿದ್ದರು. ನಿಷ್ಠೆ-ಬದ್ಧತೆಗಳನ್ನು ಹೊಂದಿದ್ದರು. ಆದರಿಂದು ನೂರಾರು ನಾಯಕರಿದ್ದಾರೆ. ವಿಚಿತ್ರವೆಂದರೆ, ನೂರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಇರುವುದಿಲ್ಲ. ಬಹಳಷ್ಟು ಮಂದಿ 'ರಾಜ್ಯ ನಾಯಕ'ರಾಗಿ ಫೋಜು ಕೊಡುವಲ್ಲಿ ನಿರತರಾಗಿದ್ದಾರೆ. ಒಬ್ಬ ನಾಯಕನನ್ನು ಕಂಡರೆ ಇನ್ನೊಬ್ಬ ಅಸೂಯೆಯಲ್ಲಿ ಬೇಯುವ, ದ್ವೇಷ ಕಾರುವ, ಹಗೆ ಸಾಧಿಸುವ ಚಾಳಿ ಬೆಳೆದುಕೊಂಡಿದೆ. ನಾಯಕರು ರಾಜಕೀಯ ನಾಯಕರನ್ನು, ಅಧಿಕಾರಸ್ಥರನ್ನು ಭೇಟಿ ಮಾಡಿ, ಹೂಗುಚ್ಛ ನೀಡಿ ತಮಗೆ ಬೇಕಾದ್ದನ್ನು ಪಡೆದುಕೊಳ್ಳುವ 'ಭೂಪತಿ'ಗಳಾಗಿ ರೂಪುಗೊಂಡಿರುವುದನ್ನು ಕಾಣಬೇಕಾದ ದೌರ್ಭಾಗ್ಯ ಬಂದಿದೆ. ಅದರ ಜೊತೆಗೆ 'ಹೋರಾಟ'ದ ಹೆಸರಲ್ಲಿ ಲೆಕ್ಕಕ್ಕೆ ಸಿಗದ 'ಕೋಟಿಗಳ ಸರದಾರ'ರಾಗಿ ಮಿಂಚುವ, ಮೆರೆಯುವಲ್ಲಿ ಪೈಪೋಟಿ ನಡೆದಿರುವ ದುರುಳತನವೂ ಕಣ್ಣ ಮುಂದಿದೆ.

ಇದು ಅಭಿಮಾನವೊ, ನಾಡನ್ನುಳಿಸುವ ಹೋರಾಟವೊ ಎಂಬ ಆತಂಕ ಧುತ್ತನೆ ಎದುರಾಗಿ ಪ್ರಶ್ನೆ ಹಾಕುತ್ತದೆ. ವಿಚಿತ್ರವೆಂದರೆ, ಇಂದಿನ ನಾಯಕರನ್ನು, ಅವರ ಅಟ್ಟಹಾಸವನ್ನು ಪ್ರಶ್ನಿಸುವಂತಿಲ್ಲ. 'ನಾವು ಕನ್ನಡ ನಾಡು-ನುಡಿಗಾಗಿ ಹೋರಾಡುವವರು. ನಮ್ಮನ್ನು ಪ್ರಶ್ನಿಸುವವರು ನಾಡದ್ರೋಹಿಗಳು!' ಎಂದು ಠೇಂಕರಿಸಿ ಮಾತಾಡುವ, ದಾಳಿ ಮಾಡಿಸುವ 'ಮಹಾನುಭಾವ'ರಾಗಿ ಪರಿವರ್ತನೆಗೊಂಡಿರುವುದು ಅಂದಿನ ತ್ಯಾಗ-ಬಲಿದಾನಗೊಂಡವರಿಗೆ ಅವಮಾನಗೈಯ್ಯುವ ಪರಿಯಂತಾಗಿದೆ-ಎಂದು ಹೇಳಲು ವಿಷಾದವಾಗುತ್ತಿದೆ.

ಈ ಬಗೆಯ 'ಅಭಿಮಾನ'ದಿಂದ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಹತ್ತಾರು ವರ್ಷಗಳ ಲೆಕ್ಕಕ್ಕೆ ಸಿಗದ 'ನಾಯಕರ' ಹೋರಾಟ ಸಾಬೀತು ಮಾಡಿ ತೋರಿಸಿದೆ. ಯಾರನ್ನೋ ಹೆದರಿಸಿ-ಬೆದರಿಸಿ ತಾತ್ಕಾಲಿಕ ಜಯ ಸಾಧಿಸಬಹುದು. ಅದರ ಅನುಕೂಲವನ್ನು 'ಲಾಭ' ಮಾಡಿಕೊಳ್ಳಬಹುದಷ್ಟೆ ಹೊರತು, ಹೋರಾಟ ರಂಗಕ್ಕೆ ಒಳಿತು ಮಾಡುವುದು ಸಾಧ್ಯವೆ ಇಲ್ಲ ಎಂಬುದನ್ನು ಅರ್ಥೈಸಿಕೊಳ್ಳದಿದ್ದರೆ ಯಾವುದೇ ಪ್ರಯೋಜನವಾಗದು. ನಾಡು-ನುಡಿಗೆ ಇನ್ನಷ್ಟು ಕೆಡುಕುಂಟಾಗುವುದಲ್ಲದೆ ಒಳಿತಾಗುವ ಪ್ರಮಾಣ ತೀರಾ ಕಡಿಮೆಯಾಗಿರುತ್ತದೆ.

ಇಂದಿನ ಹೋರಾಟ ರಂಗದ 'ನಾಯಕರು' ತಂತಮ್ಮ 'ಆತ್ಮಸಾಕ್ಷಿ'ಯನ್ನು ಕೆದಕಿ ನೋಡಿಕೊಳ್ಳುವ ಅಗತ್ಯ ಹೆಚ್ಚಿದೆ. ತಮ್ಮ ಹಾದಿಗಳು ಸರಿಯಾಗಿವೆಯೆ ಎಂಬುದನ್ನು ಪ್ರಶ್ನಿಸಿಕೊಳ್ಳುವ ಅನಿವಾರ್ಯತೆಯಿದೆ. ಅಭಿಮಾನಕ್ಕೊ, ಆಸೆಬುರುಕತನಕ್ಕೊ ಇಂದು ಕೂಡಾ ನೂರಾರು-ಸಹಸ್ರಾರು ಸಂಖ್ಯೆಯಲ್ಲಿ 'ಅಭಿಮಾನಿಗಳು' ಮೈಕೊಡವಿಕೊಂಡು ಬೀದಿಗಿಳಿದಿರುವುದನ್ನು ಕಾಣುತ್ತಿದ್ದೇವೆ. ಅವರನ್ನು ಒಳ್ಳೆಯ ಹಾದಿಯಲ್ಲಿ ಕೊಂಡೊಯ್ಯುವ, ಅವರ ಅಭಿಮಾನದ ಶಕ್ತಿ-ಸಾಮರ್ಥ್ಯವನ್ನು ಸಮಗ್ರ ನಾಡಿಗಾಗಿ, ಸಮಸ್ತ ಕನ್ನಡಿಗರಿಗಾಗಿ ಬಳಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ನಡೆಸಿದಲ್ಲಿ ಕನ್ನಡ ನಾಡಿನ ಬಹಳಷ್ಟು ಸಮಸ್ಯೆ-ಸಂಕಟ-ವಿವಾದ-ಬಿಕ್ಕಟ್ಟುಗಳು ಬಗೆಹರಿಯುವಲ್ಲಿ ಆಶಾಭಾವನೆ ತುಂಬಿಕೊಳ್ಳಬಹುದಾಗಿದೆ ಎಂದು ನಿಶ್ಚಯವಾಗಿ ಹೇಳಬಹುದು. ■

# ಖುರ್ಚಿ ಕದನಕ್ಕೆ ಖರ್ಗೆ ಕೊಟ್ಟ ತಿರುವು

7ನೇ ಪುಟದಿಂದ

ಹೀಗೆ ಎರಡು ಬಗೆಯ ವ್ಯಾಖ್ಯಾನಗಳು ಶುರುವಾದ ನಂತರ ಮತ್ತೊಂದು ಬಗೆಯ ಧ್ವನಿ ಕೇಳತೊಡಗಿತು. ಅದೇಂದರೆ,2026-2027 ನೇ ಸಾಲಿನ ಬಜೆಟ್ ಮಂಡಿಸಿ,ನಂತರ ಸಿದ್ಧರಾಮಯ್ಯ ಸಿಎಂ ಹುದ್ದೆಯಿಂದ ಇಳಿಯುವಂತೆ ವರಿಷ್ಟರು ಹೇಳಬಹುದು ಎಂಬುದು,

ಆದರೆ ಇದಕ್ಕೆ ಪ್ರತಿಯಾಗಿ ಹೊರಟ ಮತ್ತೊಂದು ಧ್ವನಿ: ಯಾವ ಕಾರಣಕ್ಕೂ ಈ ಬಾರಿಯ ಬಜೆಟ್ ಅನ್ನು ಸಿದ್ಧರಾಮಯ್ಯ ಮಂಡಿಸುವುದು ಡಿ.ಕೆ.ಶಿವಕುಮಾರ್ ಅವರಿಗೆ ಇಷ್ಟವಿಲ್ಲ.ಯಾಕೆಂದರೆ ಮುಖ್ಯಮಂತ್ರಿಯಾದ ನಂತರ ತಮ್ಮ ಸಾಮರ್ಥ್ಯವನ್ನು ತೋರಿಸಲು ಬಜೆಟ್ ಮಂಡಿಸುವುದು ತುಂಬ ಮುಖ್ಯ.ಹೀಗಾಗಿ ಬಜೆಟ್ ಅನ್ನು ತಾವೇ ಮಂಡಿಸಬೇಕು ಎಂದು ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದಾರೆ ಎಂಬುದು.



ಯಾವಾಗ ಇಂತಹ ಮಾತು, ಪ್ರತಿಮಾತುಗಳ ಅಬ್ಬರ ಹೆಚ್ಚಾಗತೊಡಗಿತೋ? ಆಗ ಕಾಂಗ್ರೆಸ್ ವರಿಷ್ಟರು ಪೇಚಿಗೆ ಸಿಲುಕಿದ್ದು ನಿಜ. ಹೀಗಾಗಿಯೇ ಕಾಂಗ್ರೆಸ್ ಅಧಿನಾಯಕಿ ಶ್ರೀಮತಿ ಸೋನಿಯಾಗಾಂಧಿ ಅವರು ರಾಹುಲ್ ಗಾಂಧಿ ಅವರ ಬಳಿ:ಕರ್ನಾಟಕದ ಗೊಂದಲವನ್ನು ಬಗೆಹರಿಸುವ ಜವಾಬ್ದಾರಿಯನ್ನು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಹಿಸುವುದು ಒಳ್ಳೆಯದು ಎಂದು ಸಲಹೆ ನೀಡಿದರಂತೆ.

ಯಾವಾಗ ಅವರು ಈ ಸಲಹೆ ನೀಡಿದರೋ?ಆನಂತರ ರಾಹುಲ್ ಗಾಂಧಿ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸೂಚನೆ ನೀಡಿ:ಕರ್ನಾಟಕದ ಗೊಂದಲವನ್ನು ನೀವೇ ಬಗೆಹರಿಸಿ ಎಂದು ಹೇಳಿದ್ದಾರೆ ಎಂಬುದು ಮೂಲಗಳ ಹೇಳಿಕೆ. ಯಾವಾಗ ಗೊಂದಲದ ಗೂಡು ತಮ್ಮ ಮಡಿಲಿಗೆ ಬಂದು ಬಿತ್ತೋ?ಇದಾದ ನಂತರ ಮಲ್ಲಿಕಾರ್ಜುನ ಖರ್ಗೆ ಅವರು ಗಂಭೀರವಾಗಿ ಯೋಚಿಸಿದ್ದಾರೆ.ಸಿದ್ಧರಾಮಯ್ಯ ಅವರನ್ನು ಪದಚ್ಯುತಿಗೊಳಿಸಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ನೀಡಿದರೆ ಆಗುವ ಪರಿಣಾಮಗಳೇನು?ಎಂದು ಲೆಕ್ಕ ಹಾಕಿದ್ದಾರೆ.

ಮೂಲಗಳ ಪ್ರಕಾರ,ಇಂತಹ ಲೆಕ್ಕಾಚಾರಕ್ಕಿಳಿದ ಮಲ್ಲಿಕಾರ್ಜುನ ಖರ್ಗೆಯವರಿಗೆ ಅಪಾಯವೇ ಹೆಚ್ಚಾಗಿ ಕಂಡಿದೆ.ಯಾಕೆಂದರೆ,ಸಿದ್ಧರಾಮಯ್ಯ ಅವರು ಇವತ್ತು ಕರ್ನಾಟಕದ ಅಹಿಂದ ವರ್ಗಗಳ ನಾಯಕರಾಗಿ ನೆಲೆಯಾಗಿದ್ದಾರೆ.ಹೀಗಿರುವಾಗ ಅವರನ್ನು ಪದಚ್ಯುತಗೊಳಿಸಿ ಡಿ.ಕೆ.ಶಿವಕುಮಾರ್ ಅವರಿಗೆ ಪಟ್ಟ ನೀಡಿದರೆ ಆಗುವ ಲಾಭ ಏನು?

ಮೊದಲನೆಯದಾಗಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಪಟ್ಟಕ್ಕೆ ಬಂದರೆ ಸಿದ್ಧರಾಮಯ್ಯ ಕನಲುತ್ತಾರೆ. ಅಷ್ಟೇ ಅಲ್ಲ,ಅಹಿಂದ ವರ್ಗಗಳಿಗೆ ಒಂದು ನಕಾರಾತ್ಮಕ ಸಂದೇಶ ರವಾನಿಸುತ್ತಾರೆ.ಇಂತಹ ಸಂದೇಶ ಕೆಲಸ ಮಾಡಿದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಜತೆಗಿರುವ ಮತ ಬ್ಯಾಂಕ್ ಚೆಲ್ಲಾಪಿಲ್ಲಿ ಆಗುತ್ತದೆ.

ಹೋಗಲಿ,ಈ ನಷ್ಟವನ್ನು ಡಿ.ಕೆ.ಶಿವಕುಮಾರ್ ಅವರ ನಾಯಕತ್ವದಿಂದ ತುಂಬಿಸಿಕೊಳ್ಳಬಹುದಾ ಎಂದರೆ,ಮುಂದಿನ ಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಅವರ ಜತೆ ಅವರು ಪ್ರತಿನಿಧಿಸುವ ಒಕ್ಕಲಿಗ ಸಮುದಾಯವೇ ಸಾಲಿಡ್ಡಾಗಿ ನಿಲ್ಲುವುದಿಲ್ಲ.ಯಾಕೆಂದರೆ ಈಗಲೇ ಒಕ್ಕಲಿಗ ಮತ ಬ್ಯಾಂಕಿನ ಪೈಕಿ ಶೇಕಡಾ ಐವತ್ತರಷ್ಟು ಮತಗಳು ದೇವೇಗೌಡರ ನೇತೃತ್ವದ ಜಾತ್ಯಾತೀತ ಜನತಾ ದಳದ ಜತೆಗಿವೆ.



ಉಳಿದಂತೆ ಶೇಕಡಾ ಇಪ್ಪತ್ತೈದರಷ್ಟು ಮತಗಳು ಬಿಜೆಪಿ ಜತೆಗಿವೆ. ಉಳಿದಂತೆ ಶೇಕಡಾ ಇಪ್ಪತ್ತೈದರಷ್ಟು ಮತಗಳು ಕಾಂಗ್ರೆಸ್ ಗೆ ಬಂದರೆ ಆಗುವ ಲಾಭ ದೊಡ್ಡದಲ್ಲ.ಯಾಕೆಂದರೆ,ಸಿದ್ಧರಾಮಯ್ಯ ಅವರನ್ನು ಕೆಳಗಿಳಿಸುವ ಕ್ರಿಯೆಯಲ್ಲಿ ಅಹಿಂದ ವರ್ಗಗಳ ಸಾಲಿಡ್ಡು ಮತಗಳು ಬೇರೆ ಕಡೆ ವಲಸೆ ಹೋದರೆ ಕಾಂಗ್ರೆಸ್ ಪಕ್ಷ ಸೋಲುವುದು ನಿಶ್ಚಿತ ಎಂಬುದು ಮಲ್ಲಿಕಾರ್ಜುನ ಖರ್ಗೆಯವರ ಲೆಕ್ಕಾಚಾರ.

ಅಂದ ಹಾಗೆ ಸಿದ್ಧರಾಮಯ್ಯ ಅವರ ಕೈಯ್ಯಿಂದ ಮುಖ್ಯಮಂತ್ರಿ ಹುದ್ದೆಯನ್ನು ಡಿ.ಕೆ.ಶಿವಕುಮಾರ್ ಅವರಿಗೆ ಕೊಡಿಸುವ ವಿಷಯದಲ್ಲಿ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಹಮತವೇನೋ ಇದೆ.ಆದರೆ ಅದಕ್ಕಾಗಿ ತ್ವರಿತ ತೀರ್ಮಾನ ಕೈಗೊಳ್ಳುವುದು ಅವರಿಗಿಷ್ಟವಿಲ್ಲ.ಬದಲಿಗೆ,ಸಿದ್ಧರಾಮಯ್ಯ ಅವರ ಮನವೊಲಿಸಿ ಇದನ್ನು ಮಾಡಬೇಕು ಎಂಬುದು ಅವರ ಯೋಚನೆ.ಅವರ ಯೋಚನೆ ಕಾರ್ಯಗತವಾಗಲು ಇನ್ನು ಕೆಲ ತಿಂಗಳ ಸಮಯ ಬೇಕಾಗಬಹುದು ಎಂಬುದು ನಿಜ.ಹೀಗಾಗಿಯೇ ಅವರು ಕಳೆದ ವಾರ ಕರ್ನಾಟಕಕ್ಕೆ ಬಂದವರು:ಇಲ್ಲಿನ ಗೊಂದಲಗಳಿಗೆ ಸ್ಥಳೀಯ ನಾಯಕರೇ ಕಾರಣ.ಹೀಗಾಗಿ ಅವರೇ ಇದನ್ನು ಬಗೆಹರಿಸಿಕೊಳ್ಳಲಿ ಎಂದು ಖಡಕ್ಕಾಗಿ ಹೇಳಿದ್ದಾರೆ.

ಅವರ ಮಾತು ಅಧಿಕಾರ ಹಂಚಿಕೆಗಾಗಿ ನಡೆಯುತ್ತಿರುವ ಬಣ ಬಡಿದಾಟಕ್ಕೆ ಕಡಿವಾಣ ಹಾಕಿದಂತಾಗಿದೆ ಎಂಬುದು ನಿಜ.

# ಪುಸ್ತಕೋದ್ಯಮದ ಬಿಕ್ಕಟ್ಟು

8ನೇ ಪುಟದಿಂದ

ನಾಡಿನ ಜನತೆಯನ್ನು ವೈಚಾರಿಕವಾಗಿ ಉನ್ನತ ಸ್ಥಾನಕ್ಕೆ ಒಯ್ಯುವುದಕ್ಕೆ ಸ್ವಾತಂತ್ರ್ಯಾನಂತರ ರಾಜ್ಯದಲ್ಲಿ ಅಸ್ತಿತ್ವಕ್ಕೆ ತಂದಿದ್ದ ವಯಸ್ಕರ ಶಿಕ್ಷಣ ಸಮಿತಿ ಅನಕ್ಷರತೆಯನ್ನು ತೊಡೆದು ಹಾಕುವುದಕ್ಕೆ ಪ್ರಾರಂಭದ ವರ್ಷಗಳಲ್ಲಿ ಶ್ರಮಿಸಿತ್ತು. ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆದು ಹದಿನಾಲ್ಕರಿಂದ ಮೂವತ್ತೈದು ವರ್ಷದವರಿಗೆ ಅಕ್ಷರಾಭ್ಯಾಸವನ್ನು ಮಾಡಿಸಿ ಕೆಲವು ಉಪಯುಕ್ತ ಸಾಹಿತ್ಯಕೃತಿಗಳನ್ನು ಓದುವಂತೆ ಗ್ರಾಮೀಣ ಭಾಗಗಳಲ್ಲಿ ಗ್ರಂಥಾಲಯಗಳನ್ನು ಆರಂಭಿಸಿತ್ತು. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಕೃತಿಗಳನ್ನು ನವ ಸಾಕ್ಷರರನ್ನು ಉದ್ದೇಶಿಸಿಯೇ ಬರೆಸಿ ಕಡಿಮೆ ದರದಲ್ಲಿ ಸಾರ್ವಜನಿಕರಿಗೆ ಪೂರೈಸುವುದರ ಜೊತೆಗೆ ಗ್ರಾಮೀಣ ಗ್ರಂಥಾಲಯಗಳಲ್ಲಿಯೂ ಅಂಥ ಕೃತಿಗಳು ಸಿಗುವಂತೆ ಸರ್ಕಾರ ಮಾಡಿತ್ತು. ಅಂಥ ಪದ್ಧತಿ ಕ್ರಮೇಣ ಸುಧಾರಣೆಗೊಂಡು ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿಯೂ ಸಾರ್ವಜನಿಕ ಗ್ರಂಥಾಲಯಗಳು ಈಗ ಅಸ್ತಿತ್ವಕ್ಕೆ ಬಂದಿವೆ. ಅವುಗಳಿಗಾಗಿಯೇ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿ ಪೂರೈಸುವ ಪ್ರಕಾಶಕರು ನಾಡಿನಲ್ಲಿ ಕೆಲವು ದಶಕಗಳ ವರೆಗೆ ಕ್ರಿಯಾಶೀಲರಾಗಿದ್ದರು.

ಮುದ್ರಣ ತಾಂತ್ರಿಕತೆಯಲ್ಲಿ ವ್ಯಾಪಕ ಸುಧಾರಣೆಗಳಾಗಿ, ಮೊಳೆಗಳನ್ನು ಜೋಡಿಸುವ ಪದ್ಧತಿ ಇತಿಹಾಸವನ್ನು ಸೇರಿ ಕಂಪ್ಯೂಟರ್ ಮೂಲಕ ಪಠ್ಯವನ್ನು ರಚಿಸುವುದಲ್ಲದೆ, ಪುಟ ವಿನ್ಯಾಸವನ್ನೂ ಮಾಡಿ ನೇರವಾಗಿ ಮುದ್ರಣ ಯಂತ್ರಕ್ಕೆ ಕಳುಹಿಸುವಂಥ ಕ್ರಾಂತಿಕಾರಕ ಸುಧಾರಣೆಗಳು ಬಂದ ಮೇಲೆ ಸಾಹಿತ್ಯ ಕೃತಿಗಳ ಪ್ರಕಟಣೆ ತ್ವರಿತವಾಯಿತು. ರಾಜ್ಯ ಸರ್ಕಾರವೂ ಸಾರ್ವಜನಿಕರ ಬೇಡಿಕೆಯನ್ನು ಅನುಸರಿಸಿ ಸಾರ್ವಜನಿಕ ಗ್ರಂಥಾಲಯಗಳನ್ನು ರಾಜ್ಯದಾದ್ಯಂತ ಆರಂಭಿಸಿತು. ಗ್ರಂಥಾಲಯಗಳಿಗೆ ಸಗಟು ಖರೀದಿಯ ಯೋಜನೆ ಆರಂಭವಾಗಿ ಅದರಲ್ಲಿ ಪುಸ್ತಕಗಳನ್ನು ಸರಬರಾಜು ಮಾಡುವುದು ಪ್ರಕಾಶಕರಿಗೆ ಅನುಕೂಲಕರವಾಯಿತು. ಸರ್ಕಾರದಿಂದ ಸಾಹಿತ್ಯಕೃತಿಗಳನ್ನು ಸಗಟು ಪ್ರಮಾಣದಲ್ಲಿ ಕೊಂಡು ವಿವಿಧ ಗ್ರಂಥಾಲಯಗಳಿಗೆ ಪೂರೈಸುವ ವ್ಯವಸ್ಥೆ ಸುಗಮವಾಗಿ ನಡೆಯುತ್ತಿತ್ತು. ನೂರಾರು ಪ್ರಕಾಶಕರು ನಾನಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿ ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರವಲ್ಲದೆ ಸಾರ್ವಜನಿಕರಿಗೂ ಸಿಗುವಂತೆ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡುವುದು ಒಂದು ಉದ್ಯಮದಂತೆ ಬೆಳೆಯತೊಡಗಿದ್ದು ನಾಡಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಮನಿಸಬೇಕಾದ ಬೆಳವಣಿಗೆಯಾಯಿತು.

ನಾಡಿನಲ್ಲಿ ಶಿಕ್ಷಣ ಸೌಲಭ್ಯಗಳು ವಿಸ್ತರಣೆಯಾಗಿ ಅಕ್ಷರ ಪ್ರಪಂಚಕ್ಕೆ ತೆರೆದುಕೊಂಡ ನೂರಾರು ಸಮುದಾಯಗಳ



ಸಾವಿರಾರು ವಿದ್ಯಾವಂತರು ಸಾಹಿತ್ಯ ಕೃಷಿಯಲ್ಲಿಯೂ ತೊಡಗುತ್ತಿದ್ದ ಪರಿಣಾಮ ಸಾಹಿತ್ಯ ಪ್ರಕಾಶನ ಪ್ರಪಂಚ ವಿಸ್ತಾರವಾಯಿತು. ಗ್ರಾಮೀಣ ಭಾಗಗಳಿಗೂ ಕಾಲಿರಿಸುವಷ್ಟು ಪ್ರಭಾವಿಯಾಯಿತು. ಆಧುನಿಕ ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡುವವರ ಸಂಖ್ಯೆ ಅಪರಿಮಿತವಾಗಿ ಬೆಳೆಯುತ್ತಿರುವುದು ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯ ನಿದರ್ಶನವಾಯಿತು. ಮುದ್ರಣ ತಾಂತ್ರಿಕತೆಯಲ್ಲಿ ಎಷ್ಟರ ಮಟ್ಟಿಗೆ ಬೆಳವಣಿಗೆಯಾಯಿತೆಂದರೆ ಬೆಳಗ್ಗೆ ಹಸ್ತಪ್ರತಿ ನೀಡಿದರೆ ಸಂಜೆಯ ಹೊತ್ತಿಗೆ ಮುದ್ರಿತ ಪುಸ್ತಕವನ್ನು ಒಯ್ಯುವುದು ಸಾಧ್ಯವಾಗುವಂತಾಯಿತು. ಸಾಹಿತ್ಯ ಕೃತಿಗಳನ್ನು ಓದುವವರ ಸಂಖ್ಯೆಯೂ ಹೆಚ್ಚಾಯಿತು. ಕೃತಿ ರಚನೆ, ಪ್ರಕಟಣೆ ಮತ್ತು ಮಾರುಕಟ್ಟೆಯನ್ನು ಒಳಗೊಂಡ ಪುಸ್ತಕೋದ್ಯಮ ರೂಪುಗೊಂಡಿತು.

ಕಳೆದ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಪ್ರಕಟಣ ಕ್ಷೇತ್ರಕ್ಕೆ ಬಂದ ಹಲವಾರು ಯುವ ಉತ್ಸಾಹಿಗಳು ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರವಲ್ಲದೆ ಪುಸ್ತಕ ವ್ಯಾಪಾರಿಗಳ ಮೂಲಕ ಸಾಹಿತ್ಯಪ್ರೇಮಿಗಳಿಗೂ ಪೂರೈಸುವ ಮೂಲಕ ತಮ್ಮದೇ ರೀತಿಯಲ್ಲಿ ಸಾಹಿತ್ಯ ಸೇವೆಯನ್ನು ಮಾಡುತ್ತಿದ್ದಾರೆ. ಪುಸ್ತಕಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತಂದಿದೆ. ರಾಜ್ಯದಲ್ಲಿ ಬರಹಗಾರರು, ಪ್ರಕಾಶಕರು ಮತ್ತು ಓದುಗರ ಮಧ್ಯೆ ಸಂಯೋಜನೆಯನ್ನು ರೂಪಿಸುವ




ಉದ್ದೇಶವನ್ನು ಪುಸ್ತಕ ಪ್ರಾಧಿಕಾರ ಆರಂಭದ ವರ್ಷಗಳಲ್ಲಿ ಹೊಂದಿತ್ತು. ಪುಸ್ತಕೋದ್ಯಮದ ಅಭಿವೃದ್ಧಿಯ ಜೊತೆಗೆ ಜನಸಾಮಾನ್ಯರು ಮತ್ತು ಯುವಜನರಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸುವ ಉದ್ದೇಶದಂತೆ ಹಲವು ಬಗೆಯ ಯೋಜನೆಗಳನ್ನೂ ಅದು ರೂಪಿಸಿಕೊಂಡಿದೆ.

ನಾಲ್ಕೈದು ವರ್ಷಗಳ ವರೆಗೆ ಆಯಾ ವರ್ಷದಲ್ಲಿ ಪ್ರಕಟವಾದ ಪುಸ್ತಕಗಳನ್ನು ಸಗಟು ಖರೀದಿಗಾಗಿ ಆಹ್ವಾನಿಸಿ ಅವುಗಳಲ್ಲಿ ಸಾರ್ವಜನಿಕರ ಓದಿಗೆ ಅರ್ಹವಾದ ಕೃತಿಗಳನ್ನು ಆಯ್ಕೆ ಮಾಡಿ ಸಗಟು ಲೆಕ್ಕದಲ್ಲಿ ಕೊಂಡು ಗ್ರಂಥಾಲಯಗಳಿಗೆ ಪೂರೈಸುವ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಸುಗಮವಾಗಿತ್ತು. ಒಂದು ವರ್ಷ ಪ್ರಕಟಿಸಿದ ಪುಸ್ತಕಗಳು ಅದೇ ವರ್ಷದ ಲೆಕ್ಕದಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಪೂರೈಸಲು ಆಯ್ಕೆಯಾಗುತ್ತಿದ್ದ ಕಾರಣ ಪ್ರಕಾಶಕರು ತಮ್ಮ ಹೂಡಿಕೆಯನ್ನು ಅದೇ ವರ್ಷದಲ್ಲಿ ಪಡೆಯುವುದು ಸಾಧ್ಯವಿತ್ತು. ಗ್ರಂಥಾಲಯದಿಂದ ಖಚಿತವಾಗಿ ಆಯ್ಕೆಯಾಗುವಂಥ ಗುಣಮಟ್ಟದ ಕೃತಿಗಳನ್ನು ಪ್ರಕಟಿಸುತ್ತಿದ್ದ ನೂರಾರು ಪ್ರಕಾಶಕರು ಅದನ್ನು ಉದ್ಯಮವಾಗಿ ಬೆಳೆಸುತ್ತಿದ್ದುದು ಗಮನಾರ್ಹವಾಗಿತ್ತು. ಈಚಿನ ವರ್ಷಗಳಲ್ಲಿ ಸಗಟು ಲೆಕ್ಕದಲ್ಲಿ ಪುಸ್ತಕಗಳನ್ನು ಕೊಳ್ಳುವುದಕ್ಕೆ ಸಾರ್ವಜನಿಕ ಇಲಾಖೆಯಲ್ಲಿ ಹಣದ ಕೊರತೆ ಇದೆ ಎನ್ನಲಾಗುತ್ತಿದ್ದು ನಗಟು ಖರೀದಿಗಾಗಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡುವಂತೆ ಸಾಹಿತ್ಯ ಕೃತಿಗಳ ಪ್ರಕಾಶಕರ ಸಂಘಟನೆ ಜನಪ್ರತಿನಿಧಿಗಳನ್ನೂ, ಅಧಿಕಾರಿಗಳನ್ನೂ ಭೇಟಿ ಮಾಡಿ ಮನವಿ ಸಲ್ಲಿಸುವ ಪರಿಸ್ಥಿತಿ ಈಗ ಎದುರಾಗಿದೆ. ಇದು ಪುಸ್ತಕೋದ್ಯಮದಲ್ಲಿ ಬಿಕ್ಕಟ್ಟಿನ ಸ್ವರೂಪ ಪಡೆದುಕೊಳ್ಳುತ್ತಿದೆ.

ಗ್ರಂಥಾಲಯಗಳಿಗೆ ಸಗಟು ಖರೀದಿಯನ್ನು ಅವಲಂಬಿಸದೆ ಮುಕ್ತವಾಗಿ ಸಾರ್ವಜನಿಕರನ್ನು ತಲುಪುವ ವ್ಯವಸ್ಥೆ ಮಾಡಿಕೊಂಡಿರುವ ಪ್ರಕಾಶಕರಿಗೆ ಓದುಗರ ಬೆಂಬಲ ಇರುವಂತೆ ತೋರುತ್ತದೆ. ಬೆಂಗಳೂರಿನಲ್ಲಿ ಮಾತ್ರವಲ್ಲದೆ, ರಾಜ್ಯದ ವಿವಿಧ ಕಡೆಗಳಲ್ಲಿ ಸಾಹಿತ್ಯ ಸಮ್ಮೇಳನಗಳು ನಡೆಯುವಾಗ ಪುಸ್ತಕ ಮಳಿಗೆಗಳನ್ನು ಇಟ್ಟುಕೊಳ್ಳುವ ಪ್ರಕಾಶಕರಿಗೆ ಅವರ ಪುಸ್ತಕಗಳ ವ್ಯಾಪಾರ ಚೆನ್ನಾಗಿ ಆಗುತ್ತಿರುವ ವರದಿಗಳಿವೆ. ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಅನುವಾಗುವಂತೆ ಪುಸ್ತಕ ಸಂತೆಗಳನ್ನು ಏರ್ಪಡಿಸಿದ ಸಂದರ್ಭದಲ್ಲಿಯೂ ಪ್ರಕಾಶಕರಿಗೆ ಓದುಗರ ಬೆಂಬಲ ಸಿಗುತ್ತಿದೆ. ವೀರಲೋಕ ಸಂಸ್ಥೆ ಎರಡು ವರ್ಷಗಳಿಂದ ಬೆಂಗಳೂರಿನ ಜಯನಗರದಲ್ಲಿ ವ್ಯವಸ್ಥೆ ಮಾಡಿದ ಮೂರು ದಿನಗಳ ಪುಸ್ತಕ ಸಂತೆಯಲ್ಲಿ ಹಲವು ಕೋಟಿ ರೂಪಾಯಿಯಷ್ಟು ವ್ಯಾಪಾರ ಆಗಿದ್ದುದು ಸಾಹಿತ್ಯ ಕೃತಿಗಳಿಗೆ ರಾಜ್ಯದಲ್ಲಿ ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಎಂಬುದರ ನಿದರ್ಶನವಾಗಿತ್ತು.

ಸಾರ್ವಜನಿಕರಿಗೆ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಒದಗಿಸುವುದಕ್ಕೆ ರಾಜ್ಯ ಸರ್ಕಾರ ವಿಶೇಷ ಅನುದಾನ ನೀಡುವ ಅವಶ್ಯಕತೆ ಇಲ್ಲದಂತೆ ಸ್ಥಳೀಯ ಸಂಸ್ಥೆಗಳು ಆಕರಿಸುವ ತೆರಿಗೆಯಲ್ಲಿ ಗ್ರಂಥಾಲಯ ಕರ ಎಂದು ಶೇ ಆರರಷ್ಟನ್ನು ಸಂಗ್ರಹ ಮಾಡುತ್ತಿವೆ. ಗ್ರಾಮಪಂಚಾಯಿತಿಗಳು ಹಾಗೂ ಇತರೆ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುತ್ತಿರುವ ತೆರಿಗೆಯಲ್ಲಿ ಗ್ರಂಥಾಲಯ ಕರವೂ ಸೇರಿರುವುದರಿಂದ ಅದನ್ನು ಪುಸ್ತಕಗಳ ಖರೀದಿಗೆ ಬಳಸುವುದಕ್ಕೆ ಸರ್ಕಾರ ಮುಂದಾದರೆ ಸಗಟು ಖರೀದಿಗೆ ವಿಶೇಷ ಅನುದಾನವನ್ನು ಕೋರುವ ಅವಶ್ಯಕತೆ ಬರಲಾರದು. ಸರ್ಕಾರದ ಸಂಬಂಧಿಸಿದ ವ್ಯಕ್ತಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರೆ ಪುಸ್ತಕೋದ್ಯಮ ಸದ್ಯಕ್ಕೆ ಎದುರಿಸುತ್ತಿರುವ ಬಿಕ್ಕಟ್ಟು ನಿವಾರಣೆಯಾಗುತ್ತದೆ.■

# 2026 ವರ್ಷದ ಹಾರ್ದಿಕ ಶುಭಾಶಯಗಳು

■ 6ನೇ ಪುಟದಿಂದ

2026 ರಲ್ಲಿ ಕನ್ನಡಿಗರ ಒಗ್ಗಟ್ಟಿಗೆ ಅಡ್ಡಿಯಾಗುವವರನ್ನು ದೂರವಿಡೋಣ. ಸ್ವಾರ್ಥಕ್ಕೆ ಸಂಘಟನೆಯನ್ನು ಬಳಸುವವರನ್ನು ಹೊರಹಾಕೋಣ. ಕನ್ನಡ ವಿರೋಧಿ ಶಕ್ತಿಗಳಿಗೆ ರಸ್ತೆಯಲ್ಲೇ ನಡು ಬೀದಿಯಲ್ಲೇ ಉತ್ತರ ಕೊಡೋಣ. ಕಾನೂನಿನ ಮಿತಿಯಲ್ಲಿ ಹೋರಾಟದ ತೀವ್ರತೆಯಲ್ಲಿ ಯಾವುದೇ ಸಂಧಾನ ಇಲ್ಲ. ಈ ವರ್ಷ ನಮ್ಮ ಸಂಕಲ್ಪ ಸ್ಪಷ್ಟವಾಗಿರಲಿ. ಕನ್ನಡಕ್ಕೆ ಅಪಮಾನವಾದರೆ ತಕ್ಷಣ ಪ್ರತಿಕ್ರಿಯೆ ಇರಲಿ. ಕನ್ನಡಿಗರ ಉದ್ಯೋಗಕ್ಕೆ ದ್ರೋಹವಾದರೆ ತೀಕ್ಷ್ಣ ಹೋರಾಟವಾಗಲಿ. ಈ ನೆಲದ ಲೂಟಿ ಕಂಡುಬಂದರೆ ಅಲ್ಲಿ ಜನಶಕ್ತಿ ಪ್ರದರ್ಶನವಾಗಲಿ. ಸಂಘಟನೆಯ ಪ್ರತಿ ಕಾರ್ಯಕರ್ತನೂ ಸೈನಿಕ; ಪ್ರತಿ ಹಳ್ಳಿ ಪಟ್ಟಣವೂ ನಮಗೆ ಹೋರಾಟದ ರಣರಂಗ. ಭಯಪಟ್ಟರೆ ನಮ್ಮ ಅಂತ್ಯ. ಮೌನವಾದರೆ ನಮ್ಮ ಮರಣ.

ಜೈ ಕನ್ನಡ – ಜೈ ಕರ್ನಾಟಕ■

# ಮತಾಂಧತೆಗೆ ಕೊನೆ ಎಂದು?

5ನೇ ಪುಟದಿಂದ

ಯಾರೋ ಪುಣ್ಯಾತ್ಮರು ಒಗ್ಗೂಡಿಸಿ ಈ ದೇಶದ ಪುಟ್ಟ ನೆಲದಲ್ಲಿ ನೂರಾರು ಕೋಟಿ ಜನ ಬಾಳಿ ಬದುಕುವಂತೆ ಮಾಡಿದ್ದಾರೆ. ಇಲ್ಲದಿದ್ದರೆ, ಶೈವ ವೈಷ್ಣವ ಅಂತಾನೋ ಆ ಪಂಥ ಈ ಪಂಥ ಅಂತಾನೋ ಕಿತ್ತಾಡಿಕೊಂಡು ಸಾಯುತ್ತಿದ್ದರು. ನನ್ನ ದೃಷ್ಟಿಯಲ್ಲಿ ಧರ್ಮಗಳ ಧ್ರುವೀಕರಣವೇ ಧರ್ಮಾಂಧತೆಗೇ ಮದ್ದು. ಒಳ್ಳೇದು ಯಾವ ಧರ್ಮದಿಂದಲಾದರು ಬರಲಿ, ಯಾವ ದೇಶದಿಂದಲಾದರು ಬರಲಿ, ಅಷ್ಟೇ ಏಕೆ ಬೇರೆ ಗ್ರಹದಿಂದ ಬಂದರೂ ಅಪ್ಪಿಕೊಳ್ಳೋಣ. ಸರ್ವೋತ್ತಮವಾದುದು ಎಲ್ಲರ ಮನದಲ್ಲೂ ಉದಯವಾಗಲಿ. ಇದನ್ನೇ ಗಾಂಧೀಜಿ ಸರ್ವೋದಯದಲ್ಲಿ ನಂಬಿಕೆ ಇಟ್ಟು ಈ ದೇಶಕ್ಕೆ ಜಾತ್ಯಾತೀತ ಸೊಗಡು ಕೊಟ್ಟರು. ಆದರೇ ಕೊಳಕು ರಾಜಕಾರಣಿಗಳು ಧರ್ಮಾಂಧರು ತಮ್ಮ ವಿಷ ಬೇರು ಬಿತ್ತಲು ಆರಂಭಿಸಿ, ಗಾಂಧಿಯನ್ನು ಇವತ್ತೂ ಖಳನಾಯಕನನ್ನಾಗಿಸಿ ಬಿಟ್ಟರು. ಏಕೆಂದರೆ, ಒಳ್ಳೆ ವಿಚಾರಗಳು ಯಾವ ಕಾಲಕ್ಕೂ ಕೆಟ್ಟ ಜನರಿಗೆ ಸಹ್ಯವಾಗುವುದಿಲ್ಲ.

ಹೀಗಾಗಿಯೇ ಅಲ್ಲವೇ ಮಹಮ್ಮದ್ ರನ್ನು ಮಕ್ಕಾದಿಂದ ಮದೀನಾಗೇ ಅಟ್ಟಿದವರು ಇದೇ ಜನ ಎಂಬ ಮೂಢರೇ ಅಲ್ಲವೇ, ಯೇಸುವನ್ನು ಶಿಲುಬೆಗೇ ಏರಿಸಿದ್ದು ಸಹ ಇದೇ ಜನ ಎಂಬ ಮೂರ್ಖರಲ್ಲವೇ. ಈಗ ಜಗತ್ತಿನಲ್ಲಿರುವ ಮತಾಂಧತೆ ಅಳಿದು ಮಾನವತೆ ಬೆಳೆಯ ಬೇಕಾದರೆ ಎಲ್ಲ ಅಡೆ ತಡೆ ಗಳನ್ನು ಒಡೆದು ಹಾಕಿ, ಧರ್ಮಗಳನ್ನು ಒಗ್ಗೂಡಿಸಬೇಕು. ಇಲ್ಲವೇ, ಮನುಷ್ಯರನ್ನು ಒಸಕಿ ಹಾಕುವ ಧರ್ಮಗಳ ಬಿಳಲುಗಳು ಕಾಲದಿಂದ ಕಾಲಕ್ಕೆ ದೈವ ರೂಪ ತಾಳುವ ಬದಲು, ದೆವ್ವದ ರೂಪ ತಾಳಿ, ಅದಿನ್ನೆಷ್ಟೋ ಅಮಾಯಕ ಜೀವಗಳನ್ನು ಕೊಲ್ಲುತ್ತಲೇ ಇರುತ್ತವೆ.

ಈ ಕಾರಣಕ್ಕೋ ಏನೋ ಭಾರತದಲ್ಲಿ ಆಸ್ತಿಕ ಧರ್ಮಗಳಿಗಿಂತ ನಾಸ್ತಿಕ ಧರ್ಮಗಳೇ ಹೆಚ್ಚು. ನಾಸ್ತಿಕ ವಿಚಾರವಾದದಿಂದಲೇ ಧರ್ಮಗಳ ವಿಲೀನಿಕರಣವಾದವು, ಆದರೇ ಜಾತಿಗಳ ಧೃವೀಕರಣವಾಗಲಿಲ್ಲ. ಹಾಗೇ ಆಗಿದ್ದರೆ, ಭಾರತ ಅಮೆರಿಕಾದಂತೆ ಬಲಿಷ್ಠವಾಗುತ್ತಿತ್ತು. ಸೋಜಿಗದ ಸಂಗತಿ ಎಂದರೆ, ಕಾಣದ ದೇವರಿಗೆ ಸಾವಿರಾರು ವರ್ಷಗಳಿಂದ ಮನುಷ್ಯ ಬಲಿಯಾಗುತ್ತಿದ್ದರೂ, ದೇವರಿದ್ದಾನೆ ಅನ್ನೋ ನಂಬಿಕೆ ಮಾತ್ರ ಬಲಿಯಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕುವೆಂಪು ಸಾರಿದ "ವಿಶ್ವ ಮಾನವ ಧರ್ಮ ಸಮ್ಮೇಳನ"ವನ್ನು ಮೈಸೂರಿನ ಟಿ.ನರಸೀಪುರ ತಾಲೂಕು ಬನ್ನೂರಿನ ಯಲಚೇನಹಳ್ಳಿಯಲ್ಲಿ ಶ್ರೀನಾದಾನಂದನಾಥ ಸ್ವಾಮೀಜಿ ನಡೆಸುತ್ತಿರುವುದು ಸಮಯೋಚಿಯತವಾಗಿದೆ. ಈ ಸಂತೋಷದ ವಿಚಾರವನ್ನು ತಿಳಿದು ಹಿರಿಯ ಸಾಹಿತಿ ಹಾಗೂ ಕನ್ನಡ ಕೈಂಕರ್ಯಕ್ಕೆ ಟೊಂಕಕಟ್ಟಿ ನಿಂತಿರುವ ಪ್ರೊ.ಮರುಳಸಿದ್ದಪ್ಪನವರು ಸಂಪೂರ್ಣ ಬೆಂಬಲವ್ಯಕ್ತಪಡಿಸಿ ಹೇಳಿಕೆ ನೀಡಿದ್ದಾರೆ. ಸಂದರ್ಭೋಚಿತವಾದ ಅವರ ಆಶಯ ನುಡಿಗಳು ಹೀಗಿವೆ.

"ದೇಶ,ಭಾಷೆ, ಜಾತಿ ಮತ್ತು ಧರ್ಮಗಳಂತಹ ಸೂಕ್ಷ್ಮ ವಿಚಾರಗಳನ್ನು ಇಂದು ಸ್ವಾರ್ಥಿಗಳು ದುರುಪಯೋಗ ಮಾಡಿಕೊಂಡು ಗುಂಪು ಹಿತಾಸಕ್ತಿಯನ್ನೇ ದ್ವೇಷದ ಸಾಧನವಾಗಿಸಿಬಿಟ್ಟಿದ್ದಾರೆ. ಮನುಷ್ಯ ಮನುಷ್ಯರ ನಡುವೆ ದಾಟಲಾರದಂತಹ ಕಂದಕಗಳನ್ನು ತೋಡುತ್ತಿದ್ದಾರೆ. ಸಂಕುಚಿತ ಹಿತಾಸಕ್ತಿಗಳನ್ನು ನಾವೆಲ್ಲ ಮೀರಲೇ ಬೇಕಾದ ಕಾಲ ಈಗ ಬಂದಿದೆ. ಕುವೆಂಪು ಪ್ರತಿಪಾದಿಸಿದ ವಿಶ್ವ ಮಾನವ ಪ್ರಜ್ಞೆಯ ದಾರಿ ದೀಪವನ್ನು ಹಿಡಿದುಕೊಂಡು, ಈ ಗಂಡಾತರಗಳಿಂದ ನಾವು ಪಾರಾಗಬಹುದು. ಕೃತಕ ಬುದ್ಧಿಮತ್ತೆಯು ಬೆಳೆದು, ಯಂತ್ರ ಮಾನವನ ಆಳ್ವಿಕೆಗೆ ಒಳಪಡುವ ಮುನ್ನ, ಯುದ್ಧ ರಹಿತ ದ್ವೇಷ ಮುಕ್ತ ಅಸ್ತಿತ್ವಕ್ಕೆ ಬರಲು ವಿಶ್ವ ಮಾನವತೆಯೊಂದೇ ದಾರಿ. ಬೂಟಾಟಿಕೆಯ ಧರ್ಮ ಗುರುಗಳಿಂದ ಕುತಂತ್ರಿ ರಾಜಕಾರಣಿಗಳಿಂದ ಮಾನವನನ್ನು ಉಳಿಸಲು ವಿಶ್ವ ಮಾನವತೆಯೊಂದೇ ಪರಿಹಾರ". ಎಂದಿದ್ದಾರೆ. ಇಂಥ ವಿಶ್ವ ಮಾನವ ಧರ್ಮ ಸಮ್ಮೇಳನ ಅಮೆರಿಕಾದ ಚಿಕಾಗೋ ನಗರದಲ್ಲಿ ಕ್ರಿ.ಶ.1893ರಲ್ಲಿ ನಡೆದಿತ್ತು. ಸ್ವಾಮಿವಿವೇಕಾನಂದರು ಹಿಂದೂ ಧರ್ಮದ ಪ್ರತಿನಿಧಿಯಾಗಿ ಭಾಗವಹಿಸಿ, ವಿಶ್ವ ಧರ್ಮಗಳ ನಡುವಿನ ಸಹಕಾರ ಮತ್ತು ವಿಶ್ವದ ಮಾನವರೆಲ್ಲರ ನಡುವಿನ ಭ್ರಾತೃತ್ವ ಪ್ರೇಮವನ್ನು ತಿಳಿಸಿ, ನೆರೆದಿದ್ದವರೆಲ್ಲರ ಮೆಚ್ಚುಗೆ ಸಂಪಾದಿಸಿದ್ದರು. ಆದರೆ, ಸ್ವಾಮಿ ವಿವೇಕಾನಂದರ ನಾಡು ಬಂಗಾಳ ದೇಶದಲ್ಲಿ ದಕ್ಷಿಣ ಏಷಿಯಾದಲ್ಲೇ ಅತಿ ಹೆಚ್ಚು ಹುಚ್ಚು ಉನ್ಮಾದಿಯ ಇಸ್ಲಾಮಿಕ್ ಮತಾಂಧತೆ ಮೆರೆಯುತ್ತಿರುವುದು ವಿಪರ್ಯಾಸ.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕು ಬನ್ನೂರಿನ ಯಲಚೇನಹಳ್ಳಿಯಲ್ಲಿ ಶ್ರೀನಾದಾನಂದನಾಥ ಸ್ವಾಮೀಜಿ ನಡೆಸುತ್ತಿರುವ "ವಿಶ್ವ ಮಾನವ ಧರ್ಮ ಸಮ್ಮೇಳನ" ಯಶಸ್ವಿಯಾಗಲಿ, ನಮ್ಮ ಹೆಮ್ಮೆಯ ರಾಷ್ಟ್ರಕವಿ ಕುವೆಂಪು ಪ್ರತಿಪಾದಿಸಿದ "ವಿಶ್ವ ಮಾನವ ಸಂದೇಶ" ಎಲ್ಲೆಡೆ ಮೊಳಗಲಿ. "ವಿಶ್ವ ಮಾನವ ಧರ್ಮ ಸಮ್ಮೇಳನ" ಪ್ರತಿ ಊರುಗಳಲ್ಲೂ ನಡೆದು ಜನರೆಲ್ಲ 'ಜಾತಿ-ಧರ್ಮ' ಎಂಬ ಒಟ್ಟು ತೂರಿ, 'ಮಾನವರೆಲ್ಲ ಒಂದೇ' ಎಂಬ ಸನ್ಮಾರ್ಗದಲ್ಲಿ ನಡೆಯಲಿ. ಯಲಚೇನಹಳ್ಳಿ ಶ್ರೀನಾದಾನಂದನಾಥ ಸ್ವಾಮೀಜಿ ಆರಂಭಿಸಿದ "ವಿಶ್ವ ಮಾನವ ಧರ್ಮ ಸಮ್ಮೇಳನ" ವಿಶ್ವಾದ್ಯಂತ ನಡೆದು ಮನುಕುಲ ಇನ್ನೂ ಮುಂದಾದರೂ ಸುಖ-ಶಾಂತಿ-ನೆಮ್ಮದಿಯಿಂದ ಬದುಕುವಂತಾಗಲಿ. ■

# ಡಾ.ರಾಜ್ ಕುರಿತು ಪಿಎಚ್.ಡಿ: ಭಾಗ್ಯಶ್ರೀ ವಿರಕ್ತಮಠ

9ನೇ ಪುಟದಿಂದ

ಮಾನವಿಕ ಶಾಸ್ತ್ರಗಳತ್ತ ವಿಶೇಷ ಆಸಕ್ತಿ ಹೊಂದಿದ್ದ ಇವರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿದ್ಯಾನಗರದಲ್ಲಿ ಬಿ.ಎ(ಇಂಗ್ಲಿಷ್) ಪದವಿಯನ್ನು 2017 ರಲ್ಲಿ ಡಿಸ್ಟಿಂಕ್ಷನ್‌ನೊಂದಿಗೆ ಪೂರ್ಣಗೊಳಿಸಿದರು. ನಂತರ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ,ಕಲಬುರಗಿಯಲ್ಲಿ ಎಂ.ಎ (ಇಂಗ್ಲಿಷ್) ಪದವಿಯನ್ನು 2019ರಲ್ಲಿ ಪ್ರಥಮ ದರ್ಜೆಯಲ್ಲಿ ಮುಗಿಸಿದ್ದಾರೆ. ಎಂ.ಎ ಹಂತದಲ್ಲಿಯೇ ಅವರ ಸಂಶೋಧನಾ ಚಿಂತನೆ ಸ್ಪಷ್ಟ ರೂಪ ಪಡೆದುಕೊಂಡಿತು. "ರೀವಿಸಿಟಿಂಗ್ ಕನ್ನಡ ಪೊಯಿಟಿಕ್ಸ್ : ಎ ರೀಡಿಂಗ್ ಆಫ್ ಶ್ರೀವಿಜಯಸ್ ಕವಿರಾಜಮಾರ್ಗ" ಎಂಬ ಶೀರ್ಷಿಕೆಯಲ್ಲಿ ಇವರು ಡೆಸರ್ಟೇಷನ್ ಮಂಡಿಸಿದ್ದು ಇಲ್ಲಿ ಇವರ ಕೇಂದ್ರ ಬಿಂದು ಶ್ರೀವಿಜಯನ 'ಕವಿರಾಜಮಾರ್ಗ' ಗ್ರಂಥದ ಪಠ್ಯ ಮತ್ತು ಅದರ ಸಾಂಸ್ಕೃತಿಕ–ಬೌದ್ಧಿಕ ಆಯಾಮಗಳ ಪುನರ್ವಿಮರ್ಶೆಯೇ ಆಗಿದೆ. ಇಂಗ್ಲಿಷ್ ಅಕಾಡೆಮಿಕ್ ವಲಯದಲ್ಲಿ ಕವಿರಾಜಮಾರ್ಗ ಕುರಿತ ಸಮಗ್ರ ಅಧ್ಯಯನಗಳು ವಿರಳವಾಗಿರುವ ಹಿನ್ನೆಲೆಯಲ್ಲಿ ಈ ಕೆಲಸ ಕನ್ನಡ ಅಧ್ಯಯನಕ್ಕೆ ಮಹತ್ವದ ಅಕಾಡೆಮಿಕ್ ಪ್ರಯತ್ನವೆಂದು ಗುರುತಿಸಬಹುದು.

ಪ್ರಸ್ತುತ ಇವರು ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿಯಲ್ಲಿಯೇ ಪ್ರೊ. ಬಸವರಾಜ ಪಿ.ಡೋಣೂರ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ ಸಂಶೋಧನೆಯನ್ನು ಮಾಡುತ್ತಿದ್ದಾರೆ. "ಫಾರ್ಮೇಷನ್ ಆಫ್ ಕನ್ನಡ ಐಡೆಂಟಿಟಿ ಇನ್ ದಿ ಸೆಲೆಕ್ಟ್ ಮೂವಿಸ್ ಆಫ್






ಡಾ.ರಾಜ್‌ಕುಮಾರ್: ಅ ಪೋಸ್ಟ್‌ಕೊಲೋನಿಯಲ್ ಸ್ಟಡಿ" (2019–ಇಲ್ಲಿಯವರೆಗೆ) ಎಂಬ ಇವರ ಸಂಶೋಧನಾ ವಿಷಯ ವಿಶಿಷ್ಟವೂ ಅಪರೂಪವೂ ಆಗಿದೆ.

ಕನ್ನಡ ಚಲನಚಿತ್ರಗಳ ಕುರಿತು ಸಾಕಷ್ಟು ಬರಹಗಳು ಲಭ್ಯವಿದ್ದರೂ, ವಿಶೇಷವಾಗಿ ಡಾ.ರಾಜ್‌ಕುವಾರ್ ಸಿನಿಮಾಗಳನ್ನು ಇಂಗ್ಲಿಷ್ ವಿಭಾಗದ ಅಕಾಡೆಮಿಕ್ ಚೌಕಟ್ಟಿನಲ್ಲಿ ವಸಾಹತೋತ್ತರ ದೃಷ್ಟಿಯಿಂದ ಕನ್ನಡ ಅಸ್ಮಿತೆಯ ಕಟ್ಟುವಿಕೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ ಅಧ್ಯಯನಗಳು ವಿರಳವಾಗಿವೆ. ಈ ಕೊರತೆ ಮನಗಂಡು ಸಿನಿಮಾ,ಭಾಷೆ ಮತ್ತು ಸಂಸ್ಕೃತಿಯ ನಡುವಿನ ಆಂತರಿಕ ಸಂಬಂಧವನ್ನು ವಿಶ್ಲೇಷಿಸುವುದು ಇವರ ಸಂಶೋಧನೆಯ ಪ್ರಮುಖ ಉದ್ದೇಶವಾಗಿದೆ.

ತಮ್ಮ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಹಾಗೂ ಕ್ಷೇತ್ರಜ್ಞಾನವನ್ನು ವಿಸ್ತರಿಸಿಕೊಳ್ಳಲು ಇವರು ಲಕ್ಷ್ಮಣ ಕೊಡಸೆ, ದೊಡ್ಡರಂಗೇಗೌಡ, ರಘುನಾಥ ಚ.ಹ., ನಾಗತಿಹಳ್ಳಿ ಚಂದ್ರಶೇಖರ ಸೇರಿದಂತೆ ಅನೇಕ ಖ್ಯಾತ ಲೇಖಕರು, ಚಿಂತಕರು ಮತ್ತು ಚಿತ್ರನಿರ್ದೇಶಕರೊಂದಿಗೆ ನೇರ ಸಂದರ್ಶನಗಳನ್ನು ನಡೆಸಿದ್ದಾರೆ. ಈ ಸಂವಾದಗಳು ಇವರ ಸಂಶೋಧನೆಗೆ ಪ್ರಾಯೋಗಿಕ ಹಾಗೂ ಸಾಂಸ್ಕೃತಿಕ ಆಳವನ್ನು ಒದಗಿಸಿವೆ.

ಅಕಾಡೆಮಿಕ್ ಬದುಕಿನ ಜೊತೆಗೆ ಸಂಗೀತ ಮತ್ತು ಚಿತ್ರಕಲೆ ಭಾಗ್ಯಶ್ರೀ ಅವರ ಜೀವಾಳವಾಗಿದೆ. ಇವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿ ಪಡೆದ ಗಾಯಕಿಯಾಗಿದ್ದು, 2008 ರಲ್ಲಿ ಜೂನಿಯರ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಚಿತ್ರಕಲೆಯಲ್ಲಿ ಬಾಲ್ಯದಿಂದಲೇ



ತೊಡಗಿಸಿಕೊಂಡು 2008 ರ ಲೋವರ್ ಹಾಗೂ 2010 ರ ಹೈಯರ್ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಸಾಧಿಸಿದ್ದಾರೆ.

2006ರಿಂದಲೇ ಅವರ ಸಂಗೀತ ಪ್ರದರ್ಶನದ ಪಯಣ ಶುರುವಾಗುತ್ತದೆ. 2006 ರಲ್ಲಿ ಬಿ.ಆರ್.ಅರಿಸಿನಗೋಡಿ ದತ್ತಿ ನಿಧಿ ಕಾರ್ಯಕ್ರಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಬಾಲ ಪ್ರತಿಭೆ–ಕಲಾಪ್ರತಿಭೋತ್ಸವ ಹಾಗೂ ಸುವರ್ಣ ಕರ್ನಾಟಕ ವರ್ಷಾಚರಣೆಯ ಬೇಂದ್ರೆ ಕಾವ್ಯ ಗಾಯನದಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. 2007 ರಲ್ಲಿ ಚಾಲುಕ್ಯ ಉತ್ಸವದಲ್ಲಿ ಬಾಲಕಲಾವಿದೆಯಾಗಿ ಭಾಗವಹಿಸಿದ್ದು, 2008 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು 2ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಗೀತ ಪ್ರದರ್ಶನ, 2009 ರಲ್ಲಿ ಚಾಲುಕ್ಯ ಉತ್ಸವದಲ್ಲಿ ಸಂಗೀತ ಕಾರ್ಯಕ್ರಮ ಇವರ ಸಾಂಸ್ಕೃತಿಕ ಪಯಣದ ಮೈಲಿಗಲ್ಲುಗಳು.2010–11–ವಿದ್ಯಾರ್ಥಿ–ವಿಜ್ಞಾನಿ ನೇರ ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, 2010 ರ ಕನ್ನಡ ರಾಜ್ಯೋತ್ಸವದಲ್ಲಿ ಗೀತ ಗಾಯನವೂ ಇವರ ಸಾಧನೆಗಳಲ್ಲಿ ಸೇರಿದೆ.




2006ರಲ್ಲಿ ಧಾರವಾಡ ಆಕಾಶವಾಣಿಯ "ಯುವಗೊಂಚಲು" ಕಾರ್ಯಕ್ರಮದಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದು, 2023ರಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಕಲಬುರಗಿ ಆಕಾಶವಾಣಿ ನಡೆಸಿದ "ವಿಕಸಿತ ಯುವಜನತೆ ವಿಕಸಿತ ಭಾರತ" ವಿಷಯದ ಮೇಲಿನ ವಿದ್ಯಾರ್ಥಿಗಳ ಜೊತೆಗಿನ ವಿಶೇಷ ಸಂದರ್ಶನದಲ್ಲಿ ಭಾಗವಹಿಸಿರುವುದು ಗಮನಾರ್ಹ.

ಇವರು ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಸೆಮಿನಾರ್‌ಗಳಲ್ಲಿ ವಿವಿಧ ವಿಷಯಗಳ ಮೇಲೆ ವಿಷಯ ಮಂಡಿಸಿದ್ದಾರೆ. ಯುಜಿಸಿ ಕೇರ್ ಹಾಗೂ ಪೀರ್–ರಿವಿವ್ಡ್ ಜರ್ನಲ್‌ಗಳಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. "ಧಾರವಾಡ ಕಟ್ಟೆ" ಎಂಬ ಸಾಂಸ್ಕೃತಿಕ–ಸಾಹಿತ್ಯಿಕ ಸಂಘಟನೆಯಲ್ಲಿ ಸದಸ್ಯರಾಗಿ ಅದರ ಆನ್‌ಲೈನ್ ಕಾರ್ಯಕ್ರಮಗಳ ನಿರೂಪಣೆ, ಪತ್ರಿಕಾ ವರದಿ ಬರವಣಿಗೆ ಮತ್ತು ರೆಕಾರ್ಡಿಂಗ್ ಇನ್ನಿತರ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.



ಈ ಎಲ್ಲ ಸಾಧನೆಗಳನ್ನು ಇವರು ವೈಯಕ್ತಿಕ ಶ್ರಮದ ಫಲ ಮಾತ್ರವೆಂದು ಪರಿಗಣಿಸುವುದಿಲ್ಲ. ತಮಗೆ ನೇರವಾಗಿ ಪಾಠ ಬೋಧಿಸಿದ ಶಿಕ್ಷಕರಷ್ಟೇ ಅಲ್ಲ, ಚಿಂತನೆಗೆ ದಿಕ್ಕು ನೀಡಿದ ಪರೋಕ್ಷ ಶಿಕ್ಷಕರು,ಮಾರ್ಗದರ್ಶಕರು ಮತ್ತು ಬೌದ್ಧಿಕ ಪ್ರೇರಣೆಯಾದ ಹಿರಿಯರ ಪಾತ್ರವೂ ತಮ್ಮ ಅಕಾಡೆಮಿಕ್ ಪಯಣದಲ್ಲಿ ನಿರ್ಣಾಯಕವಾಗಿದೆ ಎಂಬುದು ಅವರ ದೃಢ ನಂಬಿಕೆ. ಶಿಕ್ಷಣವನ್ನು ಕೇವಲ ಉದ್ಯೋಗದ ಸಾಧನವಾಗಿ ಅಲ್ಲ, ಸಮಾಜ,ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಅರ್ಥಮಾಡಿಕೊಳ್ಳುವ ಬೌದ್ಧಿಕ ಮಾರ್ಗವಾಗಿ ಕಾಣುವ ಈ ಯುವ ಸಂಶೋಧಕಿ ಕನ್ನಡ ಅಸ್ಮಿತೆಯ ಪ್ರಶ್ನೆಯನ್ನು ಇಂಗ್ಲಿಷ್ ಅಧ್ಯಯನದ ವಿಸ್ತೃತ ಚೌಕಟ್ಟಿನಲ್ಲಿ ಹೊಸದಾಗಿ ಆಲೋಚಿಸುವ ಪ್ರಯತ್ನದಲ್ಲಿದ್ದಾರೆ. ಅವರ ಸಂಶೋಧನಾ ಪಯಣವು ಮುಂದಿನ ದಿನಗಳಲ್ಲಿ ಕನ್ನಡ, ಸಿನಿಮಾ ಮತ್ತು ವಸಾಹತೋತ್ತರ ಅಧ್ಯಯನ ಕ್ಷೇತ್ರಗಳಿಗೆ ಮಹತ್ವದ ಬೌದ್ಧಿಕ ಕೊಡುಗೆ ನೀಡಲಿದೆ ಎಂಬ ನಿರೀಕ್ಷೆ ಇದೆ.

ಭಾಗ್ಯಶ್ರೀ ಅವರ ಸಂಶೋಧನೆ ಇದೇ ರೀತಿ ಮುಂದುವರಿಯಲ್ಲಿ. ಅವರ ಮುಂದಿನ ಭವಿಷ್ಯ ಉಜ್ವಲವಾಗಿ ಬೆಳಗಲಿ ಎಂದು 'ಕರ್ನಾಟಕ ರಕ್ಷಣಾ ವೇದಿಕೆ' ಹಾರೈಸುತ್ತದೆ.■



2026 ಹೊಸ ಕ್ಯಾಲೆಂಡರ್ ವರ್ಷದ
ಹಾರ್ದಿಕ ಶುಭಾಶಯಗಳು

ಇದ್ದದ್ದು ಇದ್ದಂತೆ

ಎಚ್.ಶಿವರಾಮೇಗೌಡರು

ಕರವೇ ವಾಹಿನಿ

ಮತಾಂಧತೆಗೆ
ಕೊನೆ ಎಂದು?

ಕನ್ನಡ ಕಹಳೆ

ಕ.ನ. ಚಂದ್ರಶೇಖರ




CHERRY
www.cherryagencies.com

# TYRE PARK

**NOW OPEN AT**

RAJAJI NAGAR- DR RAJKUMAR ROAD
YESWANTHAPUR- NEXT TO RNS MOTORS
CHIKKABIDARAKALLU-NH4

CAR
BIKE
SUPER BIKE
TYRES

3D WHEEL ALIGNMENT
NITROGEN
ALLOY WHEELS
WHEEL BALANCING
TUBELESS TYRE REPAIR
RIM BEND REMOVAL

99000 22154 99005 19518



ಟೈರ್ ಪಾರ್ಕ್

22 SHOWROOMS @

| Area | Outlet name |
|---|---|
| LALBAGH FORT ROAD | CHERRY's TYRE PARK |
| LALBAGH FORT ROAD | CHERRY AGENCIES PVT, LTD,.1ST FLOOR |
| A.M. ROAD | CHERRY AGENCIES PVT, LTD,. |
| J.C. ROAD | CHERRY's B F H |
| J.C. ROAD | CHERRY's SHREEJI IMPEX |
| J.C. ROAD | CHERRY's TYRE PARK |
| H.SIDDIAH ROAD | CHERRY's TYRE PARK |
| KALASIPALYA | CHERRY's POLO AGENCIES |
| K.H. ROAD | CHERRY's TYRE PARK |
| B.T.M. LAYOUT | CHERRY's TYRE PARK |
| JAYANAGAR 4TH BLOCK | CHERRY's TYRE PARK |
| JAYANAGAR 9TH BLOCK | CHERRY's TYRE PARK |
| BANNERGHATTA ROAD | CHERRY's TYRE PARK |
| KANAKAPURA MAIN RD- SARAKKI | CHERRY's TYRE PARK |
| ELECTRONIC CITY- HOSUR ROAD | CHERRY's TYRE PARK |
| KASTURBA ROAD | CHERRY's TYRE PARK |
| RAJAJINAGAR- DR RAJ KUMAR RD | CHERRY's TYRE PARK |
| INDIRANAGAR | CHERRY's TYRE PARK |
| YESWANTHAPUR | CHERRY's TYRE PARK |
| CHIKKABIDARAKALLU-NH4 | CHERRY's TYRE PARK |
| NAVI MUMBAI | CHERRY's HOUSE OF TYRES |
| MYSORE | CHERRY's TYRE PARK |

CORPORATE OFFICE
Cherry Agencies Pvt Ltd,.
#115, Lalbagh Fort Road, Near Minerva Circle, bangalore-560004
Tel. 080-65 34 34 65, 65 63 63 65 Fax: 080-22428706
Website : www.cherryagencies.com, email: info@cherryagencies.com, tyres@cherryagencies.com

# ಶ್ರೀ ವಾಸವಿ ಕಾಂಡಿಮೆಂಟ್ಸ್

ಗುಣಮಟ್ಟವುಳ್ಳ ಖಾದ್ಯಗಳ ತಯಾರಕರು.ಶುಚಿ ರುಚಿ ವೈವಿಧ್ಯ ತಿಂಡಿ ತಿನಿಸುಗಳನ್ನು ಮದುವೆ ಮತ್ತು ಸಮಾರಂಭಗಳಿಗೆ ಮುಂಗಡವಾಗಿ ಕಾದಿರಿಸಿದರೆ ಯಾವುದೇ ತಿಂಡಿ ಪದಾರ್ಥಗಳನ್ನು ರುಚಿಯಾಗಿ ಮಾಡಿಕೊಡಲಾಗುತ್ತದೆ.







ನಂ.415/68, 9ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - 40. ದೂ-23501620/23507512
ನಂ.588, ಮಧುವನ ಹೋಟೆಲ್ ಎದುರು, ಅವೆನ್ಯೂ ರಸ್ತೆ, ಬೆಂಗಳೂರು -02



KARNATAKA RAKSHANAA VEDIKE DATE OF PUBLICATION: 1ST OF EVERY MONTH KANNADA MONTHLY RS.15/- RNI: KARKAN/2008/26245 (98802) REGISTERED NO.KA/BGW-1614/2017-19
JANUARY 2026 LICENSED TO POST WITHOUT PRE-PAYMENT WPP-220. POSTED AT MYSORE ROAD, BG PSO BENGALURU-26 ON 06TH OR 9TH OF EVERY MONTH

EDITED, PRINTED, PUBLISHED BY KA. N A. CHANDRASHEKAR. # 1673/A, 2ND CROSS, PRAKASHNAGAR, BANGALORE-560021,
PRINTED AT: PATEL PRINTERS & PUBLISHERS, NO.1673/A, 2ND CROSS, PRAKASHNAGAR, BANGALORE-560021.